ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 30 | ಜುಲೈ 23–29, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಹಿಂದುತ್ವದ ದಾಳಿಗೊಳಗಾದ ಹಿಂದೂ ಸನ್ಯಾಸಿ

ಸ್ವಾಮಿ ಅಗ್ನಿವೇಶ್











ಆಹಾರ ಭದ್ರತೆ ಬದಲು 'ಆಧಾರ್' ಸಾವುಗಳು



ಭವಿಷ್ಯಕ್ಕೆ ವಿಜ್ಞಾನದ ಬೆಳಕಿನ ಬದಲು 'ಭೂತ'ದ ಹಿರಿಮೆಗಳು



ಅಮೆರಿಕದ ಎದುರು ಕುಗ್ಗುತ್ತಿರುವ 56" ಎದೆ

'ಬಸ್ ಪಾಸ್ ಸಿಗಲೇಬೇಕು' ಮತ್ತೆ ಕೂಗು



UGC ⟶ HECI : ತಪ್ಪು ದಿಕ್ಕನ್ನೇ ಅಪೇಕ್ಷಿತ ದಿಕ್ಕು ಮಾಡಲು

ಕಣ್ಣೀರು ಹಾಕುವುದಲ್ಲ... ಒರೆಸಬೇಕು



ಪ್ರಸಕ್ತ ಸಂಸತ್ ಅಧಿವೇಶನದಲ್ಲಿ 'ದೊಂಬಿ ಹೊಡೆದು ಸಾಯಿಸು'ವುದನ್ನು ನಿಲ್ಲಿಸಲು ಕಾನೂನು ತರಬೇಕು

ಸ್ವಾಮಿ ಅಗ್ನಿವೇಶ್ ಮೇಲೆ ಹಲ್ಲೆ ಮಾಡಿದವರನ್ನು ತಕ್ಷಣವೇ ಶಿಕ್ಷಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಸ್ವಾಮಿ ಅಗ್ನಿವೇಶ್‌ರವರ ಮೇಲೆ ಝಾರ್ಖಂಡ್‌ನ ಪಕುರ್‌ನಲ್ಲಿ ಅಮಾನುಷ ಹಲ್ಲೆ ನಡೆದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ತಪ್ಪಿತಸ್ಥರು ಬಿಜೆಪಿ ಯುವ ಮೋರ್ಚಕ್ಕೆ ಸೇರಿದವರು ಎಂದು ಗುರುತಿಸಲಾಗಿದೆ. ಈಗ ಸಾಮಾನ್ಯ ಸಂಗತಿಯಾಗಿರುವಂತೆ ಬಿಜೆಪಿ ರಾಜ್ಯ ಸರಕಾರ ಅವರೊಂದಿಗೆ ಅತ್ಯಂತ ಮೃದುವಾಗಿ ವರ್ತಿಸುತ್ತದೆ ಎಂದೇ ನಿರೀಕ್ಷಿಸಬಹುದು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಮಿ ಅಗ್ನಿವೇಶರಿಗೆ ಸರಿಯಾದ ಮತ್ತು ಸೂಕ್ತ ಮಟ್ಟದ ವೈದ್ಯಕೀಯ ಗಮನ ಒದಗಿಸಬೇಕು ಮತ್ತು ಅಪರಾಧಿಗಳನ್ನು ತಕ್ಷಣವೇ ಶಿಕ್ಷಿಸಬೇಕು ಎಂದು ಆಗ್ರಹಿಸಿದೆ.

ಸ್ವಾಮಿ ಅಗ್ನಿವೇಶ್‌ರ ಮೇಲೆ ಈ ಹಲ್ಲೆ, ದೇಶದ ಸರ್ವೋಚ್ಚ ನ್ಯಾಯಾಲಯ ಜನಜಂಗುಳಿಯ ಹಿಂಸಾಚಾರದ ಬಗ್ಗೆ ತೀವ್ರ ದೋಷಾರೋಪಣೆ ಮಾಡಿದ್ದರೂ ನಡೆದಿದೆ. ದೊಂಬಿ ಮಾಡಿ ಹೊಡೆದು ಸಾಯಿಸುವುದರ ಬಗ್ಗೆ ಸುಪ್ರಿಂ ಕೋರ್ಟಿನ ವೀಕ್ಷಣೆಗಳು ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಕೇಂದ್ರ ಸರಕಾರಕ್ಕೆ ಹಿಡಿದ ಕನ್ನಡಿಯಾಗಿದೆ, ಇವರ ಕಣ್ಣೆದುರೇ ಈ ಅಪರಾಧಗಳು ನಡೆಯುತ್ತಿವೆ, ಮತ್ತು ಖಾಸಗಿ ಸೇನೆಗಳದ್ದೇ ರಾಜ್ಯಭಾರ ನಡೆಯಲು ಅವಕಾಶ ನೀಡಲಾಗಿದೆ. ಅಪರಾಧಿಗಳನ್ನು ಗುರುತಿಸಿದರೂ ಅವರಿಗೆ ಶಿಕ್ಷೆಯಾಗುವುದಿಲ್ಲ ಎಂಬುದು ಅವರಿಗೆ ಆರೆಸ್ಸೆಸ್/ಬಿಜೆಪಿಯ ಕೃಪಾಪೋಷಣೆಯ ಬಗ್ಗೆ ಬಹಳಷ್ಟು ಹೇಳುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

"ಜಾತ್ಯತೀತ ಹಂದರವನ್ನು ರಕ್ಷಿಸಲು ಮತ್ತು ದೊಂಬಿ–ಆಳ್ವಿಕೆಯನ್ನು ತಡೆಯುವಂತೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಪ್ರಭುತ್ವದ ಕರ್ತವ್ಯ" ಎಂದಿರುವ ಸುಪ್ರಿಂ ಕೋರ್ಟಿನ ತೀರ್ಪನ್ನು ಅನುಸರಿಸಿ ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವ ಒಂದು ಸಮಗ್ರವಾದ ಕಾನೂನನ್ನು ತರಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ಜನಾಧಿಕಾರ ಆಂದೋಲನದ ಖಂಡನೆ–ಪ್ರತಿಭಟನೆ: "ಪ್ರಧಾನಿಗಳು ಕ್ಷಮೆ ಕೋರಬೇಕು, ದೊಂಬಿ–ಹಿಂಸಾಚಾರ ತಡೆಯಲು ಕಾನೂನು ತರಬೇಕು"

ಜುಲೈ 17ರಂದು ಬಿಜೆಪಿ ಆಳ್ವಿಕೆಯ ಝಾರ್ಖಂಡ್ ರಾಜ್ಯದ ಪಕುರ್ ಜಿಲ್ಲೆಯಲ್ಲಿ ಒಂದು ಮೂಲನಿವಾಸಿ ಬುಡಕಟ್ಟು ಸಂಘಟನೆ ಏರ್ಪಡಿಸಿದ್ದ ಒಂದು ಕಾರ್ಯಕ್ರಮಕ್ಕೆ ಬಂದಿದ್ದ ಸ್ವಾಮಿ ಅಗ್ನಿವೇಶ್‌ರವರ ಮೇಲೆ ಭಾರತೀಯ ಜನತಾ ಯುವ ಮೋರ್ಚ–ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಅಮಾನುಷ ಹಲ್ಲೆ ನಡೆಸಿದ್ದಾರೆ ಎಂದು ಜನ ಏಕತಾ ಜನ ಅಧಿಕಾರ್ ಆಂದೋಲನ(ಜೆಇಜೆಎಎ) ಬಲವಾಗಿ ಖಂಡಿಸಿದೆ. ಈ ಕಾರ್ಯಕ್ರಮದ ಬಗ್ಗೆ ಸಂಘಟಕರು ಪೋಲೀಸರಿಗೆ ಮೊದಲೇ ತಿಳಿಸಿದ್ದರೂ ಮತ್ತು ಭಾರತೀಯ ಜನತಾ ಯುವ ಮೋರ್ಚ ಒಂದು ಪ್ರತಿಭಟನೆ ಎಂಬುದನ್ನು ಅಲ್ಲಿ ನಡೆಸಿದ್ದರೂ ಹಲ್ಲೆಯನ್ನು ತಡೆಯಲು ಅಲ್ಲಿ ಪೋಲೀಸರೇ ಇರಲಿಲ್ಲ ಎಂಬುದು ಆಘಾತಕಾರಿ ಎಂದು ಅದು ಹೇಳಿದೆ.

ಇದು ವಿಚಾರವಾದಿಗಳ ಹತ್ಯೆಗಳು, ಜನಜಂಗುಳಿ ಹೊಡೆದು ಸಾಯಿಸುವುದು, ಮತ್ತು ಹಿಂದು ಕೋಮುವಾದಿ ಮತಾಂಧರಿಂದ 'ಸಾಮಾಜಿಕ ಕಾರ್ಯಕರ್ತರ ಮೇಲೆ ದೈಹಿಕ ಹಲ್ಲೆಗಳ ಸರಣಿಗೆ ಒಂದು ಹೊಸ ಸೇರ್ಪಡೆ. ಈ ಹಲ್ಲೆ ಆರೆಸ್ಸೆಸ್‌ನ ಪಿತೂರಿಯಂತೆ ಕಾಣಿಸುತ್ತಿದ್ದು ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು ಎಂದು ಜೆಇಜೆಎಎ ಆಗ್ರಹಿಸಿದೆ.

ಇನ್ನೂ ಆಘಾತಕಾರಿ ಸಂಗತಿಯೆಂದರೆ, ಸ್ವಾಮಿ ಅಗ್ನಿವೇಶರ ಚಟುವಟಿಕೆಗಳನ್ನು ನೋಡಿದರೆ ಈ 'ಪ್ರತಿಕ್ರಿಯೆ'ಗೆ ಆಶ್ಚರ್ಯ ಪಡಬೇಕಾಗಿಲ್ಲೆಂದು ಬಿಜೆಪಿ ವಕ್ತಾರರೇ ಹೇಳಿಕೆ ನೀಡಿರುವುದು. ಸಾಮಾಜಿಕ ಕಾರ್ಯಕರ್ತ ಮತ್ತು ಅಧ್ಯಯನಕಾರ ಜೀನ್ ಡ್ರೀಝ್ ಭಾಷಣ ಮಾಡುತ್ತಿದ್ದಾಗ ಝಾರ್ಖಂಡ್‌ನ ಬಿಜೆಪಿ ಕೃಷಿಮಂತ್ರಿಯೇ ಅಡ್ಡಿ ಪಡಿಸಿದ್ದರು ಎಂಬುದನ್ನೂ ಜೆಇಜೆಎಎ ಈ ಸಂದರ್ಭದಲ್ಲಿ ನೆನಪಿಸಿದೆ.

ತಪ್ಪಿತಸ್ಥರನ್ನೆಲ್ಲ ತಕ್ಷಣವೇ ಬಂಧಿಸಬೇಕು ಮತ್ತು ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ತಮ್ಮ ಕರ್ತವ್ಯದಲ್ಲಿ ವಿಫಲರಾಗಿರುವ ಪೋಲಿಸರ ಮೇಲೂ ಕ್ರಮ ಕೈಗೊಳ್ಳಬೇಕು ಎಂದು ಜೆಇಜೆಎಎ ಆಗ್ರಹಿಸಿದೆ.

ಇದು, ಪ್ರಭುತ್ವ–ಪ್ರಾಯೋಜಿತ ಅಸಹಿಷ್ಣುತೆಯ ಕಾರ್ಯಾಚರಣೆ ಮತ್ತು ಭವ್ಯ ಪರಂಪರೆಯಿರುವ ಈ ದೇಶದ ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಮೇಲೆ ದಾಳಿಗಳ ಮತ್ತೊಂದು ಉದಾಹರಣೆ. ಹಿಂದುತ್ವ ಶಕ್ತಿಗಳು ಕಾವಿ ತೊಟ್ಟಿರುವ ಸನ್ಯಾಸಿಯನ್ನೂ, ಆತ ಅವರ ಸಿದ್ಧಾಂತಗಳನ್ನು ಬೋಧಿಸುವುದಿಲ್ಲ ಎಂಬ ಕಾರಣಕ್ಕೆ ಸಹಿಸಿಕೊಳ್ಳಲು ಸಿದ್ಧರಿಲ್ಲ. ಈ ಹಲ್ಲೆಯ ಬಗ್ಗೆ ತಮ್ಮ ಮೌನಕ್ಕೆ ಪ್ರಧಾನ ಮಂತ್ರಿಗಳು ಕ್ಷಮೆ ಕೋರಬೇಕು ಎಂದೂ ಜೆಇಜೆಎಎ ಆಗ್ರಹಿಸಿದೆ.

ಇದರ ಹಿಂದಿನ ದಿನವಷ್ಟೇ ಸುಪ್ರಿಂ ಕೋರ್ಟ್ ಕೂಡ ದೊಂಬಿ ಮಾಡಿ ಹೊಡೆದು ಸಾಯಿಸುವುದನ್ನು ಒಂದು ಪ್ರತ್ಯೇಕ ಅಪರಾಧವಾಗಿ ಪರಿಗಣಿಸಿ ಹೊಸದೊಂದು ಕಾನೂನನ್ನು ಸಂಸತ್ತು ತರಬೇಕು ಎಂದು ನಿರ್ದೇಶಿಸಿದೆ. ಇದು ಮೋದಿ ಸರಕಾರ ನಾಗರಿಕರ ಜೀವರಕ್ಷಣೆಯಲ್ಲಿ ವಿಫಲವಾಗಿರುವುದನ್ನು ತೋರಿಸುತ್ತದೆ ಎಂದಿರುವ ಜನೇಕತಾ ಜನ ಅಧಿಕಾರ್ ಆಂದೋಲನ, ಭಿನ್ನ ದನಿಗಳನ್ನು ಅಡಗಿಸಲು ದೊಂಬಿ ಹಿಂಸಾಚಾರವನ್ನು ಪ್ರತಿಪಾದಿಸುವ ಆರೆಸ್ಸೆಸ್–ಬಿಜೆಪಿ ವಿರುದ್ಧ ಪ್ರತಿಭಟನೆ ನಡೆಸಬೇಕು, ಎಂದು ದೇಶದ ನಾಗರಿಕರಿಗೆ ಕರೆ ನೀಡಿದೆ, ಮೋದಿ ರಾಜ್ಯದಲ್ಲಿ ಯಾವ ನಾಗರಿಕರೂ ಸುರಕ್ಷಿತವಾಗಿಲ್ಲ ಎಂದು ಅದು ಹೇಳಿದೆ.

ನವಂಬರ್‌ನಲ್ಲಿ ಮೂರು ದಿನಗಳ 'ಕಿಸಾನ್ ಮುಕ್ತಿ ಲಾಂಗ್ ಮಾರ್ಚ್'

ರೈತರ ಬೇಡಿಕೆಗಳ ಮೇಲೆ 10 ಕೋಟಿ ಸಹಿಸಂಗ್ರಹ ಚಳುವಳಿ–ಎಐಕೆಎಸ್ ಕರೆ

ನವಂಬರ್ ತಿಂಗಳಲ್ಲಿ ದೇಶದ ಎಲ್ಲೆಡೆಗಳಿಂದ 190ಕ್ಕೂ ಹೆಚ್ಚು ರೈತ ಸಂಘಟನೆಗಳು ಮೂರು ದಿನಗಳ ಲಾಂಗ್ ಮಾರ್ಚ್ ನಡೆಸುತ್ತಾರೆ. ನವ–ಉದಾರವಾದಿ ಆಳ್ವಿಕೆಯಲ್ಲಿ ರೈತರ ಆತ್ಮಹತ್ಯೆಗಳನ್ನು ತಡೆಯಲು ಕೃಷಿ ಧೋರಣೆಯಲ್ಲಿ ತೀವ್ರಗಾಮಿ ಬದಲಾವಣೆಗಳನ್ನು ತರಬೇಕೆಂದು ಆಗ್ರಹಿಸಿ ಈ ಲಾಂಗ್ ಮಾರ್ಚ್ ನಡೆಯಲಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ್ ಧವಳೆ ಹೇಳಿದ್ದಾರೆ.

ಅವರು ತಮಿಳುನಾಡಿನ ರಾಜಪಾಳಯಂ ನಲ್ಲಿ ಜುಲೈ 18 ರಿಂದ 20 ರ ವರೆಗೆ ನಡೆದ ಅಖಿಲ ಭಾರತ ಕಿಸಾನ್ ಮಂಡಳಿಯ ಸಭೆಯ ನಂತರ ಮಾತನಾಡುತ್ತಿದ್ದರು.

ಕಿಸಾನ್ ಮಂಡಳಿ ರೈತರ ಬೇಡಿಕೆಗಳ ಪಟ್ಟಿಯನ್ನು ಬೆಂಬಲಿಸಿ ದೇಶದಾದ್ಯಂತದಿಂದ 10 ಕೋಟಿ ಸಹಿ ಸಂಗ್ರಹ ಚಳುವಳಿಗೂ ಕರೆ ನೀಡಿದೆ.

"ರೈತರ ಸಮಗ್ರ ವೆಚ್ಚದ ಮೇಲೆ 50% ಪ್ರತಿಫಲದ ಸೂತ್ರದ ಆಧಾರದಲ್ಲಿ ಕನಿಷ್ಟ ಬೆಂಬಲ ಬೆಲೆಗಳನ್ನು ನಿಗದಿ ಮಾಡಬೇಕು ಎಂಬ ಎಂ ಎಸ್ ಸ್ವಾಮಿನಾಥನ್ ಸಮಿತಿಯ ಶಿಫಾರಸನ್ನು ಜಾರಿಗೆ ತರಬೇಕು. ನರೇಂದ್ರ ಮೋದಿ ಸರಕಾರ ಇತ್ತೀಚೆಗೆ ಪ್ರಕಟಿಸಿರುವ ಎಂಎಸ್‌ಪಿ ಸಮಿತಿಯ ಶಿಫಾರಸಿನ ಹತ್ತಿರವೂ ಬರುವುದಿಲ್ಲ. ಅದೊಂದು ದೊಡ್ಡ ಮೋಸ" ಎಂದು ಧವಳೆ ಹೇಳಿದರು.

ಎಐಕೆಸಿ 60ವರ್ಷ ದಾಟಿದ ಎಲ್ಲ ರೈತರಿಗೆ ಮತ್ತು ಕೃಷಿಯಲ್ಲಿ ತೊಡಗಿರುವವರಿಗೆ 5000ರೂ. ಪೆನ್ಶನ್ ಕೊಡಬೇಕು ಎಂದೂ ಆಗ್ರಹಿಸಿದೆ. ರೈತರಿಗೆ ತಮ್ಮ ಭೂಮಿಯ ಮೇಲೆ ಹಕ್ಕು ಇರಬೇಕು, ಭೂಮಿಯನ್ನು ರೈತರಿಂದ ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳುವುದು ನಿಲ್ಲಬೇಕು ಎಂದು ಒತ್ತಾಯಿಸಿದೆ.

"ಚೆನ್ನೈ–ಸೇಲಂ ಗ್ರೀನ್‌ಫೀಲ್ಡ್ ಕಾರಿಡಾರ್ ವಿಷಯದಲ್ಲಿ ರಾಜ್ಯ ಸರಕಾರ ರೈತರು ತಮ್ಮ ಫಲವತ್ತಾದ ಜಮೀನುಗಳನ್ನು ಬಿಟ್ಟುಕೊಡುವಂತೆ ಬಲವಂತ ಮಾಡುತ್ತಿದೆ. ಗುಜರಾತ್ ಮತ್ತು ಮಹಾರಾಷ್ಟ್ರದ ಬುಲೆಟ್ ರೈಲು ಪ್ರಾಜೆಕ್ಟ್‌ನಲ್ಲೂ ಇದೇ ಕತೆ" ಎಂದು ಅಶೋಕ ಧವಳೆ ಹೇಳಿದರು.

ಸರಕಾರ ಭೂಸುಧಾರಣೆಗಳನ್ನು ಕೈಗೆತ್ತಿಕೊಂಡು ಭೂಹೀನ ರೈತರಿಗೆ ಭೂಮಿ ಒದಗಿಸಬೇಕು.

ಒಂದು ಸಮಗ್ರ ಬೆಳೆ ವಿಮಾ ಯೋಜನೆ ರೈತರ ಮತ್ತೊಂದು ಬೇಡಿಕೆ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ ಒಂದು ದೊಡ್ಡ ಕಪಟನಾಟಕ. ಅದು ಕಾರ್ಪೊರೇಟ್ ವಿಮಾ ಕಂಪನಿಗಳಿಗೆ ನೆರವಾಗಿದೆಯಷ್ಟೇ, ರೈತರಿಗಲ್ಲ. ರೈತರಿಗೆ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಅವರು ತೆತ್ತಿರುವ ಪ್ರೀಮಿಯಂ ಹಣದ 10% ದಷ್ಟೂ ರಕ್ಷಣೆ ಸಿಗುತ್ತಿಲ್ಲ ಎಂದು ಧವಳೆ ಹೇಳಿದರು.

ಆಗಸ್ಟ್ 9ರಂದು, ಕ್ವಿಟ್ ಇಂಡಿಯಾ ಚಳುವಳಿಯ ವಾರ್ಷಿಕೋತ್ಸವದಂದು, 'ಕ್ವಿಟ್ ಇಂಡಿಯಾ' ಪ್ರತಿಭಟನೆ ನಡೆಸಲು ಎಐಕೆಸಿ ನಿರ್ಧರಿಸಿದೆ. ಎಐಕೆಎಸ್ ಮತ್ತು ಸಿಐಟಿಯು ಸದಸ್ಯರು ಒಟ್ಟಾಗಿ ಇದನ್ನು ಆಚರಿಸಲಿದ್ದಾರೆ. 400ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ದೊಡ್ಡ ರ್‍ಯಾಲಿಗಳು ನಡೆಯಲಿವೆ. ಪ್ರಧಾನ ಮಂತ್ರಿಗಳನ್ನು ಉದ್ದೇಶಿಸಿ ರೈತರು ಸಹಿ ಹಾಕಿದ ಮನವಿ ಪತ್ರಗಳನ್ನು ಜಿಲ್ಲಾ ಕಲೆಕ್ಟರ್‌ಗಳಿಗೆ ಅಂದು ಸಲ್ಲಿಸಲಾಗುವುದು. ಅಂದು 'ಜೈಲ್ ಭರೋ' ಚಳುವಳಿಯೂ ಇರುತ್ತದೆ.


ಸಪ್ಟಂಬರ್‌ನಲ್ಲಿ ಎಐಕೆಎಸ್, ಸಿಐಟಿಯು ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ 15 ಬೇಡಿಕೆಗಳ ಮೇಲೆ ದಿಲ್ಲಿಯಲ್ಲಿ ಕಿಸಾನ್ ಸಂಘರ್ಷ ರ್‍ಯಾಲಿ ನಡೆಸುತ್ತಾರೆ.


ಈ ಹೋರಾಟಗಳ ಸರಣಿ ದಿಲ್ಲಿಯಲ್ಲಿ 'ಕಿಸಾನ್ ಮುಕ್ತಿ ಲಾಂಗ್ ಮಾರ್ಚ್'ನೊಂದಿಗೆ ಮುಕ್ತಾಯ ಗೊಳ್ಳುತ್ತದೆ. ದುಡಿಯುವ ವರ್ಗ ಹತ್ತು ದಿಕ್ಕುಗಳಿಂದ ಸಂಸತ್ತಿನತ್ತ ರ್‍ಯಾಲಿ ನಡೆಸಲಿದೆ.

"ನವ–ಉದಾರವಾದ ಆರಂಭವಾದಂದಿನಿಂದ ನಾಲ್ಕು ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿರುವ ಕೃಷಿ ಬಿಕ್ಕಟ್ಟಿಗೆ ಪರಿಹಾರಗಳನ್ನು ಕೇಳುತ್ತೇವೆಯಷ್ಟೇ ಅಲ್ಲ, ಈ ಹೋರಾಟ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಕೋಮುವಾದಿ ಮತ್ತು ಜಾತಿವಾದಿ ಹಾಗೂ ಜಾತ್ಯತೀತತೆ–ವಿರೋಧಿ ಮುಖಗಳ ಮೇಲೂ ಗಮನ ಕೇಂದ್ರೀಕರಿಸುತ್ತದೆ".

" ಕೋರ್ಟುಗಳು ಕೂಡ ದ್ವೇಷ ಅಪರಾಧಗಳನ್ನು ಎಸಗುವುದನ್ನು, ಹೊಡೆದು ಸಾಯಿಸುವುದನ್ನು ನಿಲ್ಲಿಸದಿರುವುದನ್ನು ಬಲವಾಗಿ ಟೀಕಿಸಿದೆ. ಮೊನ್ನೆ ಎಪ್ರಿಲ್‌ನಲ್ಲಿ ಭಾರತ್ ಬಂದ್ ವೇಳೆ 11 ದಲಿತರ ಹತ್ಯೆಯಾಗಿದೆ" ಎಂದು ನೆನಪಿಸಿರುವ ಎಐಕೆಎಸ್ ಅಧ್ಯಕ್ಷರು ಎಲ್ಲ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳು ಈ ಲಾಂಗ್ ಮಾರ್ಚ್‌ನಲ್ಲಿ ಸೇರಿಕೊಳ್ಳುತ್ತಾರೆ" ಎಂದು ಹೇಳಿದ್ದಾರೆ. ಈ ಸಭೆಯಲ್ಲಿ ಎಐಕೆಸಿಯ 100ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದರು.

ಸಭೆಯ ಸಂದರ್ಭದಲ್ಲಿ ಒಂದು ದೊಡ್ಡ ರೈತರ ರ್‍ಯಾಲಿ ನಡೆಯಿತು.





ಸಂಪಾದಕೀಯ

ಕಣ್ಣೀರು ಹಾಕುವುದಲ್ಲ.. ..ಒರೆಸಬೇಕು

ಕರ್ನಾಟಕದ ಜೆಡಿ(ಎಸ್)–ಕಾಂಗ್ರೆಸ್ ಮೈತ್ರಿ ಸರಕಾರ ಯಾವಾಗಲೂ ಸುದ್ದಿಯಲ್ಲಿ ಇರುತ್ತದೆ. ಹೆಚ್ಚಾಗಿ ತಪ್ಪು ಕಾರಣಗಳಿಗಾಗಿ. ಇತ್ತೀಚಿಗೆ ಪಕ್ಷದ ವೇದಿಕೆಯೊಂದರಲ್ಲಿ "ಮುಖ್ಯಮಂತ್ರಿಯಾಗಿ ನಾನು ನೆಮ್ಮದಿಯಿಂದ ಇಲ್ಲ. ಎಲ್ಲ ನೋವುಗಳನ್ನು ನುಂಗಿಕೊಂಡು ವಿಷಕಂಠನಾಗಿದ್ದೇನೆ' ಎಂದು ಮುಖ್ಯಮಂತ್ರಿ ಕಣ್ಣೀರಿಟ್ಟದ್ದು ರಾಜ್ಯದ ಮಾತ್ರವಲ್ಲ ರಾಷ್ಟ್ರ ಮಟ್ಟದ ಸುದ್ದಿಯಾಗಿದೆ. ಪಾರ್ಲಿಮೆಂಟಿನಲ್ಲೂ ಪ್ರಸ್ತಾಪಿತವಾಗಿದೆ. 'ನೀವೆಲ್ಲರೂ ನಾನು ಮುಖ್ಯಮಂತ್ರಿ ಆಗಿದ್ದಕ್ಕೆ ಸಂತೋಷಪಟ್ಟಿದ್ದೀರಿ. ನನ್ನ ತಂದೆ, ತಾಯಿ ಮಾಡಿದ ಪೂಜೆಯ ಫಲವಾಗಿ ನನಗೆ ಮತ್ತೆ ಅಧಿಕಾರ ಸಿಕ್ಕಿದೆ.. ..ಪ್ರಧಾನಿ ಹುದ್ದೆಯನ್ನೇ ಒದ್ದು ಬಂದ ದೇವೇಗೌಡರ ಮಗ ನಾನು. ಮನಸ್ಸು ಮಾಡಿದರೆ ಎರಡೇ ಗಂಟೆಯಲ್ಲಿ ಅಧಿಕಾರದಿಂದ ಕೆಳಗೆ ಇಳಿಯುತ್ತೇನೆ. ದೇವರು ಕೊಟ್ಟ ಈ ಜಾಗದಲ್ಲಿ ದೇವರು ಇಚ್ಛಿಸುವವರೆಗೆ ಇರುತ್ತೇನೆ' ಎಂದೂ ಮುಖ್ಯಮಂತ್ರಿಯವರು ಹೇಳಿದ್ದಾರೆಂದು ವರದಿಯಾಗಿದೆ. ಇದು ಜೆಡಿ(ಎಸ್), ಕಾಂಗ್ರೆಸ್, ರಾಜ್ಯ ಸರಕಾರ ಮತ್ತು ರಾಜ್ಯದ ಜನತೆಯನ್ನೂ ನಗೆಪಾಟಲಿಗೆ ಗುರಿ ಮಾಡುವ ಹೇಳಿಕೆ ಮತ್ತು ಕ್ರಿಯೆ ಮಾತ್ರವಲ್ಲ, ಗಂಭೀರ ರಾಜಕೀಯ ಬೆಳವಣಿಗೆ ಕೂಡಾ. ಸ್ವಾಭಾವಿಕವಾಗಿಯೇ ಇದನ್ನು ಜೆಡಿ(ಎಸ್), ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಜವಾಬ್ದಾರಿಯುತ ನಾಯಕರು ಟೀಕಿಸಿದ್ದಾರೆ. ನಿರೀಕ್ಷಿಸಿದಂತೆ ರಾಜ್ಯ ಮತ್ತು ರಾಷ್ಟ್ರದ ಬಿಜೆಪಿ ಬಾಲಬಡುಕ ಮಾಧ್ಯಮಗಳು ಹಿಗ್ಗಿನಿಂದ ಅದನ್ನು ಇನ್ನಷ್ಟು ಹಿಗ್ಗಿಸಿ ಹೇಗೆ ಬಿಜೆಪಿಯೇತರ ಪಕ್ಷಗಳು ಆಡಳಿತ ನಡೆಸಲು ಅನರ್ಹವೆಂದು ಪ್ರಚಾರ ಮಾಡುತ್ತಿವೆ. ಇಂತಹ ಅವಕಾಶಗಳಿಗೆ ರಣಹದ್ದುಗಳಂತೆ ಕಾಯುತ್ತಿರುವ ಬಿಜೆಪಿಯ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರಿಗೂ ಮೈತ್ರಿ ಸರಕಾರ ಕೋಲು ಕೊಟ್ಟು ಹೊಡೆಸಿಕೊಂಡಂತೆ ಹಾಗಿದೆ. ಕಾಂಗ್ರೆಸ್ ಶಾಸಕರು ಮತ್ತು ನಾಯಕರಿಗೆ ಆತಂಕ ತರುವ ಮೂಲಕ ಬಿಜೆಪಿಯೇತರ ಸರಕಾರವನ್ನು ಇನ್ನಷ್ಟು ಅಭದ್ರಗೊಳಿಸುವುದಲ್ಲದೆ ಈ ಹೇಳಿಕೆಯಲ್ಲಿ ಇನ್ನೂ ಹಲವು ಆತಂಕಕಾರಿ ರಾಜಕೀಯ ಪ್ರಮಾದಗಳಿವೆ. 'ನನ್ನ ತಂದೆ, ತಾಯಿ ಮಾಡಿದ ಪೂಜೆಯ ಫಲವಾಗಿ ನನಗೆ ಮತ್ತೆ ಅಧಿಕಾರ ಸಿಕ್ಕಿದೆ.. .. ದೇವರು ಕೊಟ್ಟ ಈ ಜಾಗದಲ್ಲಿ ದೇವರು ಇಚ್ಛಿಸುವವರೆಗೆ ಇರುತ್ತೇನೆ' ಎನ್ನುವುದು ಪ್ರಜಾಪ್ರಭುತ್ವದ ಅಪಹಾಸ್ಯವಲ್ಲವೇ? ಮೈತ್ರಿಕೂಟಕ್ಕೆ ಮತಗಳಲ್ಲೂ ಸೀಟುಗಳಲ್ಲೂ ಬಹುಮತ ಕೊಟ್ಟು ಜನಾದೇಶ ಕೊಟ್ಟದ್ದು ಜನರಲ್ಲವೇ? ಇಂತಹ ಮಾತು ಕರ್ನಾಟಕದ ಜನತೆಗೆ ಮಾಡುವ ಅವಮಾನವಲ್ಲವೇ? ಕಡಿಮೆ ಸಂಖ್ಯೆಯಲ್ಲಿರುವ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನ, ಪ್ರಮುಖ ಖಾತೆಗಳು, ಮತ್ತಿತರ ಹಲವು ಒತ್ತಾಯಗಳನ್ನು ಮನ್ನಿಸಿದ ಕಾಂಗ್ರೆಸಿಗೂ ಅದನ್ನು ಬೆಂಬಲಿಸಿದ ಜನತೆಗೂ ಮಾಡಿದ ಅವಮಾನವಲ್ಲವೇ? ಬಿಜೆಪಿಯ ವಿರುದ್ಧ ಬರಿಯ ಅಂಕೆಗಳ ಕಸರತ್ತುಗಳ 'ಮಹಾಮೈತ್ರಿ' ಮಾಡಿದರೆ ಸಾಲದು, ಬದಲಿ ಸೆಕ್ಯುಲರ್ ರಾಜಕಾರಣದ ಮಾದರಿಯೊಂದನ್ನೂ ಇಡಬೇಕು ಎಂಬ ಜನತೆಯ ನಿರೀಕ್ಷೆಗೆ ಮಾಡಿದ ವಂಚನೆಯಲ್ಲವೇ?



ಕೃಪೆ: ಪಿ. ಮಹಮ್ಮದ್, ವಿ.ಕ.

ಆತ್ಮಹತ್ಯೆ ಮಾಡಿಕೊಂಡ ಬೆಂಗಳೂರು ಪೌರ ಕಾರ್ಮಿಕ, ಬೀದಿಗಳಲ್ಲಿ ಸಾಯಬಡಿಯಲಾದ ಮುಸ್ಲಿಂ ಯುವಕ, ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಭೇಟಿ ಮಾಡಿ ಕಣ್ಣೀರಿಟ್ಟಿದ್ದರೆ ಅದಕ್ಕೆ ಅರ್ಥ ಇರುತ್ತಿತ್ತು. ಇಂತಹ ಸಂದರ್ಭಗಳಲ್ಲೂ ಜನ ನಿರೀಕ್ಷಿಸುವುದು ಕಣ್ಣೀರು ಹಾಕುವುದನ್ನಲ್ಲ. ಕನಿಷ್ಠ ಕಣ್ಣೀರು ಒರೆಸುವ ಕ್ರಮಗಳನ್ನು, ಅದಕ್ಕೆ ಕಾರಣವಾದ ಮೂಲಸಮಸ್ಯೆಗೆ ದಿಟ್ಟ ಪರಿಹಾರಗಳನ್ನು. ಆದರೆ ಮುಖ್ಯಮಂತ್ರಿಗಳು ಅಂತಹದನೇನನ್ನೂ ಮಾಡಿಲ್ಲ. ಜನತೆಗೆ ಕಣ್ಣೀರು ತಂದ ಪೆಟ್ರೋಲ್–ಡಿಸಿಲ್, ವಿದ್ಯುತ್ ದರ ಏರಿಕೆ, ವಾಹನ ತೆರಿಗೆ ಏರಿಕೆಯನ್ನು ಸಹ ಹಿಂತೆಗೆದುಕೊಳ್ಳಲಿಲ್ಲ. ವಿದ್ಯಾರ್ಥಿಗಳ ಉಚಿತ ಬಸ್ ಪಾಸ್ ಗೆ ಇನ್ನೂ ಮೀನಮೇಷ ಎಣಿಸುತ್ತಿದ್ದಾರೆ. ಹಾಗಾದರೆ ಈ ಕಣ್ಣೀರು ಯಾಕೆ? ತಮ್ಮ ಪಕ್ಷದ ಕಾರ್ಯಕರ್ತರ ಮುಗಿಯದ ನಿರೀಕ್ಷೆಗಳಿಗೆ ಕಡಿವಾಣ ಹಾಕಲೆಂದೇ? ತಮ್ಮ ಮತ್ತು ತಮ್ಮ ಸಚಿವ ಸಂಪುಟದ ವೈಫಲ್ಯ ಹಾಗೂ ಬಜೆಟಿನಲ್ಲಿ ಜನರಿಗಿಟ್ಟ ಬರೆ ಮರೆಮಾಚಲಿಕ್ಕಾಗಿಯೇ? ಇವೆಲ್ಲದರ ಹಿನ್ನೆಲೆಯಲ್ಲಿ ಇದನ್ನು ಕಣ್ಣೀರಿನ ರಾಜಕೀಯ 'ನಾಟಕ' ಅಲ್ಲದೆ ಇನ್ನೇನೆಂದು ಕರೆಯಲು ಸಾಧ್ಯ?

'ಉತ್ತರ ಕರ್ನಾಟಕಕ್ಕೆ ಬಜೆಟಿನಲ್ಲಿ ಅನ್ಯಾಯವಾಗಿದೆ' ಎಂಬ ಆಕ್ಷೇಪ ಮತ್ತು ಈ 'ಅನ್ಯಾಯ ಮುಂದುವರಿದರೆ ಪ್ರತ್ಯೇಕ ರಾಜ್ಯದ ಬೇಡಿಕೆ ಅನಿವಾರ್ಯವಾದೀತು' ಎಂಬ ಪಾಟೀಲ ಪುಟ್ಟಪ್ಪನವರ 'ಎಚ್ಚರಿಕೆ'ಗೆ ತಿರುಗೇಟು ನೀಡುವ ಭರದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು, ರಾಜ್ಯದಲ್ಲಿ 25 ವರ್ಷ ಲಿಂಗಾಯತ ಸಮುದಾಯದ ಮುಖ್ಯಮಂತ್ರಿಗಳೇ ಅಧಿಕಾರದಲ್ಲಿದ್ದುದನ್ನು ಪ್ರಸ್ತಾಪಿಸಿ, ಅವರು ಉತ್ತರ ಕರ್ನಾಟಕಕ್ಕೆ ಏನು ಮಾಡಿದ್ದಾರೆ ಎಂದು ಕೇಳಿದ್ದಾರೆ. ಇದರರ್ಥ ಉತ್ತರ ಕರ್ನಾಟಕ = ಲಿಂಗಾಯತರು, ದಕ್ಷಿಣ ಕರ್ನಾಟಕ = ಒಕ್ಕಲಿಗರು ಎಂದರ್ಥವೇ? ಇಂತಹ ಹೇಳಿಕೆ ಆಳುವ ಪಕ್ಷದ ರಾಷ್ಟ್ರಾಧ್ಯಕ್ಷರು ಮತ್ತು ಮಾಜಿ ಪ್ರಧಾನಿಯಿಂದ ಬರುವುದು ತೀರಾ ಆಕ್ಷೇಪಣೀಯ ಮತ್ತು ಕಳವಳಕಾರಿ. ಇದು ಜೆಡಿ(ಎಸ್) ಮತ್ತು ಎಲ್ಲಾ ಬಿಜೆಪಿಯೇತರ ಪಕ್ಷಗಳ ಭವಿಷ್ಯಕ್ಕೂ ಸಂಚಕಾರ ತರುವಂತಹುದು. ತೀರಾ ಕೀಳುಮಟ್ಟಕ್ಕೆ ಹೋಗಿರುವ ಈ ಧರ್ಮ–ದೇವರು–ಜಾತಿ ರಾಜಕಾರಣವನ್ನು ತಕ್ಷಣ ನಿಲ್ಲಿಸಬೇಕು. ●

ಈ ವಾರ ಚರಿತ್ರೆಯಲ್ಲಿ

ನೆಲ್ಸನ್ ಮಂಡೇಲಾ 100

17 ಜೂನ್ 1918

ದಕ್ಷಿಣ ಆಫ್ರಿಕದ ಕಪ್ಪು ಜನರಿಗಾಗಿ ಮಾನವಂತದ ಬದುಕಿನ ಹಕ್ಕಿಗೆ, ತಾನುಟ್ಟಿದ ನೆಲದ ಮೇಲೆ ಓಡಾಡಲು ಬಿಳಿಯರಿಂದ ಪರವಾನಿಗೆ ಪತ್ರ ಪಡೆಯಬೇಕಾದ ದುರ್ದೆಸೆಯ ವಿರುದ್ಧ, ವಂಶಪಾರಂಪರ್ಯವಾಗಿ ಸಂಪಾದಿಸಿದ ಆಸ್ತಿ–ಮನೆ ಮರಳಿ ಪಡೆಯಲು, ತನ್ನ ದೇಶದ ರಾಜಕೀಯ ಬದುಕಿನಲ್ಲಿ ಮತದಾನ ಮಾಡುವ ಹಕ್ಕಿಗಾಗಿ, ಬದುಕುಳಿಯಲು ಕೆಲಸದ ಹಕ್ಕಿಗಾಗಿ ಇವೆಲ್ಲಕ್ಕೂ ತಡೆಗೋಡೆಯಾಗಿ ಹೆಬ್ಬಂಡೆಯಾಗಿ ನಿಂತ ಬಕಾಸುರ ವರ್ಣಭೇದ ನೀತಿಗೆ ವಿರುದ್ಧವಾಗಿ 75ವರ್ಷಗಳಿಗೂ ಅಧಿಕ ಕಾಲ ರಾಜಿ ಇಲ್ಲದ ಸುದೀರ್ಘ ಹೋರಾಟ ನಡೆಸಿ 27ವರ್ಷ ಜೈಲುಕಂಬಿಗಳ ನಡುವೆ ಕರಿಯರ ಮಾನವಂತ ಬದುಕಿಗಾಗಿ ಕನಸುಗಳನ್ನು ಹೆಣೆಯುತ್ತಾ ಹೋರಾಡಿದ ಮನುಕುಲದ ಆದರ್ಶ, ಅಂತ್ಯಜರ ಉಸಿರು ನೆಲ್ಸನ್ ಮಂಡೇಲಾ ಅವರ ಜನ್ಮ ಶತಮಾನೋತ್ಸವ ಇದೇ ಜುಲೈ 18ರಂದು.

ವರ್ಣಭೇದ ನೀತಿ

ಸುಮಾರು ಮುನ್ನೂರು ವರ್ಷಗಳಲ್ಲಿ ಫ್ರೆಂಚರು, ಡಚ್ಚರು ಮತ್ತು ಬ್ರಿಟೀಷರು ದಕ್ಷಿಣ ಆಫ್ರಿಕಾವನ್ನು ರಕ್ತದ ದಾಹದಿಂದ ಆಳಿದರು. 1934ರ ಜೂನ್‌ನಲ್ಲಿ ಸ್ವತಂತ್ರಗೊಂಡು 1961ನೇ ಮೇ 31ರಂದು ಬ್ರಿಟಿಷ್ ಸಾಮ್ರಾಜ್ಯದಿಂದ ಬಿಡುಗಡೆಗೊಂಡು ಗಣರಾಜ್ಯವಾಯಿತು. ಈ ಗಣರಾಜ್ಯದಲ್ಲಿ ಡಚ್ಚ್ ಮೂಲದ, ಫ್ರೆಂಚ್ ಮೂಲದ ಹಾಗೂ ಬ್ರಿಟೀಷ್ ಮೂಲದ ಜನತೆಗೆ ಮಾತ್ರ ಪ್ರಾಶಸ್ತ್ಯ ಹಾಗಾಗಿ ಡಚ್ಚರ ನ್ಯಾಷನಲ್ ಪಾರ್ಟಿ ಆಂಗ್ಲರ ಪ್ರೋಗ್ರೆಸಿವ್ ಫೆಡರಲ್ ಪಾರ್ಟಿಗಳಿಗೆ ಮಾತ್ರ ಮಾನ್ಯತೆ, ಕರಿಯರಿಗೆ ಮತಹಾಕುವ ಹಕ್ಕು ಇಲ್ಲ ಮಾತ್ರವಲ್ಲ ಅವರನ್ನು ಮನುಷ್ಯರೆಂದೇ ಪರಿಗಣಿಸಲಿಲ್ಲ, ಅವರಿಗಾಗಿ ಯಾವ ಯೋಜನೆಗಳೇ ಇಲ್ಲ. ಜಗತ್ತಿನ ಇತಿಹಾಸದಲ್ಲೇ ಭಾರತದ ಅಸ್ಪೃಶ್ಯರಿಗಿಂತ ಹೀನಾಯ ಸ್ಥಿತಿಯಲ್ಲಿ ಆಫ್ರಿಕಾದ ಕಪ್ಪು ಜನ ಬದುಕನ್ನು 20ನೇ ಶತಮಾನದ ಉತ್ತರಾಂತ್ಯದಲ್ಲೂ ಬದುಕಬೇಕಾದ ಅನಿವಾರ್ಯತೆ ಇದ್ದದ್ದು ಜಗತ್ತಿನ ಮಾನವ ಲೋಕದ ಕ್ರೂರ ವ್ಯಂಗ್ಯ.

ಡಚ್ಚರು ಆಫ್ರಿಕಾಕ್ಕೆ ಬಂದೊಡನೆಯೇ ವರ್ಣಭೇದ (ಅಂದರೆ ಆಫ್ರಿಕನ್ ಭಾಷೆಯಲ್ಲಿ ಪ್ರತ್ಯೇಕ ಅಭಿವೃದ್ಧಿ ಎಂದು ಅರ್ಥ) ಆರಂಭವಾಯಿತು. ಕರಿಯರಿಗೆ ಯಾವುದೇ ಸಂವಿಧಾನಾತ್ಮಕವಾಗಿ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸೌಲಭ್ಯಗಳನ್ನು ದೊರೆಯದಂತೆ ಮಾಡಲು ರಚಿಸಿಕೊಂಡ ಕಾನೂನು ಆದು. 1961ರ ನಂತರ ಇನ್ನಷ್ಟು ಬಿಗಿಗೊಂಡು ಕರಿಯರನ್ನು ನಾಯಿ, ಹಂದಿ ಬೆಕ್ಕಿನ ನಂತರದ ಸ್ಥಾನದಲ್ಲಿಟ್ಟಿತು ಅವರು ಅವರ ಊರ ಹೊರಗಿನ ಬಂಜರು ಪ್ರದೇಶದಲ್ಲಿ, ಕಾಡಿನಲ್ಲಿ ವಾಸಿಸುವಂತೆ ಮಾಡಿತು. ಬಿಳಿಯರ ಮನೆಗೆ ಕೆಲಸಕ್ಕೆ ಬರುವಾಗ ಮನೆಯೊಡೆಯರ ಅನುಮತಿ ಪತ್ರದೊಂದಿಗೆ ಬರಲು ಮಾತ್ರ ಸ್ವಾತಂತ್ರ್ಯವಿತ್ತು, ತಾನುಟ್ಟಿ ಬೆಳೆದ ನೆಲದ ಮೇಲೆ ಓಡಾಡಲು ಪರಕೀಯರ ವೀಸ ಪಡೆಯಬೇಕಾದ ದುಸ್ಥಿತಿ ಒದಗಿಬಂದದ್ದು ಅವರ ದುರಂತವಾಗಿತ್ತು.

ಈ ನೀತಿಯಿಂದ ದಕ್ಷಿಣ ಆಫ್ರಿಕಾದ ಸೇಕಡ 83ರಷ್ಟು ಭೂಮಿ ಶೇಖಡ 17ರಷ್ಟಿರುವ ಬಿಳಿಯರಿಗೆ ಮೀಸಲಾಗಿದೆ 13% ಪಾಳು ಬಿದ್ದ ಭೂಮಿ ಮಾತ್ರ 83% ಕರಿಯರ ಪಾಲಿಗೆ ಅನಧಿಕೃತವಾಗಿ ಉಳಿದಿತ್ತು. ಬಿಳಿಯ ಕಾರ್ಮಿಕರಿಗೆ ಕರಿಯ ಕಾರ್ಮಿಕರಿಗಿಂತ 6ಪಟ್ಟು ಹೆಚ್ಚು ಕೂಲಿ/ವೇತನ ನಿಗದಿ ಮಾಡಲಾಗಿತ್ತು, ಕರಿಯರಿಗೆ ಕುಶಲ ಕೆಲಸ ಮತ್ತು ಶಿಕ್ಷಣದ ಅವಕಾಶ ಸರ್ಕಾರದಿಂದ ಇಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಈ ನೀತಿಯಿಂದಾಗಿ 30 ಸಾವಿರದಷ್ಟು ಕರಿಯ ಮಕ್ಕಳು ಅಪೌಷ್ಠಿಕತೆಯಿಂದ ಸಾಯುತ್ತಿದ್ದಾರೆ, 400 ಬಿಳಿಯರಿಗೆ ಒಬ್ಬ ವೈದ್ಯನಿದ್ದರೆ 40ಸಾವಿರ ಕರಿಯನಿಗೆ ಒಬ್ಬ ವೈದ್ಯ ಅದೂ ಕಪ್ಪು ವೈದ್ಯ, ಈ ಕಾನೂನು ಪ್ರತಿ ವರ್ಷ 2.5 ರಿಂದ 3 ಲಕ್ಷ ಕರಿಯರನ್ನು ಜೈಲುಗಳಿಗೆ ತುಂಬಿಸಲಾಗುತ್ತಿತ್ತು,

'ಮರಳಿ ಬರಲಿ ಆಫ್ರಿಕಾ'

1918ರ ಜುಲೈ 18ರಂದು ಬಂಟುಸ್ಥಾನದ ಕುನು ಗ್ರಾಮದಲ್ಲಿ ಥೆಂಬು ರಾಜಮನೆತನದಲ್ಲಿ ಹುಟ್ಟಿದ ಮಂಡೇಲಾ. ತಂದೆಯ ನಿಧನಾನಂತರ ಥೆಂಬುವಿನ ನಾಯಕನಾಗುವ ಬದಲು ತನ್ನ ಕಪ್ಪು ಜನರ ಸಾಮಾಜಿಕ ದಿಗ್ಬಂಧನದ ವಿರುದ್ಧ ಸ್ವಾತಂತ್ರ ಚಳುವಳಿಯ ರಣಕಹಳೆ ಮೊಳಗಿಸುವ ಕಾಯಕ ಆರಿಸಿಕೊಂಡರು. ಡಿಸೆಂಬರ್ 1952 ಏಪ್ರಿಲ್ 6 ದಕ್ಷಿಣ ಆಫ್ರಿಕದ ಬಿಳಿಯರು ತಮ್ಮ ಆಳ್ವಿಕೆಯ ತ್ರಿಶತಮಾನೋತ್ಸವ ಆಚರಿಸುವ ಸಂಭ್ರಮಾಚರಣೆಯ ದಿನದಂದೇ "ಮಾಯಿಬುಯೆ" [ಮರಳಿ ಬರಲಿ ಆಫ್ರಿಕ] ಎಂದು ಜನ ಕೂಗಿದರು ಅಹಿಂಸಾತ್ಮಕ ಮಾರ್ಗದಿಂದ ಮಂಡೇಲ ಎ.ಎನ್.ಸಿ ನೇತೃತ್ವದಲ್ಲಿ ಆಫ್ರಿಕದ ಸ್ವಾತಂತ್ರ್ಯಕ್ಕಾಗಿ ಬೀದಿ ಬೀದಿಯಲ್ಲಿ ಹೋರಾಟ ನಡೆಸಿದರು.



ಮರು ತಿಂಗಳಲ್ಲೇ ದೇಶಾದ್ಯಂತ ಹೋರಾಟ ನಡೆಸಿದ ಹೋರಾಟಗಾರರ ಮನೆ, ಕಛೇರಿಗಳ ಮೇಲೆ ದಾಳಿ ಮಾಡಿ ಬಿಳಿದೊರೆಗಳ ಬಂಟರು ಬಂಧಿಸಲಾರಂಬಿಸಿದರು ಮಂಡೇಲ, ಸಿಸಿಲು, ಮುಂತಾದ ನಾಯಕರನ್ನು ಕಮ್ಯುನಿಸ್ಟ್ ವಿಚಾರಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಬಂದಿಸಿ ಜೈಲಿಗೆ ಅಟ್ಟಲಾಯಿತು.

ವರ್ಣಭೇದ ವಿರುದ್ಧ ಜಗತ್ತಿನ ಪ್ರತಿರೋಧ

ಕರಿಯರ ವಿಮೋಚನೆ ಸಶಸ್ತ್ರ ಹೋರಾಟದ ಮೂಲಕ ಎಂದು ಮಂಡೇಲ ಕರೆ ನೀಡಿದರು. ಆಫ್ರಿಕನ್ ಸರ್ಕಾರ ಮಂಡೇಲ ಮತ್ತವರ ಸಂಗಾತಿಗಳನ್ನು ಬಂಧಿಸಿ ಜೀವಾವಧಿ ಶಿಕ್ಷೆ ವಿಧಿಸಿತು, ಇದರ ವಿರುದ್ಧ ವಿಶ್ವ ಸಂಸ್ಥೆ ಛೀಮಾರಿ ಹಾಕಿ ದಿಗ್ಬಂಧನ ವಿದಿಸಿತು, ಎಲ್ಲಾ ಸಾಮ್ರಾಜ್ಯ ಶಾಹಿ ದೇಶಗಳಲ್ಲೂ ಮಂಡೇಲ ಪರ ಚಳುವಳಿ ಶುರುವಾಯಿತು. ಭಾರತ ಆ ದೇಶದೊಂದಿಗೆ ಸಂಪೂರ್ಣ ಸಂಬಂಧ ಕಡಿದು ಕೊಂಡಿತು. ದ. ಆಫ್ರಿಕನ್ ಸರ್ಕಾರ ಈ ದಿಗ್ಬಂಧನದಿಂದ ಜಗತ್ತಿನಲ್ಲಿ ಒಂಟಿಯಾಯಿತು, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದಿವಾಳಿಯಾಗ ತೊಡಗಿತು. ಜನದನಿಯ ಒತ್ತಡ ಮತ್ತು ಬಿಳಿಯರಲ್ಲಿ ಮೂಡಿದ ಸಾಮಾಜಿಕ ಪ್ರಜ್ಞೆ ತಾಳಲಾರದೆ 1989 ಆಗಸ್ಟ್ 7 ಅಧ್ಯಕ್ಷ ಬೋಥಾ ರಾಜಿನಾಮೆ ನೀಡಿದ. 1990 ಫೆಬ್ರವರಿ 2ರಂದು ಮಂಡೇಲಾರನ್ನು 27 ವರ್ಷಗಳ ಕತ್ತಲ ಜಗತ್ತಿನಿಂದ ಮಾನವ ಜಗತ್ತಿಗೆ ಸಕಲ ಮಾನವ ಮರ್ಯಾದೆಗಳೊಂದಿಗೆ ಸ್ವಾಗತಿಸಲಾಯಿತು. ಜಗದ ಮಾನವ ಪ್ರೇಮಿಗಳು ಮತ್ತೊಮ್ಮೆ ಜಯಗಳಿಸಿದರು. 10 ಮೇ 1994 ಆಫ್ರಿಕಾದ ಮೊದಲ ಕರಿಯ ಆದ್ಯಕ್ಷರಾಗಿ ಆಯ್ಕೆಯಾದರು. ಜೂನ್ 13, 1999 ರಲ್ಲಿ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿ ದಕ್ಷಿಣ ಆಫ್ರಿಕಾದ ಪಿತಾಮಹರಾದರು.

ವರ್ಣಭೇದ ಹೋಗಿದೆ, ಬಡತನದ ಹೋಗಿಲ್ಲ

ದಕ್ಷಿಣ ಆಫ್ರಿಕದ ಮುಂದೆ ಹೊಸ ಸಮಸ್ಯೆ ಎದುರು ನಿಂತಿದೆ. ವರ್ಣ ಭೇದ ಅಳಿದಿದೆ. ಆದರೆ ಅದರ ಪ್ರಭಾವ ನಾಶವಾಗಿಲ್ಲ. ಆಫ್ರಿಕಾದ ಬಹುಪಾಲು ಸಂಪತ್ತೆಲ್ಲಾ ಬಿಳಿಯರ ಒಡೆತನದಲ್ಲೇ ಇದೆ, ಸಾಂಸ್ಕೃತಿಕ ಲೋಕದ ಒಡೆಯರು ಅವರೇ ಆಗಿದ್ದಾರೆ (ದ.ಆಫ್ರಿಕಾ ಕ್ರಿಕೆಟ್ ತಂಡ ನೋಡಿ) ಈಗಲೂ ಬಡತನದ ಬೇಗೆಯಲ್ಲಿ ಕರಿಯರು ನರಳುತ್ತಿದ್ದಾರೆ. ಈಗ ಆಗ ಬೇಕಿರುವುದು ವರ್ಗ ಹೋರಾಟ. ಮಂಡೇಲರ ಅಂತರಾಷ್ಟ್ರೀಯ ಜನ್ಮ ಶತಾಬ್ಧಿ ಅಪೂರ್ಣಗೊಂಡ ಮಂಡೇಲರ ಹೋರಾಟವನ್ನು ಪೂರ್ಣಗೊಳಿಸಿ ಕರಿಯರ ಸ್ವಾಭಿಮಾನ ಮತ್ತು ಸ್ವಾವಲಂಬನೆಯನ್ನು ಉನ್ನತೀಕರಿಸುವ ಕಿಚ್ಚನ್ನು ಹೊತ್ತಿಸಲಿ.

(ಕೃಪೆ: ಸಾಮರಸ್ಯ)





ಉಚಿತ ಬಸ್ ಪಾಸ್ ಗೆ ಆಗ್ರಹಿಸಿ ರಾಜ್ಯಾದ್ಯಂತ ಮತ್ತೆ ಪ್ರತಿಭಟನೆ

ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ನೀಡಬೇಕೆಂದು ಆಗ್ರಹಿಸಿ ಜುಲೈ 20ರಂದು ಎಸ್.ಎಫ್.ಐ. ರಾಜ್ಯ ಸಮಿತಿಯು ರಾಜ್ಯವ್ಯಾದಂತ ಕೆ.ಎಸ್.ಆರ್.ಟಿ.ಸಿ ಕಛೇರಿ ಮುತ್ತಿಗೆ ಕರೆ ಕೊಟ್ಟ ಅಂಗವಾಗಿ ಹಲವು ಜಿಲ್ಲಾ ತಾಲೂಕು ಕೇಂದ್ರಗಳಿಂದ ಅದು ಯಶಸ್ವಿಯಾದ ವರದಿಗಳು ಬಂದಿವೆ.

ಕೋಲಾರ ದಲ್ಲಿ ಕೆ.ಎಸ್.ಆರ್.ಟಿ.ಸಿ ವಿಭಾಗೀಯ ಕಛೇರಿಗೆ ಮುತ್ತಿಗೆ ಹಾಕಿದಾಗ ಪೋಲಿಸರು ಮತ್ತು ಎಸ್.ಎಫ್.ಐ. ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆದಿದೆ. ಹಾವೇರಿ ಮತ್ತು ಗಜೇಂದ್ರಗಡಗಳಲ್ಲಿ ಕೆ.ಎಸ್.ಆರ್.ಟಿ.ಸಿ ಕಚೇರಿಗೆ ಮುತ್ತಿಗೆ ಹಾಕಾಗಿದೆ. ಗದಗ ನಗರದಲ್ಲಿ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಮೂಲಕ ಹೊಸ ಬಸ್ ನಿಲ್ದಾಣದಲ್ಲಿ ತೆರಳಿ ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಗಂಗಾವತಿ ಬಸ್ ನಿಲ್ದಾಣಕ್ಕೆ ಮುತ್ತಿಗೆ ಹಾಕಲಾಯಿತು. ಕಾರಟಗಿಯಲ್ಲಿ ಶಾಸಕ ಬಸವರಾಜ ದಡೆಸೂಗೂರಿಗೆ ಮನವಿ ಕೊಡಲಾಯಿತು. ಕೊಪ್ಪಳದ ಅಶೋಕ ವೃತದದಲ್ಲಿ ಮತ್ತು ಯಲಬುರ್ಗದ ಬಸ್ ಡಿಪೋದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಯಚೂರಿನ ಇನ್ಫೆಂಟ್ ಜೀಸಸ್ ಕಾಲೇಜಿನಿಂದ ಪ್ರತಿಭಟನೆ ರ‍್ಯಾಲಿ ಆರಂಭ ಮಾಡಿ ವಿಭಾಗೀಯ ನಿಯಂತ್ರಣಾಧಿಕಾರಿ ಕ್ಛೇರಿಗೆ ಮುತ್ತಿಗೆ ಹಾಕಲಾಯಿತು. ದೇವದುರ್ಗ ತಾಲೂಕಿನಲ್ಲೂ ಕೆ.ಎಸ್.ಆರ್.ಟಿ.ಸಿ ಕಛೇರಿ ಮುತ್ತಿಗೆ ಹಾಕಲಾಯಿತು.





ಸ್ವಾಮಿ ಅಗ್ನಿವೇಶ್ ಮೇಲೆ ಹಲ್ಲೆಗೆ ಪ್ರತಿಭಟನೆ

ಪ್ರಗತಿಪರ ಚಿಂತಕ ಮತ್ತು ಹೋರಾಟಗಾರ ಸ್ವಾಮಿ ಅಗ್ನಿವೇಶ್ ಮೇಲೆ ಮತಾಂಧ, ಕೋಮುವಾದಿ ಎಬಿವಿಪಿ – ಭಜರಂಗದಳ ಕಾರ್ಯಕರ್ತರು ನಡೆಸಿರುವ ದಾಳಿಯನ್ನು ಖಂಡಿಸಿ ಇಂದು ರಾಜ್ಯದ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕಲಬುರಗಿ, ಬೆಂಗಳೂರು, ಜಾಲಹಳ್ಳಿ, ಹಾಸನ ಗಳಲ್ಲಿ ಜುಲೈ 18ರಿಂದ 20ರವರೆಗೆ ಪ್ರತಿಭಟನೆ ನಡೆದ ವರದಿಗಳು ಬಂದಿವೆ.

ಬೆಂಗಳೂರು ಪುರಭವನದ ಎದುರು ಜುಲೈ 19, 2018 ರಂದು ಸಂಜೆ 4 ಗಂಟೆಗೆ ನಡೆದ ಪ್ರತಿಭಟನಾ ಸಭೆಯಲ್ಲಿ ನಿರೀಕ್ಷೆಗೂ ಮೀರಿದ ಜನ ಭಾಗವಹಿಸಿದ್ದರು. ಪ್ರೊ. ಎಸ್. ಜಿ. ಸಿದ್ದರಾಮಯ್ಯ,ಡಾ. ಕೆ. ಮರುಳಸಿದ್ದಪ್ಪ, ಪ್ರೊ. ರವಿವರ್ಮ ಕುಮಾರ್, ಡಾ. ವಿಜಯಾ, ಮುಂತಾದವರು ಭಾಗವಹಿಸಿ ಮಾತನಾಡಿದರು. ಕಲಬುರ್ಗಿಯಲ್ಲಿ ಜಗತ್ ಸರ್ಕಲ್ ನಲ್ಲಿ ಮಾನವ ಸರಪಣಿ ರಚಿಸಿ ಪ್ರತಿಭಟನೆ ಮಾಡಲಾಯಿತು.



ಮಂಡ್ಯ ದಲ್ಲಿ ರೇಷ್ಮೆ ಬೆಳೆಗಾರರ ಬೃಹತ್ ಪ್ರತಿಭಟನೆ

ಪ್ರತಿಭಟನಾ ಸ್ಥಳದಲ್ಲೇ ರೈತನ ಆತ್ಮಹತ್ಯೆ ಯತ್ನ.


ಕೆಜಿ ರೇಷ್ಮೆ ಗೂಡಿನ ದರ 450–550ರೂ ನಿಂದ 120–250 ರೂ ಗೆ ಕುಸಿದಿರುವುದರಿಂದ ಅಪಾರ ಸಂಕಷ್ಟಕ್ಕೆ ಒಳಗಾದ ರೇಷ್ಮೆ ಬೆಳೆಗಾರರು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಬೆಂಬಲದೊಂದಿಗೆ ಬೃಹತ್ ಪ್ರತಿಭಟನೆ ನಡೆಸಿದರು. ಮೆರವಣಿಗೆಯುದ್ದಕ್ಕೂ ಎರಡು ತಿಂಗಳಗಳಿಗಿಂತ ಹೆಚ್ಚು ಕಾಲದಿಂದಲೂ ದರ ಕುಸಿತದ ಕಾರಣ ರೇಷ್ಮೆ ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದರೂ ನೆರವಿಗೆ ಧಾವಿಸದ ಸರಕಾರಗಳ ಧೋರಣೆ ವಿರುದ್ಧ ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿ ಕಛೇರಿ ಗೆ ಸಾಗುತ್ತಿತ್ತು. ಆದರೆ ಪೋಲಿಸಿನವರು ಕಛೇರಿ ರಸ್ತೆಯ ಆರಂಭದಲ್ಲೇ ಬ್ಯಾರಿಕೇಡ್ ತಡೆ ಒಡ್ಡಿ ತಡೆದು ಜಿಲ್ಲಾಧಿಕಾರಿ ಬರುವವರೆಗೂ ಪುಟ್ ಪಾತ್ ನಲ್ಲಿ ನಿಲ್ಲುವಂತೆ ಒತ್ತಾಯಿಸಿದರು. ಈ ರೀತಿಯ ಅಸೂಕ್ಷ್ಮ ನಡವಳಿಕೆಯಿಂದ ಕೆರಳಿದ ರೈತರು ತಡೆದ ಸ್ಥಳವಾದ ಬೆಂಗಳೂರು–ಮೈಸೂರು ಹೆದ್ದಾರಿ ಯಲ್ಲೇ ಕುಳಿತು ಜಿಲ್ಲಾಧಿಕಾರಿ ಬಂದು ಮನವಿ ಸ್ವೀಕರಿಸಬೇಕೆಂದು ಆಗ್ರಹಿಸಿದರು. ರಸ್ತೆ ಮೇಲೆ ಕುಳಿತಿರುವುದರಿಂದ ಜಿಲ್ಲಾಧಿಕಾರಿ ಬರುವುದಿಲ್ಲ ಎಂದು ಪೋಲಿಸರು ರೈತರನ್ನು ಬೆದರಿಸಿದರು. ಬೆದರಿಕೆಗೆ ಮಣಿಯದೇ ಪ್ರತಿಭಟನೆ ಮುಂದುವರಿಸಿದರು .ಧರಣಿ ಎರಡು ಗಂಟೆಗಳ ಕಾಲ ನಡೆದರೂ ಜಿಲ್ಲಾಧಿಕಾರಿ ಬರದಿರುವುದರಿಂದ ಆತಂಕಗೊಂಡ ರೈತ ಮದ್ದೂರು ತಾಲ್ಲೂಕು ಅಂಬರಹಳ್ಳಿ ಗ್ರಾಮದ 40 ವಯಸ್ಸಿನ ಚೌಡೇಗೌಡ ಎಂಬ ರೈತ ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ದಿಡೀರನೆ ಘಟಿಸಿದ ಈ ಘಟನೆಯಿಂದ ರೈತರ ಆಕ್ರೋಶ ಕಟ್ಟೆ ಒಡೆದು ಹೆದ್ದಾರಿಯ ಎರಡೂ ರಸ್ತೆಗಳನ್ನು ಬಂದ್ ಮಾಡಿದರು. ತಕ್ಷಣವೇ ಆಸ್ಪತ್ರೆಗೆ ಸೇರಿಸಿದ್ದರಿಂದ ಸಕಾಲಿಕ ಚಿಕಿತ್ಸೆಯಿಂದ ರೈತ ಚೇತರಿಸಿಕೊಳ್ಳುತ್ತಿದ್ದಾರೆ.ಕೊನೆಗೂ ಜಿಲ್ಲಾಧಿಕಾರಿ ಬಂದು ಮನವಿ ಸ್ವೀಕರಿಸಬೇಕಾಯಿತು.

ಆಸ್ಪತ್ರೆಗೆ ತೆರಳಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಮೇಲೆ ಕ್ರಮ ಜರುಗಿಸುವಂತೆ, ರೇಷ್ಮೆ ಬೆಳೆಗಾರರ ಸಂಕಷ್ಟ ಆಲಿಸಲು ರಾಜ್ಯಮಟ್ಟದ ಸಭೆ ಕರೆಯುವಂತೆ ,ಚಿಕಿತ್ಸೆ ಪಡೆಯುತ್ತಿರುವ ರೈತನ ಸ್ಥಿತಿ ಅವಲೋಕಿಸಲು ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಮಂತ್ರಿಗಳು ಭೇಟಿ ಮಾಡಬೇಕೆಂದು ಆಗ್ರಹಿಸಲಾಯಿತು. ಸಣ್ಣ ನೀರಾವರಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಶಾಸಕರುಗಳಾದ ಎಂ.ಶ್ರೀನಿವಾಸ್, ಸುರೇಶ್ ಗೌಡ,ಕೆಟಿ.ಶ್ರೀಕಂಠೇಗೌಡ ರವರುಗಳು ಭೇಟಿ ನೀಡಿ ಆರೋಗ್ಯ ವಿಚಾರಿಸಿ ಕೂಡಲೇ ರೈತರಿಗೆ ಅನುಕೂಲವಾಗುವಂತೆ ಪ್ರೋತ್ಸಾಹ ಧನ ನಿಗಧಿಗೊಳಿಸಲಾಗುವುದು ಎಂದು ಭರವಸೆ ನೀಡಿದ ಮೇಲೆ ಪ್ರತಿಭಟನೆ ಹಿಂಪಡೆಯಲಾಯಿತು.

ಮಾತೆಂದರೆ ಇದು

"ಕಪ್ಪು ಹುಡುಗರಲ್ಲಿ ಬಂದೂಕುಗಳಿಲ್ಲ. ಆದರೆ ಅವರು ಬೀಸುವ ಕಲ್ಲಿನ ರಭಸಕ್ಕೆ ಬಿಳಿಯರ ಬಂದೂಕುಗಳು ನಡುಗುತ್ತಿವೆ."

– ನೆಲ್ಸನ್ ಮಂಡೇಲ



ರೇಗಾ ಸಮರ್ಪಕ ಜಾರಿಗೆ ಒತ್ತಾಯ

ಎರಡು ವರ್ಷಗಳ ಹಿಂದೆ ಮನರೇಗಾ ಜಾರಿಯಲ್ಲಿ ಕಲಬುರಗಿ ಜಿಲ್ಲೆಯು ರಾಜ್ಯದಲ್ಲಿಯೇ ಒಂದನೆ ಸ್ಥಾನದಲ್ಲಿದ್ದರೆ ಈಗ ಕಟ್ಟ ಕಡೆಯ ಸ್ಥಾನದಲ್ಲಿದೆ. ರೈತರ ಕೂಲಿಕಾರ್ಮಿಕರ ನಿರುದ್ಯೋಗಿಗಳ ಬಗ್ಗೆ ಇಷ್ಟೊಂದು ತಾತ್ಸಾರ ಭಾವನೆಯ ಕಾರಣವಾಗಿಯೇ ಮನರೇಗಾ ಎಲ್ಲಿಯೂ ಜಾರಿಯಾಗುತ್ತಿಲ್ಲ. ಎನ್. ಎಂ. ಆರ್ ಜನರೇಟ್ ಮಾಡುವಲ್ಲಿ ವಿಳಂಬ ಮಾಡಲಾಗುತ್ತಿದೆ. ಕಾಮಗಾರಿ ಸ್ಥಳದಲ್ಲಿ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಬಜೆಟ್ ಇಲ್ಲದ್ದಕ್ಕೆ ಕಾಮಗಾರಿ ಸ್ಥಗಿತ ಮಾಡುತ್ತಿದ್ದೇವೆ ಎಂದು ಘೋಷಿಸಲಾಗುತ್ತಿದೆ. ಕೆಲಸ ಕೇಳಿ ಬರುವವರೊಂದಿಗೆ ದುರ್ವರ್ತನೆ ಮಾಡಲಾಗುತ್ತಿದೆ.

ಆಳಂದ ತಾಲ್ಲೂಕಿನ ದಣ್ಣೂರ ಗ್ರಾಮ ಪಂಚಯತನ ತೆಲ್ಲೂರು ಗ್ರಾಮಗಳಂಥ ಕಡೆ ಬೆದರಿಸುವ ಧಮಕಿ ಹಾಕುವ ಪ್ರಕರಣಗಳು ನಡೆದಿವೆ. ಈಗ ಮಳೆಯ ನೆಪವೊಡ್ಡಿ ಕೆಲಸ ಕೊಡುವಲ್ಲಿ ನಿರಾಕರಣೆ ಮಾಡಲಾಗುತ್ತಿದೆ. ಬೇಸಿಗೆಯ ಹೊತ್ತಿನಲ್ಲಿ ಮಾರ್ಚ ಮುಗಿವವರೆಗೂ ಕೆಲಸ ಆರಂಭಿಸುವುದಿಲ್ಲ. ಇದು ಸ್ಪಷ್ಟವಾಗಿ ಮನರೇಗಾ ಮುಳುಗಿಸುವ ಷಡ್ಯಂತ್ರವಾಗಿದೆ.

ಇದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಉದ್ಯೋಗ ಖಾತ್ರಿ ಕಾರ್ಮಿಕರ ಸಂಘಟನೆ, ಕಲಬುರಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರಾದ ಕೃಷ್ಣ ಬೈರೇಗೌಡ ಅವರಿಗೆ ಮನರೇಗಾ ಕಾಯ್ದೆಯನ್ನು ಜಾರಿಗೊಳಿಸಲು ಸಲ್ಲಿಸಿದ ಮನವಿಯ ಆಗ್ರಹ.

"ದಲಿತರ ಬಗೆಗಿನ ತೀರ್ಪುಗಳ ಹಿಂದೆ ಮನುವಾದಿ ಚಿಂತನೆಯಿದೆ"



ದಲಿತರ ಬಗೆಗಿನ ಇತ್ತೀಚಿನ ಸುಪ್ರೀಂ ಕೋರ್ಟ್‌ನ ತೀರ್ಪುಗಳು ಸಂವಿಧಾನದಲ್ಲಿನ ಅಂಬೇಡ್ಕರ್ ರವರ ಆಶಯಗಳಾದ. 'ಸಮಾನತೆ ಮತ್ತು ಸಾಮಾಜಿಕ ನ್ಯಾಯ'ವನ್ನು ಮಣ್ಣುಪಾಲು ಮಾಡುವ ಪ್ರಯತ್ನಗಳಾಗಿವೆ. ಈ ತೀರ್ಪಿನ ಹಿಂದೆ ಮನುವಾದಿ ಚಿಂತನೆ ಕೆಲಸ ಮಾಡಿದೆ. ಇದು ನನ್ನ ಅನುಭವದ ಹಿನ್ನೆಲೆಯಲ್ಲಿ ವ್ಯಕ್ತಪಡಿಸುತ್ತಿರುವ ವೈಯಕ್ತಿಕ ಅಭಿಪ್ರಾಯವಾಗಿದೆ. ಯಾವುದೇ ತೀರ್ಪು ಗಳು ಅಂತಿಮವಾಗಿ ಸತ್ಯವನ್ನೇ ಹೇಳುತ್ತವೆ ಎಂದೇನು ಅಲ್ಲ, ಹಲವಾರು ವಿಧಗಳಲ್ಲಿ ಅದನ್ನು ಪರಾಮರ್ಶಿಸುವ ಹಕ್ಕನ್ನು ಸಂವಿಧಾನವು ಒದಗಿಸಿರುವುದರಿಂದ ನಾನು ಮತ್ತು ನೀವೆಲ್ಲಾ ಈ ತೀರ್ಪು ಗಳನ್ನು ಪ್ರಶ್ನಿಸಬಹುದಾಗಿದೆ. ಹೀಗೆಂದವರು ರಾಜ್ಯ ಸಭಾ ಸದಸ್ಯರಾದ ಎಲ್.ಹನುಮಂತಯ್ಯನವರು.

ಅವರು "ದಲಿತರ ವಿರುದ್ಧದ ಸುಪ್ರೀಂ ಕೋರ್ಟಿನ ಇತ್ತೀಚಿನ ಮೂರು ತೀರ್ಪುಗಳು ಮತ್ತು ದಲಿತರ ಮೇಲಿನ ಪರಿಣಾಮಗಳು" ಕುರಿತಂತೆ ನಗರದಲ್ಲಿ ಜುಲೈ 15ರಂದು ಗಾಂಧೀ ಭವನದ ಸಭಾಂಗಣದಲ್ಲಿ "ದಲಿತ ಹಕ್ಕುಗಳ ಸಮಿತಿ" ಹಾಗೂ "ಕರ್ನಾಟಕ ರಾಜ್ಯ ಎಸ್.ಸಿ. ಮತ್ತು ಎಸ್.ಟಿ. ನೌಕರರ ಸಮನ್ವಯ ಸಮಿತಿ"ಯ ಜಂಟಿ ಆಶ್ರಯದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಈ ವಿಚಾರ ಸಂಕಿರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಹಾಗೂ ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿ ನ್ಯಾಯಮೂರ್ತಿ ಹೆಚ್. ಎನ್.ನಾಗಮೋಹನ್ ದಾಸ್ ರು ಭಾಗವಹಿಸಿದ್ದರು. ಇವರೊಂದಿಗೆ ಕರ್ನಾಟಕ ರಾಜ್ಯ ಎಸ್.ಸಿ ಮತ್ತು ಎಸ್.ಟಿ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಡಿ.ಶಿವಶಂಕರ್ ಹಾಗೂ ದಲಿತ್ ಶೋಷಣ್ ಮುಕ್ತಿ ಮಂಚ್ (ಡಿ.ಎಸ್.ಎಂ.ಎಂ)ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ನಾಗರಾಜ ನಂಜುಂಡಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದಲಿತ ಹಕ್ಕುಗಳ ಸಮಿತಿಯ ಕರ್ನಾಟಕ. ರಾಜ್ಯದ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

ಎಲ್. ಹನುಮಂತಯ್ಯ ನವರು ತಮ್ಮ ಉದ್ಘಾಟನಾ ಭಾಷಣದಲ್ಲಿ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ. ತಡೆ ಕಾಯಿದೆ"ಗೆ ತಿದ್ದುಪಡಿ ತರುವ ಮೂಲಕ ಸದರಿ ಕಾಯಿದೆಯನ್ನು ದುರ್ಬಲಗೊಳಿಸಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ನ್ಯಾ. ನಾಗ ಮೋಹನ್ ದಾಸ್ ಪ್ರಕಾರ, ದೇಶದಲ್ಲಿ ಸುಮಾರು 2000ಕ್ಕೂ ಹೆಚ್ಚು ಕಾಯಿದೆಗಳಿವೆ. ಇವೆಲ್ಲವೂ, ಸ್ವಲ್ಪ ಮಟ್ಟಿಗೆ ದುರ್ಬಳಕೆಯಾಗುತ್ತಿವೆ. ಆದರೆ ಇವೆಲ್ಲವನ್ನೂ ಬಿಟ್ಟು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ಈ ದೌರ್ಜನ್ಯ ತಡೆ ಕಾಯಿದೆ ಮೇಲೆ ಮಾತ್ರ ಕಣ್ಣು ಬಿತ್ತು ಏಕೆ? ಇದನ್ನು ದುರ್ಬಲಗೊಳಿಸಿ ಏನನ್ನು ಸಾಧಿಸಲು ಹೊರಟಿದ್ದಾರೆ ಎಂದು ಪ್ರಶ್ನಿಸಿದರು. ಈ ಹಿನ್ನೆಲೆಯಲ್ಲಿ ಇದು ಪೂರ್ವಗ್ರಹ ಪೀಡಿತ ತೀರ್ಪು ಎಂಬ ಸಂಶಯ ಬಂದರೆ ತಪ್ಪೆಂದು ಹೇಳಲು ಸಾಧ್ಯವೇ? ನಮ್ಮ ಕಂಬಾಲಪಲ್ಲಿಯಲ್ಲಿ ಜೀವಂತ ಸುಟ್ಟು ಹಾಕಿದ ಪ್ರಕರಣ ಕಣ್ಣಮುಂದಿದೆ. ಇತ್ತೀಚಿನ ದಾನಮ್ಮಳ ಪ್ರಕರಣ, ರೋಹಿತ್ ವೇಮುಲಾ ಪ್ರಕರಣ, ಊನಾ ಪ್ರಕರಣ, ಹೀಗೆ ನೂರಾರು ಪ್ರಕರಣಗಳು ಸಾಲು ಸಾಲಾಗಿ ಸಾಕ್ಷಿಯಾಗಿವೆ. ಇವೆಲ್ಲವೂ ಗಳ ಹಿಂದೆ ಯಾರ ಕೈವಾಡವಿತ್ತು ಎಂಬುದು ಇಡೀ ದೇಶಕ್ಕೆ ಗೊತ್ತಿರುವ ಸಂಗತಿಯಾಗಿರುವಾಗ, ಸುಪ್ರೀಂ ಕೋರ್ಟ್ ತೀರ್ಪು ನ ಹಿಂದೆ ಯಾರ ಪ್ರೇರಣೆ ಇರಬಹುದೆಂದು ಬೇರೆ ಹೇಳಬೇಕೇ? ಎಂದರು. ಹಾಗಾಗಿ, ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ನಮ್ಮ ಸಂವಿಧಾನದ 117ನೇ ತಿದ್ದುಪಡಿ ಮಸೂದೆ ಈಗಾಗಲೇ ರಾಜ್ಯ ಸಭೆಯಲ್ಲಿ ಅಂಗೀಕೃತವಾಗಿದೆ. ಲೋಕಸಭೆಯಲ್ಲಿ ಮಂಡಿಸಿ, ಅನುಮೋದನೆಗೊಂಡರೆ ಈ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೆಂದು ನ್ಯಾ. ನಾಗಮೋಹನ್ ದಾಸ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಎಲ್ಲರ ಮಾತುಗಳಲ್ಲಿ ಮೂಡಿ ಬಂದ ಹಲವು ಅಂಶಗಳು ಹೀಗಿವೆ:

ಮಾರ್ಚ್ 20, 2018 ರಂದು ಸರ್ವೋಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಾದ ಆದರ್ಶ ಕುಮಾರ್ ಗೋಯೆಲ್ ಮತ್ತು ಉದಯ್ ಲಲಿತ್ ರವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ 1989 ಕ್ಕೆ ಸಂಬಂಧಿಸಿದಂತೆ, ಮಹಾರಾಷ್ಟ್ರ ಸರ್ಕಾರ ಮತ್ತು ಸುಭಾಷ್ ಕಾಶಿನಾಥ್ ಮಹಾಜನ್ ನಡುವಿನ ಮೊಕದ್ದಮೆಯಲ್ಲಿ ಕೊಟ್ಟ ತೀರ್ಪಿನಲ್ಲಿ, ಕಾಯಿದೆಯಲ್ಲಿನ ಪ್ರಮುಖ ಅಂಶಗಳನ್ನು ದುರ್ಬಲಗೊಳಿಸಲಾಗಿದೆ. ಈ ತೀರ್ಪಿನ ಮಾರ್ಗಸೂಚಿಗಳ ಪ್ರಕಾರ ಸದರಿ ಕಾಯಿದೆ ಅಡಿಯಲ್ಲಿ ಆರೋಪಿಯ ಮೇಲೆ ಎಫ್.ಐ.ಆರ್. ದಾಖಲಿಸುವ ಮುನ್ನ ಸರ್ಕಾರಿ ನೌಕರರಾದರೆ, ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರಿಂದ ಪೂರ್ವಾನುಮತಿ ಪಡೆಯಬೇಕು. ಹಾಗೆಯೇ, ಸಾರ್ವಜನಿಕರಾದರೆ ಸಂಬಂಧಿಸಿದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಯಿಂದ ಪೂರ್ವಭಾವಿ ತನಿಖೆ ನಡೆಸಿ ಆರೋಪವನ್ನು ಮೊದಲು ಸಾಬೀತು ಪಡಿಸಿಕೊಳ್ಳಬೇಕು. ಆ ನಂತರ ಎಫ್.ಐ.ಆರ್. ದಾಖಲಿಸಬೇಕು. ಇವಕ್ಕೆಲ್ಲಾ ಲಿಖಿತ ಸಾಕ್ಷಿ ಗಳು ಹಾಗೂ ದಾಖಲೆಗಳು ಕ್ರಮಬದ್ಧ ವಾಗಿರಬೇಕು. ಪ್ರಸ್ತುತ ಇರುವಂತೆ ಪೋಲೀಸರು ಪ್ರಕರಣ ದಾಖಲೆ ಮಾಡಿಕೊಂಡ ತಕ್ಷಣ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಜೈಲಿಗೆ ಕಳುಹಿಸಬೇಕಾಗಿತ್ತು. ಆದರೀಗ ಆರೋಪಿಯನ್ನು ಪ್ರಕರಣ ದಾಖಲಾದ ತಕ್ಷಣ ಪೋಲೀಸರು ವಶಕ್ಕೆ ತೆಗೆದುಕೊಳ್ಳುವಂತಿಲ್ಲ. ಇದು ಮೇಲ್ನೋಟಕ್ಕೆ ಸರಿ ಎನಿಸುತ್ತದೆ, ಆದರೆ, ನಮ್ಮ ಪೊಲೀಸ್ ವ್ಯವಸ್ಥೆ ಹಣ-ಬಲ ಇರುವ ವರ್ಗದವರ ಪರ ಹೆಚ್ಚು ವಕಾಲತ್ತು ವಹಿಸುವುದು ಗೊತ್ತಿರುವ ಸಂಗತಿಯೆಂಬುದನ್ನು ಯಾರು ಅಲ್ಲಗೆಳೆಯಲಾರರು. ಜೊತೆಗೆ ಇದರಿಂದ ದೌರ್ಜನ್ಯಕ್ಕೆ ತುತ್ತಾದ ದಲಿತರಿಗೆ ನ್ಯಾಯ ಸಿಗುವ ಮಾತು ಇರಲಿ, ಬೆದರಿಸಿ ಅವರನ್ನೇ ಒಳ ದಬ್ಬುವ ಸಂಭಾವ್ಯತೆ ಯನ್ನು ತಳ್ಳಿ ಹಾಕುವಂತಿಲ್ಲ.

ಆದಾಗ್ಯೂ, ಈ ತೀರ್ಪಿನಲ್ಲಿ ಬಳಸಿರುವ ಆಕ್ಷೇಪಣೆಗಳಿಗೂ ಮತ್ತು ದಲಿತರ ಮೇಲೆ ನಡೆದಿರುವ ದೌರ್ಜನ್ಯಗಳಿಗೂ ಏನಾದರೂ ನೈಜ ಸಂಬಂಧವಿದೆಯೇ? ಪ್ರಸ್ತುತ ಕಾಯಿದೆ "ಮಿತಿ ಮೀರಿದ ದುರ್ಬಳಕೆ" ಯಾಗುತ್ತಿದೆ. "ಮುಗ್ಧ ಪ್ರಜೆಗಳ ಮೇಲೆ ದುರುಪಯೋಗ ಅಥವಾ ದುರುದ್ದೇಶ ಪೂರ್ವ ಆರೋಪಗಳು" ಹೆಚ್ಚಾಗಿವೆ. "ಸದರಿ ಕಾಯಿದೆಯನ್ನು ಬ್ಲಾಕ್ ಮೇಲ್ ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತಿದೆ' ಎಂಬ ತೀರ್ಪಿನಲ್ಲಿರುವ ಪದಗಳು ಆಧಾರರಹಿತವಾಗಿರುವುದನ್ನು ಅಧಿಕೃತ ಅಂಕಿಅಂಶಗಳು ಮನುಷ್ಯತ್ವ ಇರುವವರಿಗೆ ಮನನ ಮಾಡಿಕೊಡಬಲ್ಲವು.

ಕರ್ನಾಟಕದ ಅಂಕಿಅಂಶಗಳನ್ನು ನೋಡಿದರೆ, 2015-2016ರ ಅವಧಿಯಲ್ಲಿ 2035 ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯಾಗಿರುವುದು ನಗಣ್ಯ ಎಂದು ಎನ್.ಸಿ.ಆರ್.ಬಿ. ವರದಿ ಹೇಳುತ್ತದೆ. ಕಳೆದ ಮೂರು ವರ್ಷ ದಿಂದ ಬಾಕಿಯುಳಿದಿರುವ ಪ್ರಕರಣಗಳ ಸಂಖ್ಯೆ 6484. ಇದರಲ್ಲಿ 779 ಪ್ರಕರಣಗಳು ವಿಚಾರಣೆಗೊಂಡು, ಕೇವಲ 22 ಕ್ಕೆ ಮಾತ್ರ ಶಿಕ್ಷೆಯಾಗಿದೆ. 2011ರಿಂದ 2014 ರವರೆಗೆ ಒಟ್ಟು 6900 ಪ್ರಕರಣದಲ್ಲಿ ಕೇವಲ ಶೇ.1.8 ರಷ್ಟು ಮಾತ್ರ ಶಿಕ್ಷೆಗೆ ಒಳಪಟ್ಟಿರುವುದು. ಭಾರತದಲ್ಲಿ ಕಳೆದ 5 ವರ್ಷಗಳಲ್ಲಿ 2.35 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. 2016 ರಲ್ಲಿಯೇ ಸುಮಾರು 47,369 ದೌರ್ಜನ್ಯ ಪ್ರಕರಣಗಳು ಈ ಸಮುದಾಯದ ಮೇಲೆ ನಡೆದಿವೆ. ಇವುಗಳಲ್ಲಿ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಹರಿಯಾಣ, ಮಧ್ಯ ಪ್ರದೇಶ, ಛತ್ತೀಸ್ ಘಡ್, ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳದ್ದೇ ಸಿಂಹಪಾಲು ಎಂಬುದಾಗಿ ಎನ್.ಸಿ.ಆರ್.ಬಿ ವರದಿ ಹೇಳುತ್ತದೆ.

- ನಾಗರಾಜ ನಂಜುಂಡಯ್ಯ

ಬಾಕಿ ಸಮೇತ ಸಂಬಳ ತಕ್ಷಣ ನೀಡಿ: ಮುನಿಸಿಪಾಲ್ ಕಾರ್ಮಿಕರ ಸಂಘದ ಆಗ್ರಹ

ರಾಜ್ಯದ ವಿವಿಧ ಮುನಿಸಿಪಾಲಿಟಿಗಳಲ್ಲಿನ ಗುತ್ತಿಗೆ ಕಾರ್ಮಿಕರಿಗೆ ಬಾಕಿ ಇರುವ ಸಂಬಳವನ್ನು ತಕ್ಷಣ ಪಾವತಿಸುವಂತೆ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ. ಸಿಐಟಿಯು ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಾದ ನಗರ ಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಲ್ಲಿನ ಹೊರಗುತ್ತಿಗೆ ಆಧಾರ ದುಡಿಯುತ್ತಿರುವ ಪೌರ-ಕಾರ್ಮಿಕರು - ಕಸ ಸಂಗ್ರಾಹಕರು, ಆಟೋಗಳ ಚಾಲಕರು, ವಾಟರ್ ಮ್ಯಾನ್‌ಗಳು, ನಗರದ ಜನತೆಗೆ ಅಗತ್ಯ ಸೇವೆಗಳ ಒದಗಿಸಲು ದುಡಿಯುತ್ತ ಬಂದಿದ್ದಾರೆ. ಈ ಕಾರ್ಮಿಕರ ಸೇವೆಗಳು ಸಮಾಜಕ್ಕೆ ಅತ್ಯಗತ್ಯವಾಗಿದೆ.

ಈ ಕಾರ್ಮಿಕರು ರಾಜ್ಯದ ಹಲವು ವರ್ಷಗಳಿಂದ ಸ್ಥಳಿಯ ಸಂಸ್ಥೆಗಳಲ್ಲಿ ದುಡಿಯುತ್ತಿರುತ್ತಾರೆ. ಈ ಕಾರ್ಮಿಕರು ಕಳೆದ ಹಲವು ತಿಂಗಳುಗಳಿಂದ ಸಂಬಳ ಸಿಗದೆ ಸಂಕಟಮಯವಾದ ಬದುಕು ಸಾಗಿಸುವಂತಾಗಿದೆ. ಹಲವು ತಿಂಗಳುಗಳಿಂದ ಸಂಬಳ ಇಲ್ಲದ ಕಾರಣ- ಮನೆ ಬಾಡಿಗೆ, ಕರೆಂಟ್ ಬಿಲ್, ಕಟ್ಟಲಾಗದೆ ಪರಿತಪಿಸುವಂತಾಗಿದೆ. ಇದಲ್ಲದೆ ಶೈಕ್ಷಣಿಕ ವರ್ಷ ಆರಂಭವಾದ ಕಾರಣ ಮಕ್ಕಳ ಅಡ್ಮಿಶನ್, ಫೀ ಪುಸ್ತಕ, ನೋಟ್ ಬುಕ್, ಶುಲ್ಕ ಇವುಗಳಿಗೆ ಹಣ ಹೊಂದಿಸಲಾಗದೆ ಮಕ್ಕಳ ಶೈಕ್ಷಣಿಕ- ಪ್ರಗತಿ ಕುಂಟಿತವಾಗಿದೆ. ಇದೆ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ನೌಕರರ-ಸಂಬಳ ಇಲ್ಲದೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕರಳು ಹಿಂಡುವಂತಾಗಿದೆ. ಗುತ್ತಿಗೆ ಪೌರ ಕಾರ್ಮಿಕರಗೆ ಸಂಬಳ ಇಲ್ಲದ ಸ್ಥಿತಿಯು ತುಮಕೂರು ಮಹಾ ನಗರ ಪಾಲಿಕೆಯಲ್ಲಿ 2ತಿಂಗಳ, ಚಿ.ನಾ ಹಳ್ಳಿ ಪುರ ಸಭೆಯಲ್ಲಿ 6-7 ತಿಂಗಳು ಸಂಬಳ ನೀಡಿಲ್ಲ. ವಿಜಯಪುರ ಮಹಾ ನಗರ ಪಾಲಿಕೆಯಲ್ಲಿ ಸಹ 5-6 ತಿಂಗಳ, ಚಿತ್ರದುರ್ಗದ ಚಳ್ಳಕರೆ ಕಳೆದ 7 ತಿಂಗಳ ಸಂಬಳ ನೀಡದೆ ಬಾಗಲಕೋಟೆ, ಬೆಳಗಾವಿ. ಉತ್ತರಕನ್ನಡ, ಹಾವೇರಿ, ಯಾದಗೀರ್ ಹಾಸನ ಜಿಲ್ಲೆಗಳಲ್ಲಿ ಸಹ ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರು ತಿಂಗಳುಗಟ್ಟಲೆ ಸಂಬಳವಿಲ್ಲದೆ ಪರಿತಪಿಸುತ್ತಿದ್ದಾರೆ. ಈ ಸಂಬಂದ ತುಮಕೂರು, ವಿಜಯಪುರ, ಬೆಂಗಳೂರು, ಬೆಳಗಾವಿ ಮತ್ತಿತರೆ ಕಡೆಗಳಲ್ಲಿ ಪ್ರತಿಭಟನೆಗಳು ಸಹ ನಡೆಯುತ್ತಿದೆ. ಈ ಅಂಶಗಳನ್ನು ಪರಿಗಣಿಸಿ ರಾಜ್ಯದ ವಿವಿಧ ಮುನಿಸಿಪಾಲಿಟಿಗಳಲ್ಲಿನ ಗುತ್ತಿಗೆ ಕಾರ್ಮಿಕರಿಗೆ ಬಾಕಿ ಇರುವ ಸಂಬಳವನ್ನು ತಕ್ಷಣ ಪಾವತಿಸುವಂತೆ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ. ಸಿಐಟಿಯು ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಸರ್ಕಾರ ಈ ತಕ್ಷಣವೆ ಈ ಸಮಸ್ಯೆಯನ್ನು ಪರಿಹರಿಸದೆ ಇದ್ದಲ್ಲಿ ಗುತ್ತಿಗೆ ಪೌರ ಕಾರ್ಮಿರು, ಮತ್ತಿತರೆ ಕಾರ್ಮಿಕರರು ಹತಾಶೆಯಿಂದ ಅನಾಹುತಕಾರಿ ಕ್ರಮಗಳಿಗೆ ಮುಂದಾಗುವಂತ ಸ್ಥಿತಿ ನಿರ್ಮಾಣವಾಗಲಿದೆ. ಅದಕ್ಕೆ ಸರ್ಕಾರವೇ ಹೊಣೆಯಾಗಲಿದೆ. ಇದಕ್ಕೆ ಅವಕಾಶ ನೀಡದಂತೆ ತಕ್ಷಣವೆ ಕ್ರಮಕ್ಕೆ ಮುಂದಾಗಲು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ. [ಸಿಐಟಿಯು] ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಅಗ್ರಹಿಸಿದೆ

ಹಿಂದಿನ ರಾಜ್ಯ ಸರ್ಕಾರ ಗುತ್ತಿಗೆ ಪೌರ ಕಾರ್ಮಿಕ ನೇರ ನೇಮಕಾತಿ ಹಾಗು ನೇರ ಪಾವತಿಗಾಗಿ ಅದೇಶಿಸಿದ್ದರು. ಇದನ್ನು ಬೆರಳೆಣಿಕೆಯಷ್ಟು ಜಿಲ್ಲೆಗಳಲ್ಲಿ ಮಾತ್ರ ಜಾರಿ ಮಾಡಲಾಗಿದೆ. ಅಲ್ಲದೆ ಹಳೆಯ ಗುತ್ತಿಗೆದಾರರು ಕಾರ್ಮಿಕರ ದುಡಿಮೆಯ 1/3 ಭಾಗದಷ್ಟು ಮೊತ್ತವನ್ನು ಪಿ.ಎಫ್. ಮತ್ತು ಇ.ಎಸ್.ಐ ಗೆ ಜಮಾಯಿಸಿಲ್ಲ. ಅಂತಹ ಗುತ್ತಿಗೆದಾರರ ಇ.ಎಂ.ಡಿ/ಬ್ಯಾಂಕ್ ಗ್ಯಾರೆಂಟಿಗಳನ್ನು ಮುಟ್ಟುಗೋಳಿಸದೆ ಕಾರ್ಮಿಕರ ನ್ಯಾಯಯುತವಾಗಿ ಸೇರಬೇಕಾದ ಎಲ್ಲಾ ಬಾಕಿಗಳನ್ನು ಇತ್ಯರ್ಥ ಪಡಿಸಬೇಕು. ನೇರ ನೇಮಕಾತಿ ನಂತರ 25-30 ವರ್ಷಗಳ ಕಾಲ ಕೆಲಸ ಮಾಡಿ ಬರಿಗೈಯಲ್ಲಿ ಮನೆ ಸೇರುತ್ತಿರು ಪೌರ ಕಾರ್ಮಿರಿಗೆ ಪಿಂಚಣಿ ಹಾಗು ಕಾನೂನು ಬದ್ದವಾಗಿ ಗ್ರಾಜ್ಯೂಯಿಟಿಯನ್ನು ನೀಡಲು ಸರ್ಕಾರ ವನ್ನು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ.[ಸಿಐಟಿಯು] ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಅಗ್ರಹಿಸಿದೆ.

ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ ಸಂಬಳ ಸಿಗದೆ ಅತ್ಮಹತ್ಯೆ ಮಾಡಿಕೊಂಡ ಪೌರ ಕಾರ್ಮಿಕ ಸುಬ್ರಮಣಿ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ಹಾಗೂ ಕುಟುಂಬದ ಸದಸ್ಯರಿಗೆ ಖಾಯಂ ಕೆಲಸ ನಿಡುವಂತೆ ಸಹ ನೀಡಲು ಸರ್ಕಾರವನ್ನು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ರಿ. [ಸಿಐಟಿಯು] ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಕೋರಿದೆ.

- ಸೈಯದ್ ಮುಜೀಬ್

ಚರ್ಚೆ


ತೆರೆದ ಪುಸ್ತಕ ಪರೀಕ್ಷೆಯ ಮೌಲ್ಯಮಾಪನ

ಉದಯ ಗಾಂವ್ಕರ್

ತೆರೆದ ಪುಸ್ತಕ ಪರೀಕ್ಷೆಯೆಂದರೆ ಪುಸ್ತಕದಲ್ಲಿರುವ ಮಾಹಿತಿಯನ್ನೆಲ್ಲ ನಕಲಿಸಿ ಉತ್ತರ ಪತ್ರಿಕೆಗೆ ವರ್ಗಾಯಿಸುವುದಲ್ಲ. ಮಾಹಿತಿಯನ್ನು ಪಡೆಯುವುದು, ಮಾಹಿತಿಯನ್ನು ಆಯುವುದು, ಮಾಹಿತಿಯನ್ನು ಸಂಸ್ಕರಿಸುವುದು ಮತ್ತು ಲಭ್ಯ ಮಾಹಿತಿಯ ಸಹಾಯದಿಂದ ನಿಜ ಜೀವನದ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವುದು ಈ ಮೂಲಕ ಸಾಧ್ಯವಾಗಬೇಕಿದೆ. ತೆರೆದ ಪುಸ್ತಕ ಪರೀಕ್ಷೆಗಳಲ್ಲೂ ಅನೇಕ ಸಾಧ್ಯತೆಗಳಿವೆ. ಪುಸ್ತಕದ ಸಹಾಯ ಪಡೆದು ಲಿಖಿತ ಪರೀಕ್ಷೆಯನ್ನು ಎದುರಿಸುವುದು ಒಂದು ಬಗೆಯಾದರೆ ಮೌಖಿಕ ಪರೀಕ್ಷೆಗಳು, ಸಂದರ್ಶನಗಳು, ಗುಂಪು ಚಟುವಟಿಕೆಗಳು, ಗುರಿ ನಿರ್ಧಾರಿತ ಯೋಜನೆಗಳು ಹೀಗೆ ವಿಭಿನ್ನ ಕಲಿಕೆಯ ಅನುಭವಗಳನ್ನು ಮೌಲ್ಯಮಾಪನದೊಂದಿಗೆ ಜೋಡಿಸುವ ಸಾಧ್ಯತೆ ಈ ಪರೀಕ್ಷೆಗಿದೆ. ಈಗಾಗಲೇ ಸರಕಾರಿ ಶಾಲೆಗಳಲ್ಲಿ ಒಂದರಿಂದ ಮೂರನೇ ತರಗತಿಯವರೆಗೆ ನಲಿ-ಕಲಿ ಪದ್ಧತಿ ಜಾರಿಯಲ್ಲಿದ್ದು ಅಲ್ಲಿ ತೆರೆದ ಪುಸ್ತಕ ಪರೀಕ್ಷೆಯನ್ನು ಹೋಲುವ ಮೌಲ್ಯಮಾಪನ ವಿಧಾನಗಳನ್ನು ಬಳಕೆಮಾಡಲಾಗುತ್ತಿದೆ. ಇನ್ನುಳಿದ ತರಗತಿಗಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ವಿಧಾನಗಳು ಜಾರಿಯಲ್ಲಿದ್ದು ಸಚಿವರು ಸೂಚಿಸಿರುವಂತಹ ತೆರೆದ ಪುಸ್ತಕ ಪರೀಕ್ಷೆಗಳನ್ನು ನಡೆಸಲು ಅಲ್ಲಿ ಅವಕಾಶ ಈಗಾಗಲೇ ಇದೆ. ತೆರೆದ ಪುಸ್ತಕ ಪರೀಕ್ಷೆಗಳು ದಿನಬೆಳಗಾಗುವುದರೊಳಗಾಗಿ ಬದಲಾವಣೆ ತರಬಹುದಾದ ಸುಲಭದ ವಿಧಾನವೆಂದಾಗಲೀ ಅಥವಾ ಕಲಿಕೆ ಮತ್ತು ಕಲಿಕಾರ್ಥಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೂ ತಕ್ಷಣದ ಮತ್ತು ನಿಶ್ಚಿತ ಪರಿಹಾರವೆಂದಾಗಲಿ ತಿಳಿಯಬೇಕಾಗಿಲ್ಲ.

ಶಿಕ್ಷಣವೆಂಬುದು ಪಾತ್ರೆಯನ್ನು ತುಂಬಿಸುವಂತಹ ಕೆಲಸವಲ್ಲ,ಬದಲಾಗಿ,ಅದು ನಮ್ಮೊಳಗಿನ ಜ್ವಾಲೆಯನ್ನು ಆರದಂತೆ ಕಾಪಿಡುವುದು ಎಂದು ಸೊಕ್ರೆಟಿಸ್ ಎಂಬ ಮಹಾನುಭಾವ ಎರಡುವರೆ ಸಾವಿರ ವರ್ಷಗಳ ಹಿಂದೆಯೇ ಹೇಳಿದ್ದರು. ಆದರೆ, ಸಾಕ್ರೆಟಿಸ್‌ಗಿಂತ ಹಳೆಯದಾದ ಚಿಂತನಾ ಪಳೆಯುಳಿಕೆಗಳು ಈಗಲೂ ಇವೆ. ಆ ಕಾರಣದಿಂದಾಗಿಯೇ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತೆರೆದ ಪುಸ್ತಕ ಪರೀಕ್ಷೆಗಳನ್ನು ಅಳವಡಿಸುವುದರ ಮಾತನಾಡಿದಾಗ ಪರ-ವಿರೋಧ ಚರ್ಚೆಗಳು ಆರಂಭವಾಗಿವೆ.

ತೆರೆದ ಪುಸ್ತಕ ಪರೀಕ್ಷೆಗಳು ದಿನಬೆಳಗಾಗುವುದರೊಳಗಾಗಿ ಬದಲಾವಣೆ ತರಬಹುದಾದ ಸುಲಭದ ವಿಧಾನವೆಂದಾಗಲೀ ಅಥವಾ ಕಲಿಕೆ ಮತ್ತು ಕಲಿಕಾರ್ಥಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೂ ತಕ್ಷಣದ ಮತ್ತು ನಿಶ್ಚಿತ ಪರಿಹಾರವೆಂದಾಗಲಿ ತಿಳಿಯಬೇಕಾಗಿಲ್ಲ. ಆದರೆ, ಯಾವುದೇ ಬಗೆಯ ಶೈಕ್ಷಣಿಕ ಸುಧಾರಣೆಯೊಂದರ ಕುರಿತು ನಡೆಯುವ ಚರ್ಚೆಯ ಗುಣಮಟ್ಟವು ಆಯಾ ಕಾಲದ ಸಾಮಾಜಿಕ ಚಲನೆಯ ಗತಿಯನ್ನೂ ನಿರ್ಧರಿಸುತ್ತದೆ ಎಂಬುದನ್ನು ಮರೆಯಬಾರದು. ಜ್ಞಾನದ ಉತ್ಪಾದನೆ ಮತ್ತು ಅದರ ಬಳಕೆಯಲ್ಲಿನ ಪ್ರಗತಿಯೇ ದೇಶದ ಒಟ್ಟೂ ಪ್ರಗತಿಯ ಸೂಚಕವಾಗಿರುವ ಈ ಕಾಲಘಟ್ಟದಲ್ಲಂತೂ ಶೈಕ್ಷಣಿಕ ಕ್ಷೇತ್ರದಲ್ಲಿ ತರಬೇಕಾದ ಸುಧಾರಣೆಗಳ ಯಾವ ಚರ್ಚೆಯನ್ನೂ ಉಪೇಕ್ಷಿಸುವಂತಿಲ್ಲ.



ಮೌಲ್ಯಮಾಪನವು ಶಿಕ್ಷಣದ ಅವಿಭಾಜ್ಯ ಅಂಗ. ಭಯದ ವಾತಾವರಣವನ್ನು ಸೃಷ್ಟಿಸಿ ಮಗುವನ್ನು ಕಲಿಯುವಂತೆ ಮಾಡುವುದು ಮೌಲ್ಯಮಾಪನದ ಉದ್ದೇಶವಲ್ಲ. ಮಕ್ಕಳಿಗೆ 'ನಿಧಾನ ಕಲಿಯುವವರು' 'ಪ್ರತಿಭಾವಂತರು' 'ಸಮಸ್ಯಾತ್ಮಕ ಮಕ್ಕಳು' ಮುಂತಾದ ಹಣೆಪಟ್ಟಿ ಕಟ್ಟುವುದೂ ಮೌಲ್ಯಮಾಪನದ ಕೆಲಸವಲ್ಲ. ಹೀಗೆ ಮಾಡುವುದರಿಂದ ಕಲಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಮಕ್ಕಳ ಮೇಲೆ ಹೊರಿಸಿದಂತಾಗುತ್ತದೆ. ಕಲಿಕೆಗಾಗಿ ಮೌಲ್ಯಮಾಪನವಿರುತ್ತದೆಯೇ ಹೊರತು ಮೌಲ್ಯಮಾಪನಕ್ಕಾಗಿ ಕಲಿಕೆಯಲ್ಲ. ಶಿಕ್ಷಣವು ಮಗುವಿಗೆ ಬದುಕಲು ಕಲಿಸಬೇಕು. ನಾಗರಿಕ ಜವಾಬ್ದಾರಿಗಳನ್ನು ಅರ್ಥಪೂರ್ಣವಾಗಿ ನಿಭಾಯಿಸುವ ಮತ್ತು ವ್ಯಕ್ತಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಶಿಕ್ಷಣ ಇಂದಿನ ಅವಶ್ಯಕತೆ. ನಮ್ಮ ರಾಷ್ಟ್ರೀಯ ಗುರಿಗಳ ಈಡೇರಿಕೆಗೆ ಶಿಕ್ಷಣವೇ ಸಾಧನ. ಇಂತಹ ಶಿಕ್ಷಣವನ್ನು ನೀಡುವಲ್ಲಿ ನಾವೆಷ್ಟು ಸಫಲರಾಗಿದ್ದೇವೆ ಎಂಬ ಕುರಿತು ವಿಶ್ವಾಸಾರ್ಹ ಹಿಮ್ಮಾಹಿತಿಯನ್ನು ನೀಡುವಲ್ಲಿ ಮೌಲ್ಯಮಾಪನವು ನೆರವಾಗುತ್ತದೆ.

ಮಗುವಿಗೂ ಸಹ ತನ್ನ ಗುರಿ-ಸಾಧನೆಗಳನ್ನು ಮತ್ತು ತನ್ನ ಮಿತಿಗಳನ್ನು ಗುರುತಿಸಲು, ಮುಂದಿನ ಕಲಿಕೆಯನ್ನು ಯೋಜಿಸಲು ಸಹಕರಿಸುತ್ತದೆ. ಬಾಯಿಪಾಠ ಆಧಾರಿತ ಲಿಖಿತ ಪರೀಕ್ಷೆಯು ಮೌಲ್ಯಮಾಪನದ ಒಂದು ತಂತ್ರವಷ್ಟೇ!. ಮಗುವಿನ ಉರುಹೊಡೆಯುವ ಸಾಮರ್ಥ್ಯವನ್ನು ಅಳೆಯುವ, ಸ್ಮರಣ ಶಕ್ತಿಯನ್ನು ಮೌಲ್ಯಾಂಕನಗೊಳಿಸುವ ತಂತ್ರವಷ್ಟೇ!. ಆದರೆ, ಮಗುವಿನ ಸೃಜನಶೀಲತೆ, ವಿಶ್ಲೇಷಣಾ ಮನೋಭಾವ, ಹೊಸ ಸಂದರ್ಭಕ್ಕೆ ಪ್ರತಿಕ್ರಿಯಿಸುವ ರೀತಿಯನ್ನು ಅಳೆಯುವಲ್ಲಿ ಅಸಡ್ಡೆ ತೋರುವ ಪರೀಕ್ಷೆಗಳಿಗಾಗಿ ನಮ್ಮ ಮಕ್ಕಳು ಸಿದ್ಧಗೊಳ್ಳುತ್ತಾ, ಬಾಲ್ಯದ ಧಾರಾಳ ಸಂತಸ ಮತ್ತು ರಚನಾತ್ಮಕ ಚೈತನ್ಯವನ್ನು ಕಳೆದುಕೊಳ್ಳುತ್ತಿದ್ದಾರೆಂಬ ಆತಂಕ ಸದ್ಯ ನಮ್ಮೆದುರಿಗಿದೆ.

ಮೌಲ್ಯಮಾಪನ ಕ್ರಿಯೆಯಲ್ಲಿ ಲಿಖಿತ ಪರೀಕ್ಷೆಗಳು ಮಹತ್ವದ ಪಾತ್ರವನ್ನೇ ವಹಿಸುತ್ತವೆ. ಆದರೆ, ಅವುಗಳನ್ನು ಹೇಗೆ ವಿನ್ಯಾಸಗೊಳಿಸಲಾಗಿದೆ, ಶೈಕ್ಷಣಿಕ ಉದ್ದೇಶಗಳನ್ನು ಅಳೆಯುವಲ್ಲಿ ಮತ್ತು ಈಡೇರಿಸುವಲ್ಲಿ ಅವು ಸಕ್ಷಮವಾಗಿವೆಯೇ ಎಂಬ ಪ್ರಶ್ನೆಗಳು ಬಹು ಮುಖ್ಯ. ಪರೀಕ್ಷೆ ಎಷ್ಟು ಉತ್ತಮವಾಗಿದೆ ಎಂಬುದನ್ನು ಮಕ್ಕಳ ಉತ್ತರಗಳಲ್ಲಿ ಹುಡುಕುವ ಬದಲು ವಿದ್ಯಾರ್ಥಿಗಳು ಎದುರಿಸಿದ ಪ್ರಶ್ನೆಗಳ ಮೂಲಕವೇ ತೀರ್ಮಾನಿಸಬಹುದು! ವಿದ್ಯಾರ್ಥಿಗಳು ತಮಗೆ ತಾವೇ ಎಷ್ಟು ಪ್ರಶ್ನೆಗಳನ್ನು ಹಾಕಿಕೊಳ್ಳುವಂತೆ ಪರೀಕ್ಷೆಗಾಗಿ ಸಿದ್ಧಪಡಿಸಿದ ಪ್ರಶ್ನೆ ಪತ್ರಿಕೆಯು ಪ್ರೇರೇಪಿಸಿದೆ ಎಂಬುದು ಪರೀಕ್ಷೆಯ ಯಶಸ್ಸನ್ನು ನಿರ್ಧರಿಸುತ್ತದೆ. ಇಷ್ಟಾಗಿಯೂ, ಈಗಿರುವ ಪರೀಕ್ಷೆಯೇ ಮೌಲ್ಯಮಾಪನದ ಏಕಮೇವ ತಂತ್ರವಲ್ಲ. ಈ ಪರೀಕ್ಷೆಯ ಮೂಲಕವೇ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಅಳತೆಮಾಡಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಶಿಕ್ಷಕರ ಅವಲೋಕನ, ಸ್ನೇಹಿತರ ಹಿಮ್ಮಾಹಿತಿ, ಸ್ವ ಅವಲೋಕನ ಮತ್ತಿತ್ತಾದಿ ಹತ್ತಾರು ವಿಧದ ತಂತ್ರಗಳನ್ನು ಈಗಾಗಲೆ ಬಳಸಲಾಗುತ್ತಿದೆ. ನೇರ ಪರೀಕ್ಷೆಗಳಲ್ಲೂ ಐಚ್ಛಿಕ ಪರೀಕ್ಷೆಗಳು, ಸ್ವ-ಪರೀಕ್ಷೆಗಳು, ತೆರೆದ ಪುಸ್ತಕ ಪರೀಕ್ಷೆಗಳು, ಬೇಡಿಕೆಯ ಪರೀಕ್ಷೆಗಳು, ಗುಂಪು ಪರೀಕ್ಷೆಗಳು ಹೀಗೆ ಹತ್ತು ಹಲವು ಸಾಧ್ಯತೆಗಳು ಎದುರಿಗಿವೆ. ನೆನಪನ್ನೇ ಆಧರಿಸುವ ಲಿಖಿತ ಪರೀಕ್ಷೆಗಳನ್ನು ಮೀರಿ ನಾವು ಯೋಚಿಸಬೇಕಿದೆ.

ಇಪ್ಪತ್ತೊಂದನೇ ಶತಮಾನದ ಜ್ಞಾನಸಮಾಜವನ್ನು ಕಟ್ಟಲು ಪರೀಕ್ಷಾ ಸುಧಾರಣೆಗಳು ಅವಶ್ಯಕ ಎಂದು 2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು ಅಭಿಪ್ರಾಯ ಪಡುತ್ತದೆ. ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟನ್ನು ರೂಪಿಸುವ ಹಿನ್ನೆಲೆಯಲ್ಲಿ ರಚಿಸಲಾದ ಪರೀಕ್ಷಾ ಸುಧಾರಣೆಗಳ ಕುರಿತಾದ ರಾಷ್ಟ್ರೀಯ ದೃಷ್ಟಿಗುಂಪು ತನ್ನ ವರದಿಯಲ್ಲಿ ಪರೀಕ್ಷಾ ಸುಧಾರಣೆಗಳು ಏಕೆ ಅವಶ್ಯಕ ಎಂಬುದನ್ನು ವಿವರಿಸುತ್ತದೆ. ಅದರ ಪ್ರಕಾರ, ಇಪ್ಪತ್ತೊಂದನೇ ಶತಮಾನದ ಜ್ಞಾನ ಸಮಾಜವನ್ನು ಕಟ್ಟಲು ನಮ್ಮ ಮಕ್ಕಳು ಉರುಹೊಡೆಯುವುದರಲ್ಲಿ ಪ್ರವೀಣರಾದರೆ ಸಾಲದು, ಅವರು ಸೃಜನಶೀಲರೂ ಅಸಾಮಾನ್ಯ ಸಮಸ್ಯಾ ಪರಿಹಾರಕರೂ ಆಗಿರಬೇಕಾಗಿದೆ. ಆ ಕಾರಣಕ್ಕಾಗಿ, ವಿದ್ಯಾರ್ಥಿಗಳು ಮೇಲ್ದರ್ಜೆಯ ಕೌಶಲಗಳಾದ ತರ್ಕ, ವಿಶ್ಲೇಷಣೆ, ಪರ್ಯಾಯ ಚಿಂತನೆ, ಪ್ರತಿಚಿಂತನೆ, ವಿವೇಚನೆ, ನಿರ್ವಚನೆಯ ಮೂಲಕ ಜ್ಞಾನದ ರಚನೆಗಳನ್ನು ಕಟ್ಟಿಕೊಳ್ಳುವುದು ಅನಿವಾರ್ಯ.

ಮೆಖಾಲೆ ಪ್ರಣೀತ ಭಾರತೀಯ ಶಿಕ್ಷಣ ವ್ಯವಸ್ಥೆಯು ಗುಮಾಸ್ತರನ್ನು ಸಿದ್ಧಪಡಿಸುವ ಕಾರ್ಖಾನೆಯೆಂಬ ಜನಪ್ರಿಯ ಗ್ರಹಿಕೆಯಿದೆ. ಇದು ಬಹುಮಟ್ಟಿಗೆ ಸತ್ಯವೂ ಆಗಿದ್ದರೂ ನಮ್ಮ ಶಿಕ್ಷಣ ವ್ಯವಸ್ಥೆಯ ಇನ್ನೊಂದು ಲಕ್ಷಣವು ಈ ಜನಪ್ರಿಯ ಗ್ರಹಿಕೆಯಲ್ಲಿ ಮರೆಯಾಗಿದೆ. ಅದೆಂದರೆ, ನಮ್ಮ ಶಿಕ್ಷಣ ವ್ಯವಸ್ಥೆಯು ಸ್ಮೃತಿ-ಸಂಸ್ಕೃತಿಯವರಿಗಾಗಿ ರೂಪಿಸಲ್ಪಟ್ಟಿದೆಯೇ ವಿನಃ ಶ್ರಮ-ಸಂಸ್ಕೃತಿಯವರಿಗಾಗಿ ಅಲ್ಲ. ಕೊಳಲು, ಡೋಲು, ಬೆತ್ತ-ಬಿದಿರಿನ ಕೆಲಸಗಳಲ್ಲಿ ಅತ್ಯಂತ ಕುಶಲರಾದ ಉಡುಪಿ, ದಕ್ಷಿಣ ಕನ್ನಡ ಭಾಗದಲ್ಲಿರುವ ಕೊರಗರು ಬಾಯಿಪಾಠದ ಶಾಲಾ ವ್ಯವಸ್ಥೆಯಿಂದ ದೂರವೇ ಉಳಿಯಲು ಈಗಿರುವ ಕಲಿಕೆಯ ಪರಿಸರ ಬಹು ಮಟ್ಟಿಗೆ ಕಾರಣ. ಇದನ್ನು ರಾಷ್ಟ್ರೀಯ ದೃಷ್ಟಿಗುಂಪು ಗುರುತಿಸಿ, ಈಗಿರುವ ಮೌಲ್ಯಮಾಪನ ಪದ್ಧತಿಯು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿಲ್ಲ ಎಂದಿದೆ. ಒಂದು ಅಳತೆ ಎಲ್ಲರಿಗೂ ಸರಿಹೋಗುತ್ತದೆ ಎಂಬ ಧೋರಣೆಯೂ ಶಿಕ್ಷಣದಲ್ಲಿ ಎಲ್ಲರ ಒಳಗೊಳ್ಳುವಿಕೆಯನ್ನು ಖಚಿತಪಡಿಸುವ ಕಾರ್ಯವನ್ನು ಸಾಕಷ್ಟು ನಿಧಾನಗೊಳಿಸಿದೆ. ಪ್ರತಿ ಮಗುವೂ ಅನನ್ಯವಾಗಿರುವುದರಿಂದ ಪ್ರತಿ ಮಗುವನ್ನೂ ಪ್ರತ್ಯೇಕ ಅಳತೆಗೋಲಿನಲ್ಲಿ ಮೌಲ್ಯಮಾಪನ ಮಾಡುವುದು ಅನಿವಾರ್ಯ. ಬದಲಾದ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರತಿ ಮಗುವಿನ ವಿಶಿಷ್ಟತೆಗೂ ಬೆಲೆಯಿದೆ ಎಂಬುದನ್ನು ನಾವು ಅರಿಯಬೇಕಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ, ಈಗಿರುವ ಪರೀಕ್ಷೆಗಳು ಮಗುವಿನಲ್ಲಿ ಅನಗತ್ಯದ ಒತ್ತಡವನ್ನು ಉಂಟುಮಾಡುತ್ತವಲ್ಲದೆ ಆ ಮಗುವಿನ ಸಂತಸದ ಬಾಲ್ಯವನ್ನು ವಂಚಿಸುತ್ತವೆ.



ತೆರೆದ ಪುಸ್ತಕ ಪರೀಕ್ಷೆಯೆಂದರೆ ಪುಸ್ತಕದಲ್ಲಿರುವ ಮಾಹಿತಿಯನ್ನೆಲ್ಲ ನಕಲಿಸಿ ಉತ್ತರ ಪತ್ರಿಕೆಗೆ ವರ್ಗಾಯಿಸುವುದಲ್ಲ. ಮಾಹಿತಿಯನ್ನು ಪಡೆಯುವುದು, ಮಾಹಿತಿಯನ್ನು ಆಯುವುದು, ಮಾಹಿತಿಯನ್ನು ಸಂಸ್ಕರಿಸುವುದು ಮತ್ತು ಲಭ್ಯ ಮಾಹಿತಿಯ ಸಹಾಯದಿಂದ ನಿಜ ಜೀವನದ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವುದು ಈ ಮೂಲಕ ಸಾಧ್ಯವಾಗಬೇಕಿದೆ. ತೆರೆದ ಪುಸ್ತಕ ಪರೀಕ್ಷೆಗಳಲ್ಲೂ ಅನೇಕ ಸಾಧ್ಯತೆಗಳಿವೆ. ಪುಸ್ತಕದ ಸಹಾಯ ಪಡೆದು ಲಿಖಿತ ಪರೀಕ್ಷೆಯನ್ನು ಎದುರಿಸುವುದು ಒಂದು ಬಗೆಯಾದರೆ ಮೌಖಿಕ ಪರೀಕ್ಷೆಗಳು, ಸಂದರ್ಶನಗಳು, ಗುಂಪು ಚಟುವಟಿಕೆಗಳು, ಗುರಿ ನಿರ್ಧಾರಿತ ಯೋಜನೆಗಳು ಹೀಗೆ ವಿಭಿನ್ನ ಕಲಿಕೆಯ ಅನುಭವಗಳನ್ನು ಮೌಲ್ಯಮಾಪನದೊಂದಿಗೆ ಜೋಡಿಸುವ ಸಾಧ್ಯತೆ ಈ ಪರೀಕ್ಷೆಗಿದೆ. ಪ್ರಶ್ನೆಪತ್ರಿಕೆಯೂ ಸೇರಿದಂತೆ ವಿಭಿನ್ನ ಮೌಲ್ಯಮಾಪನ ಸಾಧನಗಳನ್ನು ಈ ಬಗೆಯ ಪರೀಕ್ಷೆಗಾಗಿ ಸಿದ್ಧಪಡಿಸಿಕೊಳ್ಳುವುದಕ್ಕೆ ವಿಶೇಷ ಪರಿಣಿತಿಯೂ ಅವಶ್ಯಕ. ಶಿಕ್ಷಕರಿಗೆ ಈ ಬಗೆಯಲ್ಲಿ ಸಿದ್ಧಗೊಳ್ಳುವುದಕ್ಕೆ ಮಾರ್ಗದರ್ಶನ ಅವಶ್ಯ. ಎಲ್ಲಕ್ಕಿಂತ ಹೆಚ್ಚಾಗಿ, ಈ ಬಗೆಯ ಸುಧಾರಣೆಗಳನ್ನು ಜಾರಿಗೊಳಿಸುವಾಗ ಎಲ್ಲ ಹಂತದ ಅನುಷ್ಠಾನ ಸಿಬ್ಬಂದಿಗಳಿಗೂ ಪೂರಕ ಕೌಶಲ ಮತ್ತು ಸಕಾರಾತ್ಮಕ ಮನೋಭಾವ ಇರಬೇಕಾಗುತ್ತದೆ. ಈಗಾಗಲೇ ಸರಕಾರಿ ಶಾಲೆಗಳಲ್ಲಿ ಒಂದರಿಂದ ಮೂರನೇ ತರಗತಿಯವರೆಗೆ ನಲಿ-ಕಲಿ ಪದ್ಧತಿ ಜಾರಿಯಲ್ಲಿದ್ದು ಅಲ್ಲಿ ತೆರೆದ ಪುಸ್ತಕ ಪರೀಕ್ಷೆಯನ್ನು ಹೋಲುವ ಮೌಲ್ಯಮಾಪನ ವಿಧಾನಗಳನ್ನು ಬಳಕೆಮಾಡಲಾಗುತ್ತಿದೆ. ಇನ್ನುಳಿದ ತರಗತಿಗಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ವಿಧಾನಗಳು ಜಾರಿಯಲ್ಲಿದ್ದು ಸಚಿವರು ಸೂಚಿಸಿರುವಂತಹ ತೆರೆದ ಪುಸ್ತಕ ಪರೀಕ್ಷೆಗಳನ್ನು ನಡೆಸಲು ಅಲ್ಲಿ ಅವಕಾಶ ಈಗಾಗಲೇ ಇದೆ.

ಪರೀಕ್ಷೆಗಳಲ್ಲಿ ಕೇಳಲಾಗುವ ಪ್ರಶ್ನೆಗಳು ಹೆಚ್ಚು ವಸ್ತುನಿಷ್ಠವಾಗಿರಬೇಕೆಂದು ಒತ್ತಾಯಿಸುವವರು ತೆರೆದ ಪುಸ್ತಕ ಪರೀಕ್ಷೆಯೂ ಸೇರಿದಂತೆ ಎಲ್ಲ ಬಗೆಯ ಹೊಸ ಸುಧಾರಣಾ ಕ್ರಮಗಳ ಕುರಿತು ಆಕ್ಷೇಪಗಳನ್ನೆತ್ತಬಹುದು. ಆದರೆ, ಪ್ರಶ್ನೆಗಳು ವಸ್ತುನಿಷ್ಠವಾಗಿರಬೇಕೆಂಬ ಅಭಿಪ್ರಾಯ ಸ್ಪರ್ಧಾತ್ಮಕ ನೆಲೆಯಿಂದ ಬಂದಿರುವಂತಹದ್ದು. ಇದು ಮಗುವಿನ ಸಹಜ ಕಲಿಕೆಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರಿತವಾದದ್ದಲ್ಲ. ವಸ್ತುನಿಷ್ಠತೆಯ ಕುರಿತು ನಮಗಿರುವ ಅನವಶ್ಯಕ ಕಾಳಜಿಯಿಂದಾಗಿ ಇಂದು ಪರೀಕ್ಷೆಗಳು ಕಲಿಕೆಯ ಕ್ರಿಯೆಯ ಭಾಗಗಳಾಗಿ ಉಳಿದಿಲ್ಲ. ಪರೀಕ್ಷೆಗಳು ಕೇವಲ ಕಲಿಕೆಯ ಫಲಿತಗಳನ್ನಷ್ಟೇ ಮೌಲ್ಯಮಾಪನ ಮಾಡಿದರೆ ಸಾಲದು; ಅವು ಕಲಿಕೆಯ ಅನುಭವಗಳನ್ನೂ ಮೌಲ್ಯಮಾಪನ ಮಾಡುವಂತಿರಬೇಕು. ತೆರೆದ ಪುಸ್ತಕ ಪರೀಕ್ಷೆಗಳು ಮಗುವಿನ ಕಲಿಕೆಯ ಆಸಕ್ತಿಯನ್ನು ಕುಂದಿಸುತ್ತದೆ ಎನ್ನುವವರಿದ್ದಾರೆ. ಹೀಗೆ ಟೀಕಿಸುವವರು ಕಲಿಕೆಯೆಂದರೆ ಕ'ಂಠ'ಪಾ'ಠ'ವೆ'ಂ'ದು' ಭಾವಿಸಿರುತ್ತಾರೆ.

ಶಿಕ್ಷಕರು ಬಳಸುವ ಮೌಲ್ಯಮಾಪನ ತಂತ್ರಗಳು ಮಗುವಿನ ಬಲ ಮತ್ತು ದೌರ್ಬಲ್ಯಗಳಿಗೆ ಸಂವೇದನಾ ಶೀಲವಾಗಿರಬೇಕು. ಈ ಮೂಲಕ ಮೌಲ್ಯಮಾಪನವು ಮಾನವೀಯಗೊಳ್ಳಬೇಕಾಗಿದೆ. ಜೊತೆಗೆ, ಮೌಲ್ಯಮಾಪನವನ್ನು ಒಂದು ಅರ್ಥಪೂರ್ಣ ತರಗತಿ ಸಂವಹನವಾಗಿಯೂ ಗ್ರಹಿಸುವ ಅವಶ್ಯಕತೆಯಿದೆ. ಪಾತ್ರೆಯಲ್ಲಿನ ಒಂದು ಅಗುಳು ಬೆಂದಿದೆಯೆಂದರೆ ಇಡೀ ಪಾತ್ರೆಯ ಅನ್ನ ಬೆಂದಿದೆಯೆಂಬ ತೀರ್ಮಾನಕ್ಕೆ ಬರುವುದು ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ತೀರಾ ತಪ್ಪಾದ ಮಾರ್ಗ. ಪರೀಕ್ಷೆಯೂ ಕಲಿಕೆಯಾಗುವ, ಪ್ರಶ್ನೆಗಳಿಗೆ ಉತ್ತರಿಸುವುವಾಗ ವಿದ್ಯಾರ್ಥಿಯ ಅನುಭವ ಮತ್ತು ವಿವೇಚನೆಯ ಪ್ರತಿಫಲನವಾಗಿಸುವ ಮೌಲ್ಯಮಾಪನ ಈಗಿನ ಅಗತ್ಯ. ದಕ್ಷವಾಗಿ ನಿರ್ವಹಿಸಲ್ಪಟ್ಟರೆ ತೆರೆದ ಪುಸ್ತಕ ಪರೀಕ್ಷೆಯು ಪರಿಹಾರಗಳನ್ನು ಒದಗಿಸಬಲ್ಲದು. ಈ ಕುರಿತು ಬೆಳಕು ಚೆಲ್ಲುವಂತಹ ಇನ್ನಷ್ಟು ಚರ್ಚೆಗಳು ನಡೆಯಬೇಕಿದೆ. ■

ಅಮೆರಿಕದ ಆಗ್ರಹಗಳಿಗೆ ಶರಣಾಗುತ್ತಿರುವ ಮೋದಿ ಸರಕಾರ

ರಾಷ್ಟ್ರೀಯ ಹಿತಗಳನ್ನು ಬಲಿಗೊಡುತ್ತಲೇ ಅವನ್ನು ರಕ್ಷಿಸುವ ನಾಟಕ



ಅಮೆರಿಕದ ಒಬ್ಬ ಕೆಳಹಂತದ ಅಧಿಕಾರಿ ಧಾರ್ಷ್ಟ್ಯದಿಂದ ಭಾರತದ ಪ್ರಧಾನಿಗೇ ಇರಾನ್‌ನಿಂದ ತೈಲ ಆಮದನ್ನು ಕಡಿತಗೊಳಿಸುವಂತೆ ಸೂಚಿಸಿರುವುದು ಒಂದು ಘೋರ ಅವಮಾನವಾಗಿದ್ದು ಯಾವುದೇ ಸ್ವಾಭಿಮಾನಿ ಸರಕಾರ ಇದನ್ನು ಸಹಿಸಿಕೊಳ್ಳಲಾಗದು. ಆದರೆ ಅಮೆರಿಕದೊಂದಿಗೆ ಅಡಿಯಾಳು ಮೈತ್ರಿಯ ಬಲೆಗೆ ಬಿದ್ದಿರುವ ಮೋದಿ ಸರಕಾರ ಇರಾನ್‌ನಿಂದ ತೈಲ ಆಮದನ್ನು ಕಡಿಮೆ ಮಾಡಲು ಆರಂಭಿಸಿದೆ. ರಷ್ಯಾದಿಂದ ಎಸ್–400 ಕ್ಷಿಪಣಿ ವ್ಯವಸ್ಥೆಯನ್ನು ಭಾರತ ಖರೀದಿಸಬಾರದೆಂದೂ ಅಮೆರಿಕ ಬೆದರಿಕೆ ಹಾಕುತ್ತಿದೆ. ಇಲ್ಲಿ ಕೂಡ ಬಹುಕಾಲದಿಂದ ರಕ್ಷಣಾ ಸಾಧನಗಳನ್ನು ಸರಬರಾಜು ಮಾಡುತ್ತಿದ್ದ ರಷ್ಯಾದೊಂದಿಗಿನ ಸಂಬಂಧವನ್ನು ಕಡಿಯುವ ಮೂಲಕ ಭಾರತದ ರಾಷ್ಟ್ರೀಯ ಹಿತಗಳನ್ನು ಬಲಿಕೊಡಲಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಹೀಗೆ ವಾಸ್ತವವಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಡುತ್ತಿರುವಾಗಲೇ ಅದನ್ನು ರಕ್ಷಿಸುತ್ತಿದ್ದೇನೆ ಎಂದು ಮೋದಿ ಸರಕಾರ ನಟಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಅವಕಾಶ ನೀಡಬಾರದು.



ಪ್ರಕಾಶ ಕಾರಟ್

ಅಮೆರಿಕದೊಂದಿಗಿನ ವ್ಯೂಹಾತ್ಮಕ ಮೈತ್ರಿ ಮತ್ತು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳ ನಡುವಿನ ವೈರುಧ್ಯ ಮುನ್ನೆಲೆಗೆ ಬರುತ್ತಿದೆ. ರಾಷ್ಟ್ರೀಯ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೋದಿ ಸರಕಾರ ಈ ವೈರುಧ್ಯವನ್ನು ಬಗೆಹರಿಸಲು ಮುಂದಾಗುವುದಿಲ್ಲ. ಅದರ ಬದಲಿಗೆ, ಟ್ರಂಪ್ ಆಡಳಿತದ ಬೇಡಿಕೆಗಳಿಗೆ ಮಣಿಯಲು ಅದು ಈಗಾಗಲೇ ಸನ್ನದ್ಧವಾಗುತ್ತಿದೆ.

ಇರಾನ್ ಜೊತೆ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ಇರಿಸಿಕೊಳ್ಳುವುದು, ಅಥವಾ ರಷ್ಯಾದಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಮೋದಿ ಸರಕಾರ ಅನುಸರಿಸಿದ ಸಾರ್ವಜನಿಕ ಧೋರಣೆಯು ರಾಷ್ಟ್ರೀಯ ಸಾರ್ವಭೌಮತೆಗೆ ಮತ್ತು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಪರಂಪರೆಗೆ ಅನುಗುಣವಾಗಿಯೇ ಇದೆ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಆದರೆ, ವಾಸ್ತವವಾಗಿ ಈ ಸಾರ್ವಜನಿಕ ಧೋರಣೆಯು ಬಿಜೆಪಿ ಆಡಳಿತಗಾರರು ಅಳವಡಿಸಿಕೊಳ್ಳುತ್ತಿರುವ ಪುಕ್ಕಲುತನ ಹಾಗೂ ಶರಣಾಗತಿಯ ಧೋರಣೆಯನ್ನು ಮುಚ್ಚಿಹಾಕುವ ಮುಖವಾಡವಾಗಿದೆ.

ಉದಾಹರಣೆಗೆ ಇರಾನ್‌ನಿಂದ ತೈಲ ಆಮದಿನ ವಿಷಯವನ್ನೇ ತೆಗೆದುಕೊಳ್ಳೋಣ. ಸದ್ಯಕ್ಕೆ ಇರಾನ್ ಭಾರತಕ್ಕೆ ಮೂರನೇ ಅತಿದೊಡ್ಡ ತೈಲ ಸರಬರಾಜು ದೇಶವಾಗಿದೆ. ಇರಾನ್‌ನೊಂದಿಗಿನ ಪರಮಾಣು ಒಪ್ಪಂದದಿಂದ ಹಿಂದೆ ಸರಿದ ಅಮೆರಿಕ, ಮತ್ತೆ ಇರಾನ್ ಮೇಲೆ ನಿರ್ಬಂಧಗಳನ್ನು ವಿಧಿಸುವುದಾಗಿ ಮೇ ತಿಂಗಳಲ್ಲಿ ಪ್ರಕಟಿಸಿತ್ತು. ನವೆಂಬರ್ ನಾಲ್ಕರಂದು ಕೊನೆಗೊಳ್ಳುವ 180 ದಿನಗಳ ಅವಧಿ ಮುಕ್ತಾಯದ ನಂತರ ಪೆಟ್ರೋಲಿಯಂ ಕ್ಷೇತ್ರದ ಮೇಲಿನ ನಿರ್ಬಂಧಗಳು ಜಾರಿಗೆ ಬರಲಿವೆ.

ಭಾರತ ಸರಕಾರದ ಸಾರ್ವಜನಿಕ ಅಭಿಪ್ರಾಯವನ್ನು ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಪ್ರಕಟಿಸಿದ್ದಾರೆ. ವಿಶ್ವಸಂಸ್ಥೆ ಹೇರುವ ನಿರ್ಬಂಧಗಳನ್ನು ಮಾತ್ರವೇ ಭಾರತ ಅಂಗೀಕರಿಸಲಿದೆಯೇ ಹೊರತು ಯಾವುದೇ ಒಂದು ದೇಶದ ನಿರ್ಬಂಧಗಳನ್ನಲ್ಲ ಎಂದು ಇರಾನ್‌ನ ವಿದೇಶಾಂಗ ಸಚಿವರ ಜೊತೆಗಿನ ಒಂದು ಸಭೆಯ ನಂತರ ಅವರು ಘೋಷಿಸಿದರು. ಆದರೆ ಅದಾದ ಬೆನ್ನಲ್ಲೇ ಇರಾನ್‌ನಿಂದ ತೈಲ ಆಮದನ್ನು ಕಡಿತಗೊಳಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಜೂನ್ 24ರಂದು ತೈಲ ಸಂಸ್ಕರಣೆ ಕಂಪೆನಿಗಳೊಂದಿಗೆ ಸಭೆ ನಡೆಸಿದ ಪೆಟ್ರೋಲಿಯಂ ಖಾತೆ, ಇರಾನ್‌ನ ತೈಲ ಆಮದಿಗೆ ಪರ್ಯಾಯವನ್ನು ಹುಡುಕುವಂತೆ ಸೂಚಿಸಿತು. ಹಾಗೂ ಇರಾನ್‌ನಿಂದ ಗಣನೀಯ ಪ್ರಮಾಣದಲ್ಲಿ ತೈಲ ಖರೀದಿಯ ಕಡಿತ ಅಥವಾ ಖರೀದಿಯೇ ಇಲ್ಲದ ಸಂದರ್ಭದಿಂದ ಉದ್ಭವಿಸುವ ಪರಿಣಾಮಗಳನ್ನು ಎದುರಿಸಲು ಸನ್ನದ್ಧವಾಗುವಂತೆ ಸಚಿವಾಲಯ ಸೂಚನೆ ನೀಡಿತು.

ವಿಶ್ವ ಸಂಸ್ಥೆಯಲ್ಲಿ ಅಮೆರಿಕ ರಾಯಭಾರಿಯಾಗಿರುವ ನಿಕ್ಕಿ ಹ್ಯಾಲೆ ದೆಹಲಿಗೆ ಬಂದು ಪ್ರಧಾನಿ ನರೇಂದ್ರ ಮೋದಿ ಜೊತೆ ಮಾತುಕತೆ ನಡೆಸಿದರು. ಇರಾನ್‌ನಿಂದ ತೈಲ ಆಮದನ್ನು ಕಡಿತಗೊಳಿಸುವಂತೆ ಭಾರತಕ್ಕೆ ಸೂಚಿಸಿರುವುದಾಗಿ ಹಾಗೂ ಇರಾನ್ ಜೊತೆಗಿನ ಸಂಬಂಧದ ಬಗ್ಗೆ ಮರುಯೋಚಿಸುವಂತೆ ಹೇಳಿರುವುದಾಗಿಯೂ ಆಕೆ ಪ್ರಕಟಿಸಿದರು.

ಅಮೆರಿಕದ ಒಬ್ಬ ಕೆಳಹಂತದ ಅಧಿಕಾರಿ ಇಷ್ಟೊಂದು ಧಾರ್ಷ್ಟ್ಯದಿಂದ ಮತ್ತು ಹಠಾತ್ತನೆ ಭಾರತದ ಪ್ರಧಾನಿಗೇ ಈ ರೀತಿಯ ಬೇಡಿಕೆ ಮುಂದಿಟ್ಟಿದ್ದು ಒಂದು ಘೋರ ಅವಮಾನವಾಗಿದ್ದು ಯಾವುದೇ ಸ್ವಾಭಿಮಾನಿ ಸರಕಾರ ಇದನ್ನು ಸಹಿಸಿಕೊಳ್ಳಲಾಗದು. ಆದರೆ ಅಮೆರಿಕದೊಂದಿಗೆ ಅಡಿಯಾಳು ಮೈತ್ರಿಯ ಬಲೆಗೆ ಬಿದ್ದಿರುವ ಮೋದಿ ಸರಕಾರ ತೆಪ್ಪಗೆ ಕುಳಿತಿದೆ.

ಇರಾನ್‌ನಿಂದ ತೈಲ ಆಮದನ್ನು ಕಡಿಮೆ ಮಾಡಲು ಆರಂಭಿಸಲಾಗಿದೆ. ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಇರಾನ್‌ನಿಂದ ಮಾಡಿಕೊಳ್ಳುವ ತೈಲ ಆಮದಿನಲ್ಲಿ ಶೇಕಡಾ 16 ಕಡಿತವಾಗಿದೆ. ಭಾರತವು ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ಹೇಗೆ ನಿಲ್ಲಿಸಬಹುದು ಎನ್ನುವುದನ್ನು ಪರಿಶೀಲಿಸಲು ಅಮೆರಿಕದ ತಂಡವೊಂದು ಜುಲೈ 17ರಂದು ಭಾರತಕ್ಕೆ ಆಗಮಿಸಿದ್ದು ಅದಕ್ಕೆ ಪೂರ್ವಭಾವಿಯಾಗಿ ಈ ಕಡಿತ ಮಾಡಲಾಗಿದೆ. ಈ ಹಿಂದೆ ಇರಾನ್ ಮೇಲೆ ಅಮೆರಿಕ ದಿಗ್ಬಂಧನ ವಿಧಿಸಿದಾಗ ಮನೋಹನ್ ಸಿಂಗ್ ಸರಕಾರ ಯಾವ ರೀತಿಯಲ್ಲಿ ಇರಾನ್‌ನಿಂದ ತೈಲ ಆಮದನ್ನು ಕಡಿತಗೊಳಿಸಿತ್ತೋ ಅದೇ ರೀತಿ ಕಡಿತ ಮಾಡಲು ಅದಾಗಲೇ ಆರಂಭಿಸರುವುದನ್ನು ಅಮೆರಿಕ್ಕೆ ತೋರಿಸಲು ಮೋದಿ ಸರಕಾರ ಮುಂದಾಗಿದೆ.

ಇರಾನ್‌ನಿಂದ ದೊಡ್ಡ ಪ್ರಮಾಣದಲ್ಲಿ ತೈಲ ಆಮದು ಕಡಿತ ಮಾಡುವುದು ನಮ್ಮ ದೇಶದ ಪ್ರಗತಿಗೇ ಅಡ್ಡಿ. ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳುವುದು ಅನೇಕ ರೀತಿಯಿಂದ ನಮಗೆ ಅನುಕೂಲಕರವಾಗಿದೆ. ಅಲ್ಲಿನ ಕಚ್ಚಾ ತೈಲ ನಮ್ಮ ದೇಶದ ತೈಲ ಸಂಸ್ಕರಣಾಗಾರಗಳಿಗೆ ಹೊಂದಿಕೆಯಾಗುತ್ತದೆ. ಸಾಗಾಟ ವೆಚ್ಚ ಕೂಡ ಕಡಿಮೆಯಾಗುತ್ತದೆ. ಹೀಗಿರುವಾಗ, ಇದರ ಬದಲು ಅಮೆರಿಕದಿಂದ ಹೆಚ್ಚು ತೈಲವನ್ನು ಖರೀದಿಸಲು ಒತ್ತಡ ಹೇರಲಾಗುತ್ತಿದೆ.

ಇರಾನ್‌ನಿಂದ ತೈಲ ಆಮದು ಕಡಿಮೆ ಮಾಡಿದರೆ ಇರಾನ್‌ನೊಂದಿಗಿನ ಇತರೇ ಆರ್ಥಿಕ ಸಂಬಂಧಗಳ ಮೇಲೆಯೂ ಪರಿಣಾಮ ಬೀರುತ್ತದೆ. ಛಬಾಹರ್ ಬಂದರು ಅಭಿವೃದ್ಧಿಯಲ್ಲಿ ಭಾರತ ಅಪಾರ ಹಣವನ್ನು ಹೂಡಿದೆ. ಒಂದು ವೇಳೆ ಅಮೆರಿಕದ ಏಕಪಕ್ಷೀಯ ದಿಗ್ಬಂಧನಕ್ಕೆ ಭಾರತ ಒಪ್ಪಿದ್ದೇ ಆದಲ್ಲಿ ಈ ಯೋಜನೆ ಬಿಕ್ಕಟ್ಟು ಎದುರಿಸುತ್ತದೆ.

ಅಮೆರಿಕದೊಂದಿಗಿನ ಮಿಲಿಟರಿ ಸಹಯೋಗದ ಲಕ್ಷಣವು ಭಾರತದ ಹಿತಾಸಕ್ತಿಗೆ ವಿರುದ್ಧವಾಗಿರುವ ಇನ್ನೊಂದು ಅಂಶವಾಗಿದೆ. ಕಮ್ಯುನಿಕೇಷನ್ಸ್ ಕಂಪಾಟಿಬಿಲಿಟಿ ಅಂಡ್ ಸೆಕ್ಯುರಿಟಿ ಒಪ್ಪಂದಕ್ಕೆ (ಸಿಒಎಂಸಿಎಎಸ್‌ಎ) ಸಹಿ ಹಾಕುವಂತೆ ಭಾರತವನ್ನು ಅಮೆರಿಕ ಒತ್ತಾಯಿಸುತ್ತಿದೆ. ಭಾರತಕ್ಕೆ ಅಮೆರಿಕ ಮಾರಾಟ ಮಾಡುವ ಶಸ್ತ್ರಾಸ್ತ್ರ ವೇದಿಕೆಗಳಲ್ಲಿ ಅತ್ಯಾಧುನಿಕ ಸಂಪರ್ಕ ಸಾಧನಗಳನ್ನು ಅಳವಡಿಸಬೇಕೆಂಬುದು ಈ ಒಪ್ಪಂದದ ಬಹುಮುಖ್ಯ ಅಂಶವಾಗಿದೆ. ಮುಂದುವರಿದ ತಂತ್ರಜ್ಞಾನದ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಮಾರಲು ಈ ಷರತ್ತನ್ನು ಒಪ್ಪಿಕೊಳ್ಳಲೇ ಬೇಕೆಂಬುದನ್ನು ಅಮೆರಿಕ ಕಡ್ಡಾಯಗೊಳಿಸುತ್ತಿದೆ. ಇಂಥದ್ದೊಂದು ಒಡಂಬಡಿಕೆಯು ಭಾರತದ ಸಶಸ್ತ್ರ ಪಡೆಗಳನ್ನು ಅಮೆರಿಕದ ರಕ್ಷಣಾ ವ್ಯವಸ್ಥೆಗೆ ಇನ್ನಷ್ಟು ಅಧೀನ ಪಡಿಸಲಿದೆ. ಸಂಪರ್ಕ ವ್ಯವಸ್ಥೆಗಳ ಪರಿಶೀಲನೆಗಾಗಿ ಭಾರತದ ಸೇನಾ ನೆಲೆಗಳನ್ನು ಅಮೆರಿಕದ ಸಿಬ್ಬಂದಿಗೆ ಮುಕ್ತಗೊಳಿಸ ಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೆ ಭಾರತೀಯ ಮಿಲಿಟರಿಯ ಸಂಪರ್ಕ ವ್ಯವಸ್ಥೆಗಳನ್ನು ಮಾನಿಟರ್ ಮಾಡಲು ಅಮೆರಿಕಕ್ಕೆ ಅವಕಾಶ ಕಲ್ಪಿಸಲು ಅದರಿಂದ ನೆರವಾಗುತ್ತದೆ. ಇತರ ಶಸ್ತ್ರಾಸ್ತ್ರ ವ್ಯವಸ್ಥೆಯೊಂದಿಗೆ ರಷ್ಯಾದ ಸಲಕರಣೆಗಳು ಕಾರ್ಯಸಾಧು ಆಗದಂತಾಗುತ್ತದೆ.

ಮೋದಿ ಸರಕಾರ 2016ರಲ್ಲಿ ಆಗಲೇ ಅಮೆರಿಕದೊಂದಿಗೆ ಸಾಗಾಟ (ಲಾಜಿಸ್ಟಿಕ್ಸ್) ವಿನಿಮಯ ಒಪ್ಪಂದಕ್ಕೆ ಸಹಿ ಹಾಕಿದೆ. ಇದು ಅಮೆರಿಕದ ವಾಯು ಪಡೆ ಮತ್ತು ನೌಕಾ ಪಡೆಗೆ ಮರು–ಇಂಧನ, ನಿರ್ವಹಣೆ ಮತ್ತು ಸರಬರಾಜು ಉದ್ದೇಶಗಳಿಗೆ ಭಾರತೀಯ ನೆಲೆಗಳನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಸಿಒಎಂಸಿಎಎಸ್‌ಎಗೆ ಸಹಿ ಮಾಡಲು ಮಾತುಕತೆಗಳು ನಡೆಯುತ್ತಿವೆ ಎಂದು ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ದೃಢಪಡಿಸಿದ್ದಾರೆ. ಅದರ ವಿವರಗಳನ್ನು ಅಂತಿಮಗೊಳಿಸಲು ಅಮೆರಿಕದ ರಕ್ಷಣಾ ತಜ್ಞರು ಕಳೆದ ತಿಂಗಳು ಭಾರತಕ್ಕೆ ಭೇಟಿ ನೀಡಿದ್ದರು. ಸಿಒಎಂಸಿಎಎಸ್‌ಎಗೆ ಸಹಿ ಹಾಕುವುದು ಭಾರತೀಯ ಸಶಸ್ತ್ರ ಪಡೆಗಳ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ಬುಡಮೇಲು ಮಾಡುವತ್ತ ಇನ್ನೊಂದು ಹೆಜ್ಜೆಯಾಗಲಿದೆ.


ರಷ್ಯಾದಿಂದ ಎಸ್–400 ಕ್ಷಿಪಣಿ ವ್ಯವಸ್ಥೆಯನ್ನು ಭಾರತ ಖರೀದಿಸಿದರೆ 'ಅಮೆರಿಕದ ವಿರೋಧಿಗಳನ್ನು ದಿಗ್ಬಂಧನಗಳ ಮೂಲಕ ಮಟ್ಟ ಹಾಕುವ ಕಾನೂನು' (ಸಿಎಎಟಿಎಸ್‌ಎ) ಇದರ ನಿಯಮಗಳನ್ನು ಅನ್ವಯಿಸುವುದಾಗಿಯೂ ಅಮೆರಿಕ ಬೆದರಿಕೆ ಹಾಕುತ್ತಿದೆ. ರಷ್ಯನ್ ರಕ್ಷಣಾ ಮತ್ತು ಬೇಹುಗಾರಿಕೆ ಸಂಸ್ಥೆಗಳೊಂದಿಗೆ ಗಣನೀಯ ವ್ಯವಹಾರಗಳನ್ನು ಹೊಂದಿರುವ ಯಾವುದೇ ದೇಶದ ವಿರುದ್ಧವಾದರೂ ಅಮೆರಿಕ ಸರಕಾರ ದಿಗ್ಬಂಧನ ವಿಧಿಸಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ.

ರಷ್ಯಾದಿಂದ ಎಸ್–400 ಕ್ಷಿಪಣಿ ಖರೀದಿಗೆ 'ರಿಯಾಯತಿ' ಪಡೆಯುವ ಬಗ್ಗೆ ಮೋದಿ ಸರಕಾರ ಆಶಾಭಾವನೆಯಿಂದಿದೆ. ಏನಿದ್ದರೂ ಈ ರೀತಿ ಮಾಡುವಾಗ ರಷ್ಯಾದಿಂದ ಭವಿಷ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ರಕ್ಷಣಾ ಸಾಧನಗಳನ್ನು ಖರೀದಿಸುವುದಿಲ್ಲ ಎಂಬ ಸಂದೇಶವನ್ನೂ ಅದು ರವಾನಿಸುತ್ತಿದೆ. ರಷ್ಯಾ ಸಹಭಾಗಿತ್ವದ ಐದನೇ ಪೀಳಿಗೆಯ ಯುದ್ಧ ವಿಮಾನ ಅಭಿವೃದ್ಧಿ ಯೋಜನೆಯನ್ನು ಭಾರತ ಸರಕಾರ ಈಗಾಗಲೇ ರದ್ದು ಮಾಡಿದೆ. ಇನ್ನೊಂದೆಡೆ, ಅಮೆರಿಕದೊಂದಿಗೆ ಬಿಲಿಯಗಟ್ಟಲೆ ಡಾಲರ್ ಮೌಲ್ಯದ ರಕ್ಷಣಾ ವ್ಯವಹಾರಗಳನ್ನು ಕುದುರಿಸುತ್ತಿದೆ. ಇದರಲ್ಲಿ ಎರಡು ಬಿಲಿಯನ್ ಡಾಲರ್ ಮೊತ್ತದ ಸಶಸ್ತ್ರ ಪ್ರಡೇಟರ್ ಡ್ರೋನ್ ಖರೀದಿಯೂ ಸೇರಿದೆ.

ಇಲ್ಲಿ ಕೂಡ ಬಹುಕಾಲದಿಂದ ರಕ್ಷಣಾ ಸಾಧನಗಳನ್ನು ಸರಬರಾಜು ಮಾಡುತ್ತಿದ್ದ ರಷ್ಯಾದೊಂದಿಗಿನ ಸಂಬಂಧವನ್ನು ಕಡಿಯುವ ಮೂಲಕ ಭಾರತದ ರಾಷ್ಟ್ರೀಯ ಹಿತಗಳನ್ನು ಬಲಿಕೊಡಲಾಗುತ್ತದೆ ಎನ್ನುವುದನ್ನು ಗಮನಿಸಬೇಕು.


ರಾಷ್ಟ್ರೀಯ ಹಿತ ಮತ್ತು ವ್ಯೂಹಾತ್ಮಕ ಸ್ವಾಯತ್ತೆಯನ್ನು ರಕ್ಷಿಸುವ ದಿಸೆಯಲ್ಲಿ ಇರಾನ್‌ನಿಂದ ತೈಲ ಸರಬರಾಜು ಕಡಿತ ಹಾಗೂ ಆ ದೇಶದೊಂದಿಗಿನ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ಕಡಿದುಕೊಳ್ಳಬೇಕೆಂಬ ಅಮೆರಿಕದ ಒತ್ತಡಕ್ಕೆ ಭಾರತ ಸರಕಾರ ಮಣಿಯದಿರುವುದು ಅಗತ್ಯ. ಇರಾನ್‌ನೊಂದಿಗೆ ಪರಮಾಣು ಒಪ್ಪಂದವನ್ನು ಹೇಗೆ ಮುಂದುವರಿಸಬಹುದು ಹಾಗೂ ಅಮೆರಿಕದ ಏಕಪಕ್ಷೀಯ ದಿಗ್ಬಂಧನವನ್ನು ಹೇಗೆ ಎದುರಿಸಬಹುದು ಎನ್ನುವುದನ್ನು ಭಾರತವು ಯುರೋಪಿಯನ್ ಒಕ್ಕೂಟ, ರಷ್ಯಾ ಮತ್ತು ಚೀನಾದೊಂದಿಗೆ ಸಮಾಲೋಚಿಸಿ ಯೋಜಿಸಬೇಕು. ರಷ್ಯಾದೊಂದಿಗಿನ ರಕ್ಷಣಾ ವ್ಯವಹಾರವನ್ನು ತಾನು ಕಡಿಮೆ ಮಾಡುವುದಿಲ್ಲ ಎಂದು ಸರಕಾರ ಸ್ಪಷ್ಟಪಡಿಸುವುದು ಕೂಡ ಮಹತ್ವದ್ದಾಗಿದೆ. ಸಿಒಎಂಸಿಎಎಸ್‌ಎಯಂಥ ಅಪಾಯಕಾರಿ ಮಿಲಿಟರಿ ಒಡಂಬಡಿಕೆಗಳಿಗೆ ಸಹಿ ಹಾಕದಿರುವುದು ಕೂಡ ಅಷ್ಟೇ ಅಗತ್ಯವಾಗಿದೆ. ವಾಸ್ತವವಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಡುತ್ತಿರುವಾಗ ಅದನ್ನು ರಕ್ಷಿಸುತ್ತಿದ್ದೇನೆ ಎಂದು ನಟಿಸಲು ಮೋದಿ ಸರಕಾರಕ್ಕೆ ಅವಕಾಶ ನೀಡಬಾರದು.

– ಅನು: ವಿಶ್ವ



ಯು.ಜಿ.ಸಿ.ಯ ಬದಲು ಹೆಚ್.ಇ.ಸಿ.ಐ. ಏಕೆ?

ದೇಶಕ್ಕೆ ಸ್ವಾತಂತ್ರ್ಯ ಬಂದ ಆರಂಭದ ಕಾಲಘಟ್ಟದಲ್ಲಿ ಸರ್ಕಾರ ಉನ್ನತ ಶಿಕ್ಷಣದಲ್ಲಿ ಮುಖ್ಯ ಪಾತ್ರ ವಹಿಸಲೇಬೇಕಾಗಿದೆ, ಭಾರತದಲ್ಲಿ ಶಿಕ್ಷಣ ಕೇಂಬ್ರಿಡ್ಜ್ ಮತ್ತು ಹಾರ್ವಡ್ ವಿ.ವಿ.ಗಳಿಂದ ಭಿನ್ನವಾಗಿರಬೇಕಾಗುತ್ತದೆ, ಶಿಕ್ಷಣ ನಮ್ಮ ದೇಶದ ನಿರ್ದಿಷ್ಟ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವಂತದ್ದಿರಬೇಕು, 'ಒಂದು ಪಾಶ್ಚಿಮಾತ್ಯ ವಿಶ್ವವಿದ್ಯಾಲಯದ ನಕಲು ಈ ಉದ್ದೇಶವನ್ನು ಈಡೇರಿಸಲಾರದು ಎಂದು ಗುರುತಿಸಲಾಗಿತ್ತು. ಆ ಕಾಲಘಟ್ಟದಲ್ಲಿ ಹುಟ್ಟಿ ಬಂದ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅಥವ ಯುಜಿಸಿ ಈಗ ಆ ದಿಕ್ಕಿನಲ್ಲಿ ಸಾಗುತ್ತಿಲ್ಲ. ಆದರೆ ಆ ಕಾರಣಕ್ಕೆ ಅದನ್ನು ವಿಸರ್ಜಿಸುವ ಬಗ್ಗೆ ಯೋಚಿಸುತ್ತಿರುವುದಲ್ಲ. ಬದಲಿಗೆ ಅದು ಹಿಡಿದಿರುವ ತಪ್ಪು ದಿಕ್ಕನ್ನೇ ಅಧಿಕೃತ ಅಪೇಕ್ಷಿತ ದಿಕ್ಕನ್ನಾಗಿ ಮಾಡಲಿಕ್ಕಾಗಿಯೇ ಅದರ ಸ್ಥಾನದಲ್ಲಿ ಉನ್ನತ ಶಿಕ್ಷಣ ಆಯೋಗ'–ಹೆಚ್‌ಇಸಿಐ– ಪ್ರಸ್ತಾವ ಬಂದಿದೆ.



ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಎಂಜಿ.ವೆಂಕಟೇಶ್

ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮೋದಿ ಸರ್ಕಾರ ವಿಶ್ವ ವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ) ರದ್ದುಗೊಳಿಸಲು ಕಾಯ್ದೆ ಮಂಡಿಸಲಿದೆ. ಯುಜಿಸಿ ಪ್ರಸ್ತುತ ಎರಡು ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಮೊದಲನೆಯದಾಗಿ, ವಿಶ್ವ ವಿದ್ಯಾನಿಲಯ ಮತ್ತು ಕಾಲೇಜುಗಳಿಗೆ ಅನುದಾನ ವಿತರಣೆ. ಇನ್ನು ಮುಂದೆ ಈ ಕಾರ್ಯವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ನಿರ್ವಹಿಸಲಿದೆ. ಮತ್ತೊಂದು ನಿಯಂತ್ರಣದ ಕೆಲಸ. ಇದನ್ನು ಭಾರತದ ಉನ್ನತ ಶಿಕ್ಷಣ ಆಯೋಗ (ಹೆಚ್‌ಇಸಿಐ) ನಿರ್ವಹಿಸಲಿದೆ. ಆದರೆ ಈ ಆಯೋಗಕ್ಕೆ ವಿತರಿಸಲು ನಿಧಿ ಇರುವುದಿಲ್ಲ.

ಉದ್ದೇಶಿತ ವ್ಯವಸ್ಥೆಯಲ್ಲಿ ಅಧ್ಯಯನದಲ್ಲಿ ತೊಡಗಿರುವ (ಅಕಾಡೆಮಿಕ್) ವಲಯದ ಮೇಲೆ ರಾಜಕೀಯ ನಿಯಂತ್ರಣ ಅಪಾರವಾಗಿ ಹೆಚ್ಚಾಗಲಿದೆ. ಮಾನವ ಸಂಪನ್ಮೂಲ ಇಲಾಖೆಯ ಹತೋಟಿಯಿಂದ ಧನ ವಿನಿಯೋಗ ಹಂಚಿಕೆ ಆಗಲಿರುವುದು ಇದಕ್ಕೆ ಸೂಚನೆಯಾಗಿದೆ. ಉದ್ದೇಶಿತ ಹೆಚ್‌ಇಸಿಐ ಹೆಚ್ಚು ಕಡಿಮೆ ಸರ್ಕಾರಿ ನಿಯಂತ್ರಿತ ವ್ಯವಸ್ಥೆ ಆಗಲಿದ್ದು ಉನ್ನತ ಶಿಕ್ಷಣವನ್ನು ಮೇಲ್ವಿಚಾರಣೆಗೆ ಒಳಪಡಿಸುವುದೇ ಅಲ್ಲದೇ ಉನ್ನತ ಶಿಕ್ಷಣಕ್ಕೆ ನಿರ್ದೇಶನಗಳನ್ನು ನೀಡುವುದು ಮತ್ತು ಪಾಲಿಸದಿದ್ದಲ್ಲಿ ಹಿಂದೆಂದೂ ಆಲೋಚಿಸದಂತ ದಂಡನೆಗೆ ಒಳಪಡಿಸುವುದು ಕೂಡ ಇದರಲ್ಲಿ ಸೇರಿರುತ್ತದೆ. ಇದುವರೆಗೆ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಸ್ವಾಯುತ್ತತೆ ಇನ್ನು ಮುಂದೆ ಇರುವುದಿಲ್ಲ, ಇನನು ಮುಂದೆ ಎಲ್ಲ ಹೊಸ ಕೋರ್ಸುಗಳಿಗೆ ಹೆಚ್‌ಇಸಿಐ ಅನುಮತಿ ಪಡೆಯಬೇಕಿರುತ್ತದೆ.

ಈಗ ಹೆಚ್‌ಇಸಿಐ ನ ಸಂರಚನೆಯಿಂದ ಪ್ರಾರಂಭಿಸೋಣ. ಹೆಚ್‌ಇಸಿಐನಲ್ಲಿ ಒಬ್ಬ ಅಧ್ಯಕ್ಷರು ಮತ್ತು ಒಬ್ಬ ಉಪಾಧ್ಯಕ್ಷರು ಇರುತ್ತಾರೆ. ಅವರ ಆಯ್ಕೆ ಸಂಪುಟ ಕಾರ್ಯದರ್ಶಿ ಮತ್ತು ಮಾನವ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯನ್ನೊಳಗೊಂಡ ಸಮಿತಿ ಆಯ್ಕೆ ಮಾಡುತ್ತದೆ.

ಇದರ ಜತೆಯಲ್ಲಿ 12 ಸದಸ್ಯರು ಸಮಿತಿಯಲ್ಲಿದ್ದು ಸಂಬಂಧಪಟ್ಟ ವಿವಿಧ ಮಂತ್ರಾಲಯಗಳ ಅಧಿಕಾರಿಗಳು, ಇಬ್ಬರು ಹಾಲಿ ಉಪಕುಲಪತಿಗಳು, ಇಬ್ಬರು ಪ್ರೊಫೆಸರ್‌ಗಳು, ಒಬ್ಬ ಕೈಗಾರಿಕೋದ್ಯಮ ಇರುತ್ತಾರೆ. ಹೆಚ್‌ಇಸಿಐ ಹೀಗೆ ಸರ್ಕಾರಿ ನಾಮ–ನಿರ್ದೇಶಿತ ಸಂಸ್ಥೆಯಾಗಿರುವುದಲ್ಲದೇ, ಅದರಲ್ಲಿನ ಅಕಾಡೆಮಿಕ್ ಪ್ರಾತಿನಿಧ ಅತೀ ಕಡಿಮೆ. ಉಪಕುಲಪತಿಗಳು ಅಕಾಡೆಮಿಕ್ ವಲಯದಿಂದಲೇ ಇರಬೇಕೆಂದೇನಿಲ್ಲ. ಆದರೂ ಹಾಗೆಂದು ಪರಿಗಣಿಸಿದರೂ ಒಟ್ಟಾರೆ 14 ಸದಸ್ಯರಲ್ಲಿ 4 ಮಾತ್ರ ಅಕಾಡೆಮಿಕ್ ವಲಯದಿಂದ ಬಂದಿರುತ್ತಾರೆ. ಆದ್ದರಿಂದ ಹೆಚ್‌ಇಸಿಐ ಕೇವಲ ತಮ್ಮ ರಾಜಕೀಯ ಒಡೆಯರಿಗೆ ಉತ್ತರದಾಯಿಯಾಗಿರುವ ಒಂದಿಷ್ಟು ಸರ್ಕಾರಿ ಅಧಿಕಾರಿಗಳು ಮತ್ತು ತ್ಕಾಲೀನ ಸರಕಾರ ನೇಮಿಸಿದವರುಗಳು ಅಕಡೆಮಿಕ್ ಜಗತ್ತಿನಲ್ಲಿ ಏನು ನಡೆಯಬೇಕು ಎಂದು ನಿರ್ಧರಿಸುವ ಸಾಧನವಷ್ಟೇ ಆಗಿರುತ್ತದೆ. ಆಗಲೂ ಅದು ಅಕಸ್ಮಾತ್ ಸರ್ಕಾರದ ಇಚ್ಛೆಗಳಿಗೆ ವಿರುದ್ಧ ನಡೆದರೆ ಅದರ ಸದಸ್ಯರನ್ನು ತೆಗೆದುಹಾಕುವ ಅಧಿಕಾರ ಸರ್ಕಾರದ ಕೈಯಲ್ಲಿ ಇರುತ್ತದೆ. ಈಗ ಯುಜಿಸಿಯಲ್ಲಿನ ಸದಸ್ಯರು ಒಮ್ಮೆ ಆಯ್ಕೆಯಾದರೆ ಸರ್ಕಾರ ಅವರನ್ನು ತೆಗೆದು ಹಾಕುವಂತಿಲ್ಲ. ಇದಕ್ಕೆ ಉದ್ದೇಶಿತ ಹೆಚ್‌ಇಸಿಐ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಇದು ಇಷ್ಟಕ್ಕೆ ನಿಲ್ಲದೇ ಹೆಚ್‌ಇಸಿಐ ನಡೆಸಲು ಮಾರ್ಗದರ್ಶನ ನೀಡಲು ಸಲಹಾ ಮಂಡಳಿ ರಚಿಸಲು ಉದ್ದೇಶಿಸಿದ್ದು ಇದಕ್ಕೆ ಮಾನವ ಸಂಪನ್ಮೂಲ ಸಚಿವರೇ ಅಧ್ಯಕ್ಷರಾ ಇದು ವಾರ್ಷಿಕವಾಗಿ ಎರಡು ಬಾರಿ ಸೇರುತ್ತದೆ. ಮಾನವ ಸಂಪನ್ಮೂಲ ಸಚಿವರು ಹೆಚ್‌ಇಸಿಐ ನ ತಂಡದ ರಚನೆಯಲ್ಲಿ ಮಾತ್ರವಲ್ಲದೇ ಸಲಹಾ ಮಂಡಳಿ ಅಧ್ಯಕ್ಷರಾಗಿ ಎಲ್ಲ ವಿಷಯಗಳಲ್ಲೂ ಮೂಗು ತೂರಿಸಬಹುದು. ಇದರಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯವಿದ್ದರೂ ಅದು ನೆಪಮಾತ್ರ. ನಿಜವಾಗಿಯೂ ' ರಾಜ್ಯಗಳಿಂದ ಪ್ರಾತಿನಿಧ್ಯದ ಬೇಕೆಂದಿದ್ದರೆ ಹೆಚ್‌ಇಸಿಐನ ರಚನೆಯಲ್ಲೇ ಮಾಡಬಹುದಿತ್ತು. ಇದು ' ದೇಶದ ಅಕಾಡೆಮಿಕ್ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ರಾಜಕೀಯ ಹಸ್ತಕ್ಷೇಪವನ್ನು ಮುಚ್ಚಿಹಾಕಲಿಕ್ಕಷ್ಟೇ.

ನಿಜ ಹೇಳಬೇಕೆಂದರೆ, ಯುಜಿಸಿ ಯೇ, ಮೂಲತಃ ಅಕಾಡೆಮಿಕ್ ವ್ಯಕ್ತಿಗಳನ್ನು ಒಳಗೊಂಡ (ಸರ್ಕಾರದಿಂದ ನೇಮಕಗೊಂಡಿದ್ದರೂ) ಸ್ವಾಯುತ್ತ ಸಂಸ್ಥೆಯಾಗಿರಬೇಕೆಂದು ಕಂಡರಿಸಿದ್ದರೂ, ಇತ್ತೀಚಿಗೆ ಒಂದು ರಾಜಕೀಯ ರಂಗು ಪಡೆಯುತ್ತಿದೆ. ಬಿಜೆಪಿ ಸರ್ಕಾರ ಈ ಯುಜಿಸಿ ಸೇರಿದಂತೆ ಎಲ್ಲ ಪ್ರಮುಖ ಕ್ಷೇತ್ರಗಳಲ್ಲೂ ಆರ್‌ಎಸ್‌ಎಸ್ ನವರನ್ನು ಅವರಿಗೆ ಯಾವ ಅರ್ಹತೆಯಿಲ್ಲದಿದ್ದರೂ ತುಂಬಲು ಒತ್ತಾಯಿಸುತ್ತಿದೆ. ಆದರೆ ಹೆಚ್‌ಇಸಿಐ ಇಂತಹ ರಾಜಕೀಯ ಹಸ್ತಕ್ಷೇಪದ ವಿದ್ಯಾಮಾನಕ್ಕೆ ಅಧಿಕೃತ ಮುದ್ರೆ ಒತ್ತುತ್ತದೆ. ಯುಜಿಸಿ ನಡೆದಿರುವ ದಿಕ್ಕು ತಪ್ಪಾಗಿದ್ದು, ಯುಜಿಸಿ ಆಕ್ಟ್‌ನಲ್ಲಿರುವ ಮೂಲ ಆಶಯಕ್ಕೆ ತದ್ವಿರುದ್ಧವಾಗಿದ್ದರೆ, ಹೆಚ್‌ಇಸಿಐ ವಾಸ್ತವವಾಗಿ ಅದನ್ನೇ ಅಧಿಕೃತ ಅಪೇಕ್ಷಿತ ದಿಕ್ಕಾಗಿ ಮಾಡುತ್ತಿದೆ.

ಹೆಚ್‌ಇಸಿಐ ಒಂದು ಯಾವುದೇ ಲಜ್ಜೆಯಿಲ್ಲದೆ ಸರಕಾರಿ ಹತೋಟಿಯ ಸಂಸ್ಥೆಯಾಗಲಿದೆ , ಮಾತ್ರವಲ್ಲ, ಯುಜಿಸಿಗಿಂತ ಎಷ್ಟೋ ಹೆಚ್ಚು ಅಧಿಕಾರಗಳನ್ನು ಹೊಂದಿರುತ್ತದೆ. ಈಗ ವಿ.ವಿ.ಗಳು ಯುಜಿಸಿ ನಿರ್ದೇಶನಗಳಿಗೆ ಅಲಕ್ಷ ತೋರಿದರೆ ಹೆಚ್ಚೆಂದರೆ ಆ ವಿ.ವಿ.ಗಳಿಗೆ ಧನ ಸಹಾಯ ನೀಡುವುದನ್ನು ನಿಲ್ಲಿಸಬಹುದಾಗಿದೆ. ಆದರೆ ಹೊಸ ವ್ಯವಸ್ಥೆಯಲ್ಲಿ ಹೆಚ್‌ಇಸಿಐ ಶಿಫಾರ್ಸುಗಳನ್ನು ಅಲಕ್ಷಿಸಿದರೆ ಆ ಸಂಸ್ಥೆಗಳನ್ನು ಮುಚ್ಚಬಹುದು. ವಿಪರೀತದ ಪ್ರಸಂಗಗಳಲ್ಲಿ ದಂಡನಾರ್ಹ ಕ್ರಮಗಳನ್ನು ಕೈಗೊಳ್ಳಬಹುದು, ವಿಧಿಸುವುದರಿಂದ ಹಿಡಿದು ಜೈಲು ಶಿಕ್ಷೆಯನ್ನೂ ವಿಧಿಸಬಹುದಾಗಿದೆ. ಕರಡು ಮಸೂದೆ "ಹೆಚ್‌ಇಸಿಐ ನಿರ್ದೇಶನಗಳ ಪಾಲನೆ ಮಾಡದಿದ್ದರೆ ಕ್ರಿಮಿನಲ್ ಪ್ರೊಸಿಜರ್ಸ್ ಕಾಯ್ದೆಯ ಅಡಿಯಲ್ಲಿ ದಂಡ ಅಥವಾ ಜೈಲುಶಿಕ್ಷೆ ವಿಧಿಸುವುಹುದಾಗಿದೆ" ಎನ್ನುತ್ತದೆ.

ಉನ್ನತ ಶಿಕ್ಷಣವನ್ನು ಕೇಂದ್ರ ಸರ್ಕಾರದ ನೇರ ನಿಯಂತ್ರಣಕ್ಕೆ ತರುವುದು ಈ ಕತೆಯ ಒಂದು ಭಾಗ ಮಾತ್ರ. ಇನ್ನೊಂದು ಭಾಗ ಯುಜಿಸಿಯನ್ನು ವಿಸರ್ಜಿಸಲು ಕೊಟ್ಟ ಸಮರ್ಥನೆಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಈಗಾಗಲೇ ಹಲವಾರು ತಜ್ಞರ ಉನ್ನತ ಶಿಕ್ಷಣ ಸಮಿತಿಗಳು, ಇತ್ತೀಚಿನ ಪ್ರೊ. ಯಶಪಾಲ್ ರವರ ನೇತೃತ್ವದ ಸಮಿತಿ ಕೂಡ ಈ ರೀತಿ ಶಿಫಾರಸ್ಸು ನೀಡಿದೆ ಎಂಬುದು ಸರಕಾರದ ಸಮರ್ಥನೆ.

ಪ್ರಶ್ನೆ ಉದ್ಭವವಾಗುವುದು ಯಾಕೆ ಈ ಸಮಿತಿಗಳು ಯುಜಿಸಿ ವಿಸರ್ಜಿಸಲು ಸಲಹೆ ನೀಡುತ್ತಿವೆ? ಇದಕ್ಕೆ ಸಾಮಾನ್ಯವಾಗಿ ಕೊಡುವ ಉತ್ತರ ಹೀಗಿರುತ್ತದೆ:; "ಜ್ಞಾನ ಆರ್ಥಿಕತೆ"ಯ ಬೆಳವಣಿಗೆಯ ಹೊಸ ಪರಿಸ್ಥಿತಿಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ದೊಡ್ಡ ರೀತಿಯ ವಿಸ್ತರಣೆಯ ಅಗತ್ಯವಿದ್ದು ಇದಕ್ಕೆ ಸರ್ಕಾರವೇ ಏಕೈಕ ಹೊಣೆಯನ್ನು, ಕನಿಷ್ಟ ಹೊಣೆಯನ್ನು ಕೂಡ ತೆಗೆದುಕೊಳ್ಳಲು ಸಾಧ್ಯವಿಲ್ಲ, ಇಂತಹ ವಿಸ್ತರಣೆಗೆ ಗಮನಾರ್ಹ ಪ್ರಮಾಣದಲ್ಲಿ ಖಾಸಗಿ ಸಂಪನ್ಮೂಲಗಳನ್ನು ಪಡೆಯಬೇಕಾಗಿದೆ. ಅದಕ್ಕಾಗಿ ಖಾಸಗಿ ಸಂಸ್ಥೆಗಳ ಅರ್ಹತೆ, ಅವಕ್ಕೆ ಮಾನ್ಯತೆ ನೀಡುವುದನ್ನು ಬಹಳ ಹೆಚ್ಚು ವೇಗವಾಗಿ ತೀರ್ಮಾನಿಸಬೇಕು. ಯುಜಿಸಿಗೆ ತನ್ನ ಅಪಾರ ತೊಡಕುಗಳ ವಿಧಾನಗಳಿಂದಾಗಿ ಇದು ಎಂದೂ ಸಾಧ್ಯವಿಲ್ಲ. ಆದ್ದರಿಂದ ಒಂದು ಹೊಸ ಉನ್ನತ ಮಟ್ಟದ ಸಮಿತಿ ಹೆಚ್‌ಇಸಿಐ ಸ್ವರೂಪದಲ್ಲಿ ಅಗತ್ಯವಿರುತ್ತದೆ. ಬಿಜೆಪಿ ಸರಕಾರದ ಕರಡು ಶಾಸನ ಯುಜಿಸಿಯದ್ದು 'ಇನ್‌ಸ್ಪೆಕ್ಟರ್ ರಾಜ್'ಎನ್ನುತ್ತಅಂತಹ ಸಂಸ್ಥೆಗಳಿಗೆ ಹೆಚ್‌ಇಸಿಐ ಹೆಚ್ಚು "ಉದಾರ"ವಾಗಿರುತ್ತದೆ ಎಂದು ಹೇಳಿದೆ.

ಆದ್ದರಿಂದ ಹೆಚ್‌ಇಸಿಐ ಉನ್ನತ ಶಿಕ್ಷಣದ ಸಾರ್ವಜನಿಕ ಸಂಸ್ಥೆಗಳನ್ನು ಉಕ್ಕಿನ ಮುಷ್ಟಿಯಲ್ಲಿಟ್ಟುಕೊಂಡು, ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ನೀಡುವುದರಲ್ಲಿ ಕ್ಷಿಪ್ರಗತಿ ಮತ್ತು ಅವುಗಳ ಬಗ್ಗೆ ದಯಾಪೂರ್ಣ ಸಹನೆ ತೋರಲಿದೆ ಎಂಬುದು ಸ್ಪಷ್ಟ. ತಮ್ಮ ಸಂಪನ್ಮೂಲಗಳನ್ನು ಎತ್ತಬಲ್ಲ "ಸ್ವಾಯತ್ತ ಕಾಲೇಜು"ಗಳನ್ನು ಹೊಂದುವ, ಅವಕ್ಕೆ ತಮಗೆ ಇಚ್ಛೆ ಬಂದ ರೀತಿಯಲ್ಲಿ ವರ್ತಿಸಲು ಬಿಡುವ ಇತ್ತೀಚಿನ ನಡೆ ಖಾಸಗಿ ಸಂಸ್ಥೆಗಳ ಬಗ್ಗೆ ಈ ದಯಾಪೂರ್ಣ ಸಹನೆಗೆ ಅನುಗುಣವಾಗಿಯೇ ಇದೆ. ಇದು ಉನ್ನತ ಶಿಕ್ಷಣದ ವಲಯದಲ್ಲಿ ಒಂದು ಬೃಹತ್ ಪ್ರಮಾಣದ ಖಾಸಗೀಕರಣವನ್ನು ಸೂಚಿಸುತ್ತದೆ.

ಇದು ನವ ಉದಾರವಾದ ಹೊರಿಸುವ ಮಾರ್ಗನಿರ್ದೇಶನ; ಮತ್ತು ಅನೇಕ ಸಮಿತಿಗಳು ಯುಜಿಸಿ ಕೊನೆಗಾಣಿಸಲು ನೀಡುತ್ತಿರುವ ಕಾರಣ ಆ ಸಂಸ್ಥೆ ಒಂದು ಭಿನ್ನ ಕಾಲಘಟ್ಟದಲ್ಲಿ ತನ್ನ ಹುಟ್ಟು ಪಡೆದಿರುವಂತದ್ದು ಎಂಬುದಕ್ಕೆ. ಅದು ಸ್ವಾತಂತ್ರ್ಯಾನಂತರದ ಸರಕಾರೀ ನಿಯಂತ್ರಣದ ಕಾಲಘಟ್ಟ. ಆಗ ಸರ್ಕಾರ ಉನ್ನತ ಶಿಕ್ಷಣದಲ್ಲಿ ಮುಖ್ಯ ಪಾತ್ರವಹಿಸಲೇಬೇಕಾಗಿದೆ, ಭಾರತದಲ್ಲಿ ಶಿಕ್ಷಣ ಕೇಂಬ್ರಿಡ್ಜ್ ಮತ್ತು ಹಾರ್ವಡ್ ವಿ.ವಿ.ಗಳಿಂದ ಭಿನ್ನವಾಗಿರಬೇಕಾಗುತ್ತದೆ, ಶಿಕ್ಷಣ ನಮ್ಮ ದೇಶದ ನಿರ್ದಿಷ್ಟ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವಂತದ್ದಿರಬೇಕು, 'ಒಂದು ಪಾಶ್ಚಿಮಾತ್ಯ ವಿಶ್ವವಿದ್ಯಾಲಯದ ನಕಲು ಈ ಉದ್ದೇಶವನ್ನು ಈಡೇರಿಸಲಾರದು ಎಂದು ಗುರುತಿಸಿದ್ದ ಕಾಲಘಟ್ಟ.

ಈಗ ಕಂಡರಿಸುತ್ತಿರುವುದು ಶಿಕ್ಷಣ ವ್ಯವಸ್ಥೆಯೊಳಗೇ ಒಂದು ದ್ವೈತವನ್ನು. ವ್ಯಾಪಾರೀ ಧೋರಣೆಯಲ್ಲಿ ನಡೆಯುವ ಒಂದಷ್ಟು ಖಾಸಗಿ ಸಂಸ್ಥೆಗಳಿರುತ್ತವೆ, ಅವು ವಿದ್ಯೆಯನ್ನು ಒಂದು ಸರಕಾಗಿ ಮಾರುತ್ತವೆ; ಇನ್ನೊಂದೆಡೆಯಲ್ಲಿ ಸರ್ಕಾರದಿಂದ ಹಣ ಪಡೆಯುವ ಹಲವು ಸಂಸ್ಥೆಗಳಿರುತ್ತವೆ, ಆದರೆ ಅಲ್ಲಿ "ದಾರಿ ತಪ್ಪಿಸುವ" ವಿಚಾರಗಳು, ವಿಮರ್ಶಾತ್ಮಕ ಚಿಂತನೆ, ಸ್ವತಂತ್ರ ಚಿಂತನೆಗಳು ಮೂಡಿಬರದಂತೆ ಸರಕಾರ ಖಚಿತ ಪಡಿಸಿಕೊಳ್ಳುತ್ತದೆ.

ಈಗಿನ ಬೂರ್ಜ್ವಾ ವ್ಯವಸ್ಥೆಯ ಅಂಗೀಕೃತ ಜ್ಞಾನದ ಪರಧಿಯನ್ನು ದಾಟಿ ಹೋಗುವ, ಹಣಕಾಸು ಬಂಡವಾಳದ ಭಕ್ತರು ಅನ್ವಯಿಸಬಯಸುವ ಜ್ಞಾನದ 'ಮುಚ್ಚಿಕೆ'ಯನ್ನು ಮುರಿಯುವ ವಿಮರ್ಶಾತ್ಮಕ ಚಿಂತನೆ. ನವ ಉದಾರವಾದಕ್ಕೆ ನಿಷಿದ್ಧ. ಡಾರ್ವಿನ್‌ವಾದ ತಪ್ಪು, ಪ್ರಾಚೀನ ಭಾರತದಲ್ಲಿ ಪ್ಲಾಸ್ಟಿಕ್ ಸರ್ಜರಿಯಿತ್ತು ಮತ್ತು ಇತಿಹಾಸ–ಪೂರ್ವ ಕಾಲದಲ್ಲಿ ಭಾರತದಲ್ಲಿ ವಿಮಾನಗಳಿದ್ದವು ಎಂದು ವಿದ್ಯಾರ್ಥಿಗಳು ನಂಬಿದರೆ ನವ ಉದಾರವಾದಕ್ಕೆ ಆಬಗ್ಗೆ ಏನೂ ಆಕ್ಷೇಪವಿರುವುದಿಲ್ಲ. ಹಿಂದುತ್ವದ ಅತಾರ್ಕಿಕತೆ ಎಲ್ಲಿಯವರಗೆ ಇದನ್ನು ನಂಬುವವರು ಅಂತರಾಷ್ಟ್ರೀಯ ಬಂಡವಾಳದ ಹಿತಾಸಕ್ತಿಗಳನ್ನು ಈಡೇರಿಸುವ ಕೌಶಲ್ಯವನ್ನು ಪಡೆಯುತ್ತಿರುತ್ತಾರೋ ಅಲ್ಲಿಯ ವರೆಗೆ ಅದಕ್ಕೆ ಅಭ್ಯಂತರವೇನೂ ಇಲ್ಲ. ಹಾಗೇ ಹಿಂದುತ್ವವಾದಿಗಳಿಗೂ ಯಾವುದೇ ಸೃಜನಾತ್ಮಕ, ವಿಮರ್ಶಾತ್ಮಕ, ಸ್ವತಂತ್ರ ಚಿಂತನೆ ನಿಷಿದ್ಧ, ಅವರು ಅವನ್ನು ವಿಶ್ವವಿದ್ಯಾನಿಲಯಗಳಲ್ಲಿ ರಾಜಕೀಯ ಹಸ್ತಕ್ಷೇಪ ನಡೆಸಿ ದಮನ ಮಾಡುತ್ತಾರೆ.

ಈಗ ಭಾರತದಲ್ಲಿ ಉನ್ನತ ಶಿಕ್ಷಣ ಅಧಿಕೃತವಾಗಿ ಹಿಡಿಯಬೇಕೆಂದಿರುವುದು ನವ ಉದಾರವಾದ ಮತ್ತು ಹಿಂದುತ್ವದ ಹಿತಗಳು ಒಂದುಗೂಡಿರುವುದನ್ನು ಪ್ರತಿನಿಧಿಸುವ ದಿಕ್ಕನ್ನು. ದಲಿತರನ್ನು ಮತ್ತು ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳನ್ನು ಉನ್ನತ ಶಿಕ್ಷಣದಿಂದ ಹೊರಗಿಡುವ ಪ್ರವೃತ್ತಿ ಇದರಲ್ಲೇ ಅಡಕವಾಗಿದೆ. ಆದರೆ ಅಷ್ಟೇ ಮಹತ್ವದ ಇನ್ನೊಂದು ಸೂಚನೆ ಎಂದರೆ ಚಿಂತನೆಯನ್ನೇ ಧ್ವಂಸಗೊಳಿಸುವುದು.

ಇದರ ಒಂದು ಮುಖ್ಯ ಪರಿಣಾಮವನ್ನು ಗಮನಿಸಬೇಕು. ಯುಜಿಸಿ ನಿರ್ವಹಣೆಯ ಪ್ರಭುತ್ವ ನಿಯಂತ್ರಣದ ಕಾಲಘಟ್ಟದಲ್ಲಿ ರೂಪಿಸಿದ ಶಿಕ್ಷಣ ವ್ಯವಸ್ಥೆಯಿಂದಾಗಿ ದಲಿತ ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಂದ ಅತ್ಯಂತ ಅಭಿವ್ಯಕ್ತಿಪೂರ್ಣ, ವಿಚಾರಪೂರ್ಣ, ಪ್ರತಿಭಾವಂತ ಮತ್ತು ಸಾಮಾಜಿಕ ಬದ್ಧತೆಯುಳ್ಳ ಒಂದು ದೊಡ್ಡ ವಿಭಾಗವೇ ಮೂಡಿ ಬಂತು. ಯುಜಿಸಿ ವ್ಯವಸ್ಥೆಯಲ್ಲಿ ಬೇರೇನೇ ದೋಷಗಳಿದ್ದರೂ, ಇದು ಅದರ ಒಂದು ಸಾಧನೆ ಎನ್ನಬಹುದು. ಈಗ ಈ ಪ್ರಕ್ರಿಯೆಯನ್ನು ಮುಗಿಸುವ ಯತ್ನ ನಡೆದಿದೆ. ಈ ಯತ್ನವನ್ನು ಪ್ರತಿರೋಧಿಸಬೇಕಿದೆ.




ಚಿತ್ರ ಕೃಪೆ: ನ್ಯೂಸ್‌ಕ್ಲಿಕ್

ಈಗ ಕಂಡರಿಸುತ್ತಿರುವುದು ಶಿಕ್ಷಣ ವ್ಯವಸ್ಥೆಯೊಳಗೇ ಒಂದು ದ್ವೈತವನ್ನು. ವ್ಯಾಪಾರೀ ಧೋರಣೆಯಲ್ಲಿ ನಡೆಯುವ ಒಂದಷ್ಟು ಖಾಸಗಿ ಸಂಸ್ಥೆಗಳಿರುತ್ತವೆ, ಅವು ವಿದ್ಯೆಯನ್ನು ಒಂದು ಸರಕಾಗಿ ಮಾರುತ್ತವೆ; ಇನ್ನೊಂದೆಡೆಯಲ್ಲಿ ಸರ್ಕಾರದಿಂದ ಹಣ ಪಡೆಯುವ ಹಲವು ಸಂಸ್ಥೆಗಳಿರುತ್ತವೆ, ಆದರೆ ಅಲ್ಲಿ ಆಳುವವರ ಜ್ಞಾನಪರಿಧಿಯಿಂದ "ದಾರಿ ತಪ್ಪಿಸುವ" ವಿಚಾರಗಳು, ವಿಮರ್ಶಾತ್ಮಕ ಚಿಂತನೆ, ಸ್ವತಂತ್ರ ಚಿಂತನೆಗಳು ಮೂಡಿಬರದಂತೆ ಸರಕಾರ ಖಚಿತ ಪಡಿಸಿಕೊಳ್ಳುತ್ತದೆ.

ಜನಗಳ ಬದುಕುಗಳು ಮತ್ತು ಭವಿಷ್ಯಗಳಿಗೆ ಸಂಚಕಾರ





ಅಧಿಕಾರದಲ್ಲಿ ನಾಲ್ಕು ವರ್ಷಗಳನ್ನು ಪೂರೈಸಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬರುವ ಮೊದಲು ಜನಗಳ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆಯೂ ಚುನಾವಣಾ ಪ್ರಚಾರದಲ್ಲಿ, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತು ಅಧಿಕಾರ ವಹಿಸಿಕೊಂಡ ಮೇಲೂ ಆಶ್ವಾಸನೆಗಳ ಮೇಲೆ ಆಶ್ವಾಸನೆಗಳನ್ನು ಕೊಟ್ಟಿತ್ತು.. ಅವೂ ಒಣ ಬೊಗಳೆಗಳಾಗಿಯೇ ಉಳಿದಿವೆ. ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ ನಾಲ್ಕು ಕಿರುಪುಸ್ತಕಗಳಲ್ಲಿ ನಾಲ್ಕನೆಯದು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಆರೋಗ್ಯ ಕ್ಷೇತ್ರದಲ್ಲೂ ಜನಸಾಮಾನ್ಯರ ಆಕಾಂಕ್ಷೆಗಳು-ನಿರೀಕ್ಷೆಗಳನ್ನು ಮರೆತು ಖಾಸಗಿ ಕುಳಗಳಿಗಾಗಿಯೇ ಹೇಗೆ ಕೆಲಸ ಮಾಡಿದೆ ಎಂಬುದನ್ನು ಪರಿಶೀಲಿಸಿದೆ. ಇದರೊಡನೆ ಆಹಾರ ಭದ್ರತೆಯನ್ನು ಅಭದ್ರಗೊಳಿಸಿ, ಪರಿಸರವನ್ನು ಧಿಕ್ಕರಿಸಿ ಮತ್ತು ವಿಜ್ಞಾನವನ್ನು ಬುಡಮೇಲು ಮಾಡುತ್ತ ಅವೈಜ್ಞಾನಿಕತೆಯನ್ನು ಪೋಷಿಸಿ ಹೇಗೆ ಜನಗಳ ಬದುಕನ್ನು ಮತ್ತು ಭವಿಷ್ಯವನ್ನು ಗಂಡಾಂತರಕ್ಕೀಡು ಮಾಡಿದೆ ಎಂಬುದರ ಒಂದು ಚಿತ್ರವನ್ನು ನೀಡಿದೆ.

ಹಿಂದಿನ ಸಂಚಿಕೆಯಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಷೇತ್ರದಲ್ಲಿ ಕಳೆದ ನಾಲ್ಕು ವರ್ಷಗಳ ಬೆಳವಣಿಗೆಗಳ ಕುರಿತ ವಿಶ್ಲೇಷಣೆಗಳ ಸಾರಾಂಶವನ್ನು ಕೊಡಲಾಗಿತ್ತು. ಇಲ್ಲಿ ಆಹಾರಭದ್ರತೆ, ಪರಿಸರ ಮತ್ತು ವಿಜ್ಞಾನ ರಂಗದಲ್ಲಿ ಮೋದಿ ಸರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿರುವುದೇನು ಎಂಬುದರ ಒಂದು ಸ್ಥೂಲ ಚಿತ್ರ.

ಬಡವರ ಆಹಾರ ಭದ್ರತೆಯ ಮತ್ತು ಪೌಷ್ಟಿಕತೆಯ ಹಕ್ಕುಗಳು ಮೊಟಕು



ಅಕ್ಟೋಬರ್ 2017: ಬಿಜೆಪಿ ಆಳ್ವಿಕೆಯ ಝಾರ್ಖಂಡಿನಿಂದ ಬಂದ ಒಂದು ಸುದ್ದಿ: 11 ವರ್ಷದ ಬಾಲಕಿ ಸಂತೋಷ್ ಕುಮಾರಿ "ಅನ್ನ, ಅನ್ನ' ಅನ್ನುತ್ತ ಪ್ರಾಣ ಬಿಟ್ಟಳು. ಆಕೆಯ ಬುಡಕಟ್ಟು ಕುಟುಂಬಕ್ಕೆ ರೇಶನ್ ಕಾರ್ಡ್ ಇತ್ತು. ಅದು ಬೋಗಸ್ ಆಗಿರಲಿಲ್ಲ ಎಂಬುದಕ್ಕೆ ಆ ಬಾಲಕಿಯು ಸಾವೇ ಸಾಕ್ಷಿಯಾಗಬೇಕಾಯಿತು. ಏಕೆಂದರೆ ಅದು ಆಧಾರ್‌ಗೆ ಲಗತ್ತಾಗಿರಲಿಲ್ಲ. ಆದ್ದರಿಂದ ಕಾನೂನು ಪ್ರಕಾರ ಸಿಗಬೇಕಾದ 5 ಕೆ.ಜಿ. ಅಕ್ಕಿಯೂ ಸಿಕ್ಕಿರಲಿಲ್ಲ.

ವಿಶ್ವ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ 119 ದೇಶಗಳಲ್ಲಿ 100ನೇ ಯದ್ದು. ಆದರೂ ನಮ್ಮ ದೇಶವನ್ನು ಸೂಪರ್ ಶಕ್ತಿಯಾಗಿ ಮಾಡಲು ಜಗತ್ತೆಲ್ಲ ಸುತ್ತುತ್ತಿರುವ ನಮ್ಮ ಪ್ರಧಾನಿಗಳ ಬಾಯಿಂದ, ಮನದಿಂದ ಈ ನಾಲ್ಕು ವರ್ಷಗಳಲ್ಲಿ ಒಂದು ಬಾರಿಯೂ ಆಹಾರ ಭದ್ರತೆಯ, ಹಸಿವಿನ ಬಗ್ಗೆ ಮಾತು ಹೊರಬಂದಿಲ್ಲ.

ನಿಜ, ಹಸಿವಿನ, ಆಹಾರ ಭದ್ರತೆಯ ಸಮಸ್ಯೆ 2014ರ ನಂತರ ಸೃಷ್ಟಿಯಾದ್ದೇನಲ್ಲ. ಆದ್ದರಿಂದಲೇ ಪ್ರಜಾಪ್ರಭುತ್ವ ಶಕ್ತಿಗಳ ಒತ್ತಡದಿಂದಾಗಿ 2013ರಲ್ಲಿ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ'(ಎನ್‌ಎಫ್‌ಎಸ್‌ಎ) ತರಲಾಯಿತು. ಗ್ರಾಮೀಣ ಪ್ರದೇಶಗಳ 75% ಬಡವರಿಗೆ ಮತ್ತು ನಗರಪ್ರದೇಶಗಳ 50% ಬಡವರಿಗೆ ಪ್ರತಿವ್ಯಕ್ತಿಗೆ 5 ಕೆಜಿ ಆಹಾರಧಾನ್ಯಗಳನ್ನು ಒದಗಿಸಬೇಕೆಂಬ ಕಾಯ್ದೆ. ಭಾರತದಲ್ಲಿನ ಹಸಿವಿನ ಸಮಸ್ಯೆಯ ಅಗಾಧತೆಯ ಎದುರು ಇದು ಅನೇಕ ಲೋಪ-ದೋಷಗಳಿಂದ ಕೂಡಿದ್ದ ಕಾಯ್ದೆ. ಆದರೂ ಬಹಳಷ್ಟು ಕಡು ಬಡವರಿಗೆ ತುಸುವಾದರೂ ಪರಿಹಾರ ಕೊಡುವ ದಿಕ್ಕಿನಲ್ಲಿ ಸಾಗಿತ್ತು.

ಶರತ್ತುಗಳು,ಶರತ್ತುಗಳು, ಸಬ್ಸಿಡಿ ಕಡಿತಕ್ಕೇ ಆದ್ಯತೆ: ಈ ಕಾಯ್ದೆಯ ಲೋಪ-ದೋಷಗಳ:ನ್ನು ನಿವಾರಿಸಿ ಪರಿಣಾಮಕಾರಿಯಾಗಿಸಬೇಕಿತ್ತು. ಆದರೆ ತದ್ವಿರುದ್ಧವಾಗಿ, **ಮೋದಿ ಸರಕಾರ ಈ ಕಾಯ್ದೆಯನ್ನು, ಆಮೂಲಕ ಅದು ಕೊಟ್ಟಿರುವ ಆಹಾರದ ಹಕ್ಕನ್ನು ಶಿಥಿಲಗೊಳಿಸುವ ಪ್ರಯತ್ನಗಳನ್ನೇ ಮಾಡಿದೆ.**

ಈ ಕಾಯ್ದೆಯ ಫಲಾನುಭವಿಗಳನ್ನು ದಾಖಲು ಮಾಡುವಲ್ಲಿ ಭ್ರಷ್ಟಾಚಾರ ಇದೆ ಎನ್ನುತ್ತ ಅವರ ಸಂಖ್ಯೆಯನ್ನು ಕಡಿತ ಮಾಡುವುದೇ ಮೋದಿ ಸರಕಾರದ ಆದ್ಯತೆಯಾಯಿತು.

* ಫಲಾನುಭವಿಗಳ ದಾಖಲೆಗಳ ಕಂಪ್ಯೂಟರೀಕರಣದ ಹೆಸರಿನಲ್ಲಿ ಲಕ್ಷಾಂತರ ಕಾರ್ಡುಗಳನ್ನು ರದ್ದು ಮಾಡಲಾಯಿತು.
* ನಂತರ ಅದನ್ನು ಆಧಾರ್‌ಗೆ ಲಗತ್ತಿಸುವ ಹೆಸರಿನಲ್ಲಿ ಇನ್ನಷ್ಟು ಕುಟುಂಬಗಳು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಾದವು. ಅವನ್ನು ಈ ಕಾಯ್ದೆಯು ಪರಿಹಾರದಿಂದ ವಂಚಿಸಲಾಗುತ್ತಿದೆ.

ಈಗ ಆಧಾರ್‌ಗೆ ಲಗತ್ತಾದ ಕಾರ್ಡುಗಳಲ್ಲಿಯೂ ವಿವಿಧ ಕಾರಣಗಳಿಂದ ಆಹಾರಧಾನ್ಯಗಳನ್ನು ಕೊಡದಿರುವ ಸುದ್ದಿಗಳು ಬರುತ್ತಲೇ ಇವೆ.

ಪ್ರಧಾನ ಮಂತ್ರಿಗಳು ತಮ್ಮ ಸರಕಾರ 3.95 ಕೋಟಿ ಬೋಗಸ್ ಕಾರ್ಡುಗಳನ್ನು ಪತ್ತೆ ಹಚ್ಚಿದೆ ಎಂದು ಸಂಸತ್ತಿನಲ್ಲಿ ಬೆನ್ನು ತಟ್ಟಿಕೊಂಡರು. ಈ ಮೂಲಕ

ಪುಟ 10 ಕ್ಕೆ

ಭವ್ಯ ಭವಿಷ್ಯಕ್ಕೆ ವಿಜ್ಞಾನದ ಬೆಳಕಿನ ಬದಲು ಭೂತಕಾಲದ 'ಹಿರಿಮೆ'ಗಳ ಭ್ರಮಾಜಾಲ

ವಿಜ್ಞಾನ ಬೆಳವಣಿಗೆ, ಶಿಕ್ಷಣ ಮತ್ತು ವೈಜ್ಞಾನಿಕ ಮನೋಭಾವ ಇವುಗಳಿಗೆ ಸಂಬಂಧಪಟ್ಟಂತೆ ಭಾರತ ಕಳೆದ ನಾಲ್ಕು ವರ್ಷಗಳಲ್ಲಿ ಸ್ವಾತಂತ್ರ್ಯದ ನಂತರ ಕಂಡು ಕೇಳರಿಯದಷ್ಟು ಕೆಳಮಟ್ಟಕ್ಕೆ ಕುಸಿದಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇದಕ್ಕೆ ಕಾರಣ ಆಧುನಿಕ ವೈಜ್ಞಾನಿಕ ಸಂಶೋಧನೆಗಳು ಮತ್ತು ಬೆಳವಣಿಗೆಯ ಕುರಿತಂತೆ ಈ ಸರಕಾರದ ಸೈದ್ಧಾಂತಿಕ ಗುರುವಾದ ಆರೆಸ್ಸೆಸ್‌ನ ಕಾಮಾಲೆ ಕಣ್ಣೋಟ. ಇಂದು ವಿಕಾಸಗೊಂಡಿರುವ, ಮುಂದೆ ವಿಕಾಸಗೊಳ್ಳುವ ಎಲ್ಲ ಜ್ಞಾನ-ವಿಜ್ಞಾನಗಳ ಪೂರ್ಣ ಜ್ಞಾನ 'ಪ್ರಾಚೀನ ಭಾರತ'ಕ್ಕೆ ಇತ್ತು, ಆದ್ದರಿಂದ ಭಾರತ ಈಗ ತಿಳಿಯಬೇಕಾದ ವಿಜ್ಞಾನ ಏನೂ ಇಲ್ಲ, ಅದೆಲ್ಲ ಈಗಾಗಲೇ ನಮ್ಮ 'ಶಾಸ್ತ್ರ ಗ್ರಂಥ'ಗಳಲ್ಲಿ ಇವೆ, ಅವನ್ನು ನೋಡಿದರೆ ಸಾಕು ಎಂಬ ವಿಲಕ್ಷಣ ನಿಲುವು ನಮ್ಮ ದೇಶವನ್ನು ವಿಶ್ವದ ವಿಜ್ಞಾನ ಸಮುದಾಯದಲ್ಲಿ ನಗೆಪಾಟಲು ಮಾಡಿದೆ.

2014ರಲ್ಲಿ ಬಿಜೆಪಿಯ ಚುನಾವಣಾ ಪ್ರಣಾಳಿಕೆ ವೈಜ್ಞಾನಿಕ ಶಿಕ್ಷಣ ಮತ್ತು ತಂತ್ರಜ್ಞಾನವನ್ನು ಪ್ರೋತ್ಸಾಹಿಸಲಾಗುವುದು ಮತ್ತು ಮೂಲಭೂತ ಸಂಶೋಧನೆ ಹಾಗೂ ನವೀನ ಶೋಧನೆಗಳಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಲಾಗುವುದು ಎಂದು ಆಶ್ವಾಸನೆ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬಿಜೆಪಿ ಸರಕಾರ ಮತ್ತು ಸಂಘ ಪರಿವಾರದ ಇತರ ಸಂಘಟನೆಗಳು ಮಿಥ್ಯೆಗಳನ್ನು, ಹುಸಿ-ವಿಜ್ಞಾನಗಳನ್ನು ಮತ್ತು ಹುಸಿ ಚರಿತ್ರೆಗಳನ್ನು ಹರಡಿಸುತ್ತ ಜನಗಳ ನಡುವೆ ವೈಜ್ಞಾನಿಕ ಮನೋಭಾವವನ್ನೇ ಬುಡಮೇಲು ಮಾಡುತ್ತಿವೆ. ಹೀಗೆ ಮಾಡುವ ಭರದಲ್ಲಿ ವಾಸ್ತವವಾಗಿ ಅವು ಒಂದೆಡೆಯಲ್ಲಿ ಇತಿಹಾಸದಲ್ಲಿ ಭಾರತದ ನಿಜವಾದ ವೈಜ್ಞಾನಿಕ ಸಾಧನೆಗಳನ್ನೇ ನಿರ್ಲಕ್ಷಿಸಿದರೆ, ಇನ್ನೊಂದೆಡೆಯಲ್ಲಿ ದೇಶದ ಮುಂದಿರುವ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಸವಾಲುಗಳನ್ನು ಎದುರಿಸಲಾರದೆ ಪಲಾಯನ ಮಾಡಲಾಗುತ್ತಿದೆ.

ಆದರೂ ವಿಶ್ವ ಶಕ್ತಿಯೆಂಬ ಬೊಗಳೆ

* ಸಂಶೋಧನೆ ಮತ್ತು ಅಭಿವೃದ್ಧಿ(ಆರ್ ಅಂಡ್ ಡಿ)ಗೆ ಭಾರತ ಮಾಡುತ್ತಿರುವ ಖರ್ಚು ಕೇವಲ ಜಿಡಿಪಿಯ 0.7%. ಇದು ಅಮೆರಿಕಾ ಒತ್ತಟ್ಟಿಗಿರಲಿ, ಚೀನಾ, ದಕ್ಷಿಣ ಕೊರಿಯ ಮತ್ತು ಬಿಜೆಪಿಯ ನೆಚ್ಚಿನ ಇಸ್ರೇಲ್ ಮಟ್ಟದಿಂದಲೂ ಬಹಳ ಕೆಳಗಿದೆ.

ಪುಟ 10 ಕ್ಕೆ

ಕಾರ್ಪೋರೇಟ್‌ಗಳ 'ಸುಗಮ ವ್ಯಾಪಾರ'ಕ್ಕೆ ದೇಶದ ಪರಿಸರ ನಿಯಂತ್ರಣಗಳು ಬಲಿ

ಮೇ 22, 2018: ತಮಿಳುನಾಡಿನ ತೂತ್ತುಕುಡಿಯಲ್ಲಿ ಸ್ಟೆರ್ಲೈಟ್ ಕಾಪ್ಪರ್‌ನ ವಿಪರೀತ ಪರಿಸರ ಮಾಲಿನ್ಯ ಮಾಡುವ ಸ್ಥಾವರವನ್ನು ಮುಚ್ಚಬೇಕೆಂದು 100 ದಿನಗಳಿಂದ ಸತತವಾಗಿ ಆಗ್ರಹಿಸುತ್ತಿದ್ದ ಜನಗಳ ಮೇಲೆ ಪೋಲಿಸ್ ಗೋಲೀಬಾರಿನಲ್ಲಿ ಕನಿಷ್ಟ 12 ಜನರ ಸಾವಿನ ಆಘಾತಕಾರಿ ಸುದ್ದಿ ಬಂದ ದಿನ.

2014ರಲ್ಲಿ "ಪರಿಸರ ತಾಳಿಕೆ ನಮ್ಮ ವಿಚಾರಗಳು ಮತ್ತು ಕ್ರಿಯೆಗಳ ಕೇಂದ್ರದಲ್ಲಿ ಇರುತ್ತವೆ", ನೈಸರ್ಗಿಕ ಸಂಪನ್ಮೂಲಗಳ ಬೇಕಾಬಿಟ್ಟಿ ಲೂಟಿಯನ್ನು ನಿಲ್ಲಿಸಲಾಗವುದು ಎಂದು ಬಿಜೆಪಿಯ ಚುನಾವಣಾ ಪ್ರಣಾಳಿಕೆ ಗಂಭೀರವಾಗಿ ಮಾತು ಕೊಟ್ಟಿತ್ತು. ಆದರೆ ಈ ನಾಲ್ಕು ವರ್ಷಗಳಲ್ಲಿ ತದ್ವಿರುದ್ಧವಾದುದೇ ನಡೆದಿದೆ ಎಂಬುದಕ್ಕೆ ತೂತ್ತುಕುಡಿ ಪ್ರಕರಣ ಒಂದು ಉದಾಹರಣೆಯಷ್ಟೇ. ಸ್ಟೆರ್ಲೈಟ್ ಕಂಪನಿಗೆ ಈ ಸ್ಥಾವರವನ್ನು ರಚಿಸಲು/ವಿಸ್ತರಿಸಲು ಕಾನೂನಿನ ಪ್ರಕಾರ ಅಗತ್ಯವಾದ ಸಾರ್ವಜನಿಕ ಸಮಾಲೋಚನೆ ನಡೆಸದೆಯೇ ಅನುಮತಿಯನ್ನು ಈ ಬಿಜೆಪಿ ಸರಕಾರವೇ ನೀಡಿತು ಎಂಬುದು ಗಮನಾರ್ಹ.

ದೇಶದಲ್ಲಿ ಈಗಾಗಲೇ ದುರ್ಬಲಗೊಳಿಸಲಾಗಿರುವ ಪರಿಸರ ರಕ್ಷಣೆಯ ನಿಯಂತ್ರಣಗಳನ್ನು "ವ್ಯಾಪಾರ-ವ್ಯವಹಾರಗಳನ್ನು ಸುಗಮಗೊಳಿಸುವ" ಹೆಸರಿನಲ್ಲಿ ಸಡಿಲಗೊಳಿಸುತ್ತಲೇ ಬಂದಿರುವುದನ್ನು ಈ ನಾಲ್ಕು ವರ್ಷಗಳಲ್ಲಿ ಕಾಣಬೇಕಾಗಿ ಬಂದಿದೆ. ಬಿಜೆಪಿ ಮತ್ತು ಪ್ರಧಾನ ಮಂತ್ರಿಗಳಿಗೆ 'ವಿಕಾಸ್' ಅಥವ ಅಭಿವೃದ್ಧಿ ಎಂದರೆ ಕಾರ್ಪೋರೇಟ್ ಕೈಗಾರಿಕೀಕರಣ ಮತ್ತು ಬೃಹತ್ ಮೂಲರಚನೆಗಳೇ. ಆದ್ದರಿಂದ ಪರಿಸರ ನಿಯಮಾವಳಿಗಳು 'ವಿಕಾಸ'ಕ್ಕೆ ವಿರುದ್ಧ ಎಂದೇ ಅವರು ನಂಬಿದ್ದಾರೆ ಎಂಬುದನ್ನು ಮತ್ತೆ-ಮತ್ತೆ ಸಾಬೀತುಪಡಿಸಿಕೊಂಡಿದ್ದಾರೆ.

2017 ಮುಗಿಯುವಷ್ಟರಲ್ಲೇ ಈ ಸರಕಾರ 570 'ಎ' ದರ್ಜೆಯ ಪ್ರಾಜೆಕ್ಟ್‌ಗಳಿಗೆ ಯಾವುದೇ ಗಂಭೀರ ಯೋಚನೆಯಿಲ್ಲದೆ ತ್ವರಿತ ಗತಿಯ ಪರಿಸರ ಮಂಜೂರಾತಿಗಳನ್ನು ನೀಡಿದೆ!

ಸುಧಾರಣೆಗಳ ಹೆಸರಿನಲ್ಲಿ ನಿಯಂತ್ರಣಗಳ ರದ್ದತಿ: ಕಾರ್ಪೋರೇಟ್‌ಗಳ ಗರಿಷ್ಟ ಲಾಭಗಳಿಕೆಗೆ



ಅಡ್ಡಿಯಾಗಿರುವ ನಿಯಂತ್ರಣಗಳನ್ನು 'ಸುಧಾರಣೆ'ಯ ಹಸರಲ್ಲಿ ತೆಗೆಯುವುದು ನವ-ಉದಾರವಾದದ ಮುಖ್ಯ ಲಕ್ಷಣ. ಮೋದಿ ಸರಕಾರ ಕೂಡ ಅದೇ ಮಾರ್ಗದಲ್ಲಿ ನಡೆಯುತ್ತಿದ್ದರೆ ಆಶ್ಚರ್ಯವೇನಿಲ್ಲ.

ಪರಿಸರ ನಿಯಂತ್ರಣಗಳ ವಿಷಯದಲ್ಲಿಯೂ

ಪುಟ 10 ಕ್ಕೆ



ಬಡವರ ಆಹಾರಭದ್ರತೆಯ ಮತ್ತು ಪೌಷ್ಟಿಕತೆಯ ಹಕ್ಕುಗಳು ಮೊಟಕು

ಪುಟ 9 ರಿಂದ

ಸರಕಾರ 17,500 ಕೋಟಿ ರೂ.ಗಳನ್ನು ಉಳಿಸಿದೆ ಎಂದು ಕೇಂದ್ರ ಆಹಾರ ಮಂತ್ರಿಗಳು ಹೇಳಿಕೊಂಡಿದ್ದಾರೆ. ಆದರೆ ಮಾಹಿತಿ ಹಕ್ಕಿನ ಕಾಯ್ದೆಯ ಅಡಿಯಲ್ಲಿ ಕೇಳಿದ ವಿವರಗಳನ್ನು ಕೊಡಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಬೋಗಸ್ ಕಾರ್ಡುಗಳೆಂದು ಪತ್ತೆ ಹಚ್ಚಿದ್ದು ಹೇಗೆ ಮತ್ತು ಎಷ್ಟು ಎಂಬ ವಿವರಗಳು ಅದರ ಬಳಿಯಿಲ್ಲವಂತೆ.

ಪಡಿತರ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವನ್ನು ತಡೆಯಬೇಕು ಎಂಬುದೇನೋ ನಿಜ. ಆದರೆ ಅದನ್ನು ಗ್ರಾಮ ಮಟ್ಟದ ಸರ್ವೆಯ ಒಂದು ಪಾರದರ್ಶಕ ವಿಧಾನದ ಮೂಲಕ ಮಾಡಬೇಕು. ಹಾಗೆ ಮಾಡುವ ಯೋಚನೆಯೂ ಈ ಸರಕಾರಕ್ಕಿರಲಿಲ್ಲ. ಪಡಿತರ ಚೀಟಿಗಳ ಸಂಖ್ಯೆಯನ್ನು ಮಿತಗೊಳಿಸುವುದಷ್ಟೇ ಅದಕ್ಕೆ ಬೇಕಾಗಿದ್ದು.

ವಾಸ್ತವವಾಗಿ ಈ ಕಾಯ್ದೆಯ ಅಡಿಯಲ್ಲಿ ಫಲಾನುಭವಿಗಳಾಗಲು ಶರತ್ತುಗಳನ್ನು ಹಾಕುವುದೇ ಕಾನೂನುಬಾಹಿರ.

ಡಿಬಿಟಿ ಗೀಳು-ಗೋಳು: ಆದರೆ ಮೋದಿ ಸರಕಾರಕ್ಕೆ ಇದರ ಪರಿವೆಯೇ ಇರುವಂತಿಲ್ಲ. ಈ ಕಾಯ್ದೆಯ ಜಾರಿಗೆ ಸರಕಾರ ತನ್ನ ಬಜೆಟಿನಲ್ಲಿ ಇಡುತ್ತಿರುವ ಮೊತ್ತ 1.4ಲಕ್ಷ ಕೋಟಿ ರೂ. ಇದು ಒಟ್ಟು ಜಿಡಿಪಿಯ 1% ವೂ ಆಗುವುದಿಲ್ಲ. ಆದರೆ ಈ ದೇಶದ ಹಣಕಾಸು ಮಂತ್ರಿಗಳಿಗೆ, 3ಲಕ್ಷ ಕೋಟಿರೂ.ಗಳಷ್ಟು ಕಾರ್ಪೊರೇಟ್ ಕುಳಗಳ ಬ್ಯಾಂಕ್ ಸುಸ್ತಿ ಸಾಲಗಳನ್ನು ಮಾಫಿ ಮಾಡಿದವರಿಗೆ, ಇದೊಂದು ಬಹಳ ದೊಡ್ಡ ಮೊತ್ತವಂತೆ.

ಆದ್ದರಿಂದ ಸಾಕಷ್ಟು ಪರಿಣಾಮಕಾರಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯಿರುವ ತಮಿಳುನಾಡು ಮತ್ತು ಕೇರಳಕ್ಕೆ ಆಹಾರಧಾನ್ಯಗಳ ಪೂರೈಕೆಯಲ್ಲಿ ಕಡಿತ ಮಾಡಲಾಗಿದೆ. ಸಬ್ಸಿಡಿ ದರಗಳಲ್ಲಿ ಆಹಾರಧಾನ್ಯಗಳ ಪೂರೈಕೆಯ ಬದಲು ನೇರ ನಗದು ವರ್ಗಾವಣೆ (ಡಿಬಿಟಿ) ಪದ್ಧತಿಯನ್ನು ಜಾರಿಗೊಳಿಸಬೇಕು ಎಂಬುದು ಈಗ ಮೋದಿ ಸರಕಾರದ ಹೆಬ್ಬಯಕೆ. ಇದು ವಿಶ್ವಬ್ಯಾಂಕ್ ಮತ್ತು ನವ-ಉದಾರವಾದಿಗಳು ಸೂಚಿಸಿರುವ ಪರಿಹಾರ ಕೂಡ. ಝಾರ್ಖಂಡಿನಲ್ಲಿ ಈ ಪದ್ಧತಿಯ ಪ್ರಯೋಗ ನಡೆಸಲಾಯಿತು. ಅದು ತಾಂತ್ರಿಕ ಕಾರಣಗಳೂ ಸೇರಿದಂತೆ ಹಲವು ಕಾರಣಗಳಿಂದಾಗಿ ಸಂಪೂರ್ಣ ವಿಫಲವಾಯಿತು. ಆದರೂ ವಿಶ್ವಬ್ಯಾಂಕ್‌ನ ತತ್ವಗಳಿಗೆ ಬದ್ಧವಾಗಿರುವ ಈ ಸರಕಾರ ಈ ಡಿಬಿಟಿಯನ್ನು ಜಾರಿಗೊಳಿಸಬೇಕು ಎಂದು ಈಗ ರಾಜ್ಯ ಸರಕಾರಗಳ ಮೇಲೆ ಒತ್ತಡ ಹಾಕುತ್ತಿದೆ.

ಮಾತೃವಂದನಾ ಯೋಜನೆಯ ಹೆಸರಿನಲ್ಲಿ ವಂಚನೆ: ಇದು ಮೋದಿ ಸರಕಾರದ ಕೊಡುಗೆ ಎನ್ನುವಂತೆ ಪ್ರಚಾರ ಮಾಡಲಾಗುತ್ತಿದೆ. ವಾಸ್ತವವಾಗಿ ಮೂಲತಃ ಇದು ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಕೊಟ್ಟಿರುವ ಇನ್ನೊಂದು ಹಕ್ಕು. ಗರ್ಭಿಣಿ ಮಹಿಳೆಯರಿಗೆ 6000ರೂ. ಭತ್ಯೆ ಕೊಡಬೇಕೆಂದು ಇದು ಹೇಳುತ್ತದೆ. ಮೊದಲೆರಡು ವರ್ಷ ಈ ಹಕ್ಕಿನ ಬಗ್ಗೆ ಮೌನವಾಗಿದ್ದ ಸರಕಾರ ಮೂರನೇ ವರ್ಷದಲ್ಲಿ ಮೊತ್ತವನ್ನು 5000ರೂ.ಗಿಳಿಸಿ, ಮತ್ತು ಮೊದಲ ಮಗುವಿಗೆ ಮಾತ್ರವೇ ಸೀಮಿತಗೊಳಿಸಿ ಅದಕ್ಕೆ ಈ ಹೊಸ ಹೆಸರು ಕೊಟ್ಟಿತು!

ಐಸಿಡಿಎಸ್ ಕಡಿತ: ಆಹಾರ ಭದ್ರತಾ ಕಾಯ್ದೆ ಮೊದಲ ಬಾರಿಗೆ ಐಸಿಡಿಎಸ್(ಸಮಗ್ರೀಕೃತ ಮಕ್ಕಳ ಅಭಿವೃದ್ಧಿ ಯೋಜನೆ) ಮಕ್ಕಳ ಪೌಷ್ಟಿಕತೆಯ ಹಕ್ಕನ್ನು ಈಡೇರಿಸುವ ಸರಕಾರೀ ಕಾರ್ಯಕ್ರಮ ಎಂದು ಗುರುತಿಸಿತು. ಆದರೆ ಮೋದಿ ಸರಕಾರ ಈ ಹಕ್ಕನ್ನೂ ಉಲ್ಲಂಘಿಸುತ್ತಿದೆ. ಕ್ರಮೇಣ ಇದನ್ನು ಖಾಸಗೀಕರಿಸುವ ದಾರಿಯಲ್ಲಿ ಅದಕ್ಕೆ ನೀಡುವ ಮೊತ್ತದಲ್ಲಿ ಕಡಿತ ಮಾಡುತ್ತ ಬರುತ್ತಿದೆ.

ಭಾರತ ಈಗ ಇನ್ನೂ ಹೆಚ್ಚು ಆಹಾರ ಅಭದ್ರತೆಯನ್ನು ಎದುರಿಸುತ್ತಿದೆ. ಇದು ಸರಕಾರದ ಧೋರಣೆಗಳ ನೇರ ಫಲಿತಾಂಶ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ, ಅದರಲ್ಲಿ ಆಹಾರಧಾನ್ಯಗಳು ಮಾತ್ರವಲ್ಲ, ಅಡುಗೆ ಎಣ್ಣೆ, ಬೇಳೆಕಾಳುಗಳು, ಸಕ್ಕರೆ, ಉಪ್ಪು ಇತ್ಯಾದಿಗಳನ್ನೂ ಸೇರಿಸುವುದೇ ಭಾರತದಲ್ಲಿ ಹಸಿವು ಮತ್ತು ಅಪೌಷ್ಟಿಕತೆಯ ಸಮಸ್ಯೆಗೆ ಇರುವ ಏಕೈಕ ಪರಿಹಾರ. ಆದರೆ ಇದು ಮೋದಿ ಸರಕಾರದ ಅಜೆಂಡಾದಲ್ಲೇ ಇಲ್ಲ ಎಂಬುದನ್ನು ಈ ನಾಲ್ಕು ವರ್ಷಗಳು ಸ್ಪಷ್ಟವಾಗಿ ತೋರಿಸಿವೆ.



ಕಾರ್ಪೊರೇಟ್‌ಗಳ 'ಸುಗಮ ವ್ಯಾಪಾರ'ಕ್ಕೆ ಪರಿಸರ ನಿಯಂತ್ರಣಗಳು ಬಲಿ

ಪುಟ 9 ರಿಂದ

ಇದು ಅವರ ಆಳ್ವಿಕೆಯ ಆರಂಭದಲ್ಲೇ, ಪ್ರಮುಖ ಪರಿಸರ ಕಾಯ್ದೆಯಗಳ 'ಪುನರ್ಪರಿಶೀಲನೆ'ಗೆ ಎಂದು ಟಿಎಸ್‌ಆರ್ ಸುಬ್ರಮಣಿಯನ್ ಸಮಿತಿಯನ್ನು ನೇಮಿಸುವುದರೊಂದಿಗೇ ಆರಂಭವಾಯಿತು.. ದೊಡ್ಡ ಉದ್ಯಮಿಗಳಿಗೆ ಪರಿಸರ ಮಂಜೂರಾತಿಯನ್ನು ಸುಲಭಗೊಳಿಸುವುದು ಈ 'ಸುಧಾರಣೆ'ಯ ಏಕೈಕ ಉದ್ದೇಶ. ಮೋದಿಯವರು ಗುಜರಾತ್‌ನ ಮುಖ್ಯಮಂತ್ರಿಯಾಗಿ ಅಡಾಣಿ ಮುಂತಾದ ತಮ್ಮ ಕಾರ್ಪೊರೇಟ್ ಮಿತ್ರರಿಗಾಗಿ ಮಾಡಿದ್ದು ಇದನ್ನೇ.

ಆದರೆ ಸಂಸದೀಯ ಸಮಿತಿ ಸುಬ್ರಮಣಿಯನ್ ಸಮಿತಿಯ ಶಿಫಾರಸುಗಳನ್ನು ತಡೆ ಹಿಡಿದಿರುವುದರಿಂದ ಈ 'ಸುಧಾರಣೆ'ಯ ಪ್ರಯತ್ನಕ್ಕೆ ತಡೆಯಾಯಿತು.

ಈ ಪ್ರಯತ್ನ ವಿಫಲವಾದ ನಂತರ ಮೋದಿ ಸರಕಾರ ಸಂಸತ್ತಿನ ಅಭಿಪ್ರಾಯವನ್ನೂ ಬದಿಗೊತ್ತಲು ಅನುಸರಿಸಿದ ದಾರಿ ಎಂದರೆ, ಈಗಿರುವ ನಿಯಮಗಳನ್ನು ಕಳಚಿ ಹಾಕುವುದು, ಕಾಯ್ದೆಗಳನ್ನು ಶಿಥಿಲಗೊಳಿಸುವುದು, ಅದಕ್ಕಾಗಿ ಸರಕಾರೀ ಆದೇಶಗಳನ್ನು, ಅಧಿಸೂಚನೆಗಳನ್ನು ಹೊರಡಿಸಿ ಕಾರ್ಪೊರೇಟ್ ಹಿತಗಳನ್ನು ಈಡೇರಿಸುವುದು.

ಅಧಿಕಾರಕ್ಕೆ ಬಂದ ಕೂಡಲೇ ಪರಿಸರ ಮಂತ್ರಾಲಯದ ಮಂಜೂರಾತಿ ಸಮಿತಿಗಳನ್ನು ಬದಲಿಸಿ 140 ಪ್ರಾಜೆಕ್ಟ್‌ಗಳಿಗೆ ಅವುಗಳ ಒಟ್ಟು ಪರಿಣಾಮಗಳನ್ನು ಗಣನೆಗೆ ತಗೊಳ್ಳದೆಯೇ, ಎಷ್ಟು ಜನಗಳು ನಿರ್ವಸಿತರಾಗುತ್ತಾರೆ, ಎಷ್ಟು ವನ್ಯಜೀವಿಗಳನ್ನು ತಟ್ಟುತ್ತದೆ ಎಂಬಿತ್ಯಾದಿ ಅಂಶಗಳನ್ನು ಪರಿಶೀಲಿಸದೆಯೇ ಮಂಜೂರಾತಿಗಳನ್ನು ನೀಡಲಾಯಿತು. ನೂರಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿಗೆ ಆತುರದಲ್ಲಿ ಅರಣ್ಯ ಮಂಜೂರಾತಿ ನೀಡಲಾಯಿತು. ಹಲವಾರು ಕಲ್ಲಿದ್ದಲು ಗಣಿಗಳೂ ಮಂಜೂರಾತಿ ದಕ್ಕಿಸಿಕೊಂಡವು.

ಮಧ್ಯಪ್ರದೇಶದ ಕೆನ್-ಬೆಟ್ವ ಲಿಂಕ್ ಇದಕ್ಕೊಂದು ಉದಾಹರಣೆ. ಅಲ್ಲಿನ ಪನ್ನ ಹುಲಿ ಮೀಸಲು ಅರಣ್ಯದ 1600 ಹೆಕ್ಟೇರ್ ಜಾಗವನ್ನು ಆಕ್ರಮಿಸಿದ ಈ ಪ್ರಾಜೆಕ್ಟ್ 1600 ಕುಟುಂಬಗಳನ್ನು ಹೊರಹಾಕಿತು.

ಅಪಾಯ ತರಲಿರುವ ಹೊಸ ಅರಣ್ಯ ಧೋರಣೆ: ಈ ಸರಕಾರ ಇತ್ತೀಚೆಗೆ ಹೊಸ ಅರಣ್ಯ ಧೋರಣೆಯನ್ನು ಪ್ರಕಟಿಸಿದೆ. ಇದು ಕೂಡ ಹಲವು ಪದಗಳ ಆಟಗಳಿಂದ ಕೂಡಿದ ವಂಚಕ ಧೋರಣೆ. ಭಾರತದ ಅರಣ್ಯಗಳ ಸ್ವರೂಪಕ್ಕೇ , ಅದರ ಸಾಮಾಜಿಕ ಮತ್ತು ನೈಸರ್ಗಿಕ ಆಯಾಮಗಳಿಗೇ ಹಲವು ರೀತಿಗಳಲ್ಲಿ ಬೆದರಿಕೆಯೊಡ್ಡಬಹುದಾದ ಧೋರಣೆ ಇದು ಎಂದು ಪರಿಣಿತರು ಟೀಕಿಸಿದ್ದಾರೆ. ಈಗಿರುವ ಅರಣ್ಯಗಳ ಅಂಚಿನಲ್ಲಿ ಅಥವ ಮಧ್ಯದಲ್ಲೂ ಖಾಸಗಿಯವರ ವಾಣಿಜ್ಯ ಮರಗಳನ್ನು ಬೆಳೆಸುವ ತೋಟಗಾರಿಕೆಯ, ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿಕೊಡುವುದು ಇದರ ಮುಖ್ಯ ಉದ್ದೇಶವಿದ್ದಂತಿದೆ. ವಾಣಿಜ್ಯ ಮರಗಳು ನೈಸರ್ಗಿಕ ಅರಣ್ಯಗಳಿಗೆ ಪರ್ಯಾಯವಾಗಲಾರವು, ಅವು ಅರಣ್ಯಗಳು ಒದಗಿಸುವ ಜೀವ-ವೈವಿಧ್ಯ, ಮಣ್ಣಿನ ಸವಕಳಿಯಿಂದ ರಕ್ಷಣೆ, ಮಳೆನೀರಿನ ಕುಯ್ಲು ಇತ್ಯಾದಿ ಪರಿಸರ ಸೇವೆಗಳನ್ನು ಒದಗಿಸಲಾರವು. ಸಾಮಾಜಿಕವಾಗಿಯೂ, ಅರಣ್ಯವಾಸಿಗಳ ಜೀವನಾಧಾರಗಳನ್ನೂ ಇವು ತಟ್ಟುತ್ತವೆ.

ಆದರೆ ಈ ಸರಕಾರಕ್ಕೆ ಅರಣ್ಯವಾಸಿಗಳ ಬದುಕಿಗಿಂತ ಖಾಸಗಿ ಕುಳಗಳ ಲಾಭವೇ ಮುಖ್ಯವಾಗಿ ಕಂಡು ಬಂದಿದೆ.

ಕರಾವಳಿಗಳನ್ನೂ ತಟ್ಟುವ ಹೊಸ ಅಧಿಸೂಚನೆ : ಮೋದಿ ಸರಕಾರ ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) ಅಧಿಸೂಚನೆ 2018ನ್ನೂ ಹೊರಡಿಸಿ ಈಗಾಗಲೇ 11 ತಿದ್ದುಪಡಿಗಳ ಮೂಲಕ ದುರ್ಬಲಗೊಂಡಿರುವ ಸಿಆರ್‌ಝಡ್ 2011 ಅಧಿಸೂಚನೆಯನ್ನು ಮತ್ತಷ್ಟು ದುರ್ಬಲಗೊಳಿಸಿದೆ. ಈ ಹಿಂದೆ ದಟ್ಟ ಜನವಸತಿ ಇರುವಲ್ಲಿ ಕಡಲತಟದಿಂದ 100ಮೀಟರ್‌ಗಳ ವರೆಗೆ, ಮತ್ತು ಕಡಿಮೆ ಜನದಟ್ಟಣೆಯಿದ್ದಲ್ಲಿ 200 ಮೀ. ವರೆಗೆ 'ಅಭಿವೃದ್ಧಿ ಚಟುವಟಿಕೆ'ಗಳನ್ನು ಮಾಡುವಂತಿರಲಿಲ್ಲ. 2018ರ ಅಧಿಸೂಚನೆ ಇದನ್ನು 50ಮೀಟರುಗಳಿಗೆ ಇಳಿಸಿದೆ.

ದೇಶದಲ್ಲಿ ಕರಾವಳಿಗುಂಟ ಸುಮಾರು 3000 ಹಳ್ಳಿಗಳಿದ್ದು, ಇಲ್ಲಿ ನೆಲೆಸಿರುವ ಮೀನುಗಾರರು ಮತ್ತು ಇತರರು ಈ 100-200 ಮೀಟರುಗಳ ಕಿರಿದಾದ ಪಟ್ಟಿಯನ್ನು ತಮ್ಮ ವೃತ್ತಿಗಳಿಗೆ, ದೋಣಿಗಳನ್ನು ನಿಲ್ಲಿಸಲು, ಮೀನು ಮತ್ತು ಬಲೆಗಳನ್ನು ಒಣಗಿಸಲು, ಉಪ್ಪು ತಯಾರಿಕೆ ಮುಂತಾದವುಗಳಿಗೆ ಬಳಸುತ್ತಿದ್ದಾರೆ. ಅವೆಲ್ಲ ಇನ್ನು ಅವರಿಗೆ ಲಭ್ಯವಾಗುವುದಿಲ್ಲ.

ಈ ಕಿರಿದಾದ ಪಟ್ಟಿಯಲ್ಲಿ ಕಡಲ ಕೊರೆತ ತಪ್ಪಿಸುವ ರಚನೆಗಳು, ಬಂದರುಗಳು, ಜಲಮಾರ್ಗಗಳ ರಚನೆ ಕುರಿತಂತಹ ಬಳಕೆಗಳ ಬಗ್ಗೆ ಅಧ್ಯಯನ ನಡೆಸಿದ ನಂತರ ನಿಯಮಗಳನ್ನು ರೂಪಿಸಬೇಕು ಎಂದು 2011ರ ಅಧಿಸೂಚನೆ ಹೇಳಿತ್ತು. ಆದರೆ ಅಂತಹ ಅಧ್ಯಯನಗಳಿಗೆ ಕಾಯದೆ ಇಂತಹ ಚಟುವಟಿಕೆಗಳಿಗೆ, ಜತೆಗೆ 'ಪರಿಸರ ಪ್ರವಾಸೋದ್ಯಮ'ಕ್ಕೆ 2018ರ ಅಧಿಸೂಚನೆ ಅನುಮತಿ ನೀಡುತ್ತದೆ.

ಇಷ್ಟೇ ಅಲ್ಲದೆ ಕೇಂದ್ರ ಸರಕಾರದ ಅಡಿಯಲ್ಲಿ ಒಂದು ವಿಶೇಷ ಏಜೆನ್ಸಿಯನ್ನು ರಚಿಸಿ ಕಡಲ ನೀರು, ಉಬ್ಬರ-ಇಳಿತ ಮುಂತಾದವುಗಳನ್ನು ಕುರಿತ ನಿರ್ಧಾರಗಳ ವ್ಯಾಪ್ತಿಯನ್ನು ರಾಜ್ಯಗಳಿಂದ ಕಿತ್ತುಕೊಂಡು ಕೇಂದ್ರ ಸರಕಾರಕ್ಕೆ ವರ್ಗಾಯಿಸಲಾಗಿದೆ.

ಇವೆಲ್ಲ ಕರಾವಳಿ ಪರಿಸರಕ್ಕೆ, ಮತ್ತು ಲಕ್ಷಾಂತರ ಮೀನುಗಾರರು ಹಾಗೂ ಕರಾವಳಿವಾಸಿಗಳ ಜೀವನಾಧಾರಗಳಿಗೆ ಬೆದರಿಕೆ ಒಡ್ಡಲಿರುವ ಕ್ರಮಗಳು ಎಂದು ಪರಿಣಿತರು ಹೇಳುತ್ತಿದ್ದಾರೆ.

ವಾತಾವರಣ ಬದಲಾವಣೆಯಲ್ಲೂ ಜನಸಾಮಾನ್ಯರನ್ನು ಮರೆತ ಧೋರಣೆ

ಪ್ಯಾರಿಸ್ ವಾತಾವರಣ ಬದಲಾವಣೆ ಸಂಧಿಯ ಮಾತುಕತೆಗಳ ಸಮಯದಲ್ಲಾಗಲೀ, ನಂತರವಾಗಲೀ, ಮೋದಿ ಸರಕಾರ ಬಡವರಿಗೆ, ಅದರಲ್ಲೂ ಗ್ರಾಮೀಣ ಬಡವರಿಗೆ ಆಧುನಿಕ ಇಂಧನ ಮೂಲಗಳನ್ನು ಲಭ್ಯಗೊಳಿಸಲು ಕಡಿಮೆ ಇಂಗಾಲ ಉತ್ಸರ್ಜನೆಯ ಕ್ರಮಗಳನ್ನು ಅಂಗೀಕರಿಸುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ದೇಶದ ವಂಚಿತ ವಿಭಾಗಗಳ ಇಂಧನ ಅವಶ್ಯಕತೆಗಳನ್ನು ಪೂರೈಸುವ ಕಣ್ಣೋಟವೇ ಈ ಸರಕಾರಕ್ಕೆ ಇದ್ದಂತಿಲ್ಲ. ಇದರ ಪರಿಣಾಮವೆಂದರೆ ಇಂಧನ ಬಳಕೆಯಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಪಾರ ಅಂತರ ಹಾಗೆಯೇ ಮುಂದುವರೆಯುತ್ತದೆಯಷ್ಟೇ ಅಲ್ಲ, ಅದು ಇನ್ನಷ್ಟು ಹೆಚ್ಚುತ್ತದೆ. ಮೋದಿ ಸರಕಾರ ಪ್ಯಾರಿಸ್ ಒಪ್ಪಂದದ ಅಂಶಗಳಿಗೆ ಬದ್ಧವಾಗಿರುವದಾಗಿ ಹೇಳುತ್ತ, ವಾಸ್ತವವಾಗಿ ಕೋಟ್ಯಂತರ ಭಾರತೀಯರನ್ನು ಕಡಿಮೆ ಇಂಧನ ಬಳಕೆಯ ಬದುಕಿಗೇ ಕಟ್ಟಿ ಹಾಕಿದೆ ಎಂದು ಪರಿಸರ ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಇಲ್ಲಿಯೂ ಜನಸಾಮಾನ್ಯರಿಗೆ 'ಒಳ್ಳೆಯ ದಿನ'ಗಳ ಸೂಚನೆಯೂ ಇಲ್ಲ.

ಭವ್ಯ ಭವಿಷ್ಯಕ್ಕೆ ವಿಜ್ಞಾನದ ಬೆಳಕಿನ ಬದಲು ಭೂತಕಾಲದ 'ಹಿರಿಮೆ'ಗಳ ಭ್ರಮಾಜಾಲ

ಪುಟ 9 ರಿಂದ

ಈ ಖರ್ಚು ಕೂಡ ಬಹುಪಾಲು ರಕ್ಷಣಾ ವಲಯದಲ್ಲಿ ಮಾತ್ರ, ಮೂಲ ಸಂಶೋಧನೆ ಮತ್ತು ಆರ್ ಅಂಡ್ ಡಿಗೆ ಅತ್ಯಲ್ಪ.

* ಸರಕಾರ ತಾನು ಆರ್ ಅಂಡ್ ಡಿ ಗೆ ವಿದೇಶಿ ನೇರ ಹೂಡಿಕೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದೇನೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಇದು ಭಾರತದ ಪ್ರತಿಭೆಯನ್ನು ಬಳಸಿಕೊಳ್ಳಲು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೆರವಾಗಿದೆಯಷ್ಟೇ. ದೇಶಕ್ಕೆ ಏನೂ ಇದರಿಂದ ಪ್ರಯೋಜನವಾಗಿಲ್ಲ.
* ಅಮೆರಿಕಾದಲ್ಲಿ ಭಾರತದಿಂದ ಹೋಗಿರುವ ಪೇಟೆಂಟ್ ಅರ್ಜಿಗಳಲ್ಲಿ 80% ಬಹುರಾಷ್ಟ್ರೀಯ ಕಂಪನಿಗಳದ್ದೇ!
* ಭಾರತೀಯ ಪೇಟೆಂಟ್‌ಗಳಲ್ಲಿ ಭಾರತದ ಪಾಲು 2001-02ರಲ್ಲಿ 40% ಇತ್ತು, 2015-16ರಲ್ಲಿ ಇದು 15%ಕ್ಕೆ ಇಳಿದಿದೆ.
* ಉನ್ನತ ಶಿಕ್ಷಣದಲ್ಲಿ ಸಂಶೋಧನೆಯೂ ಸಾರ್ವಜನಿಕ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಅನುದಾನ ಕಡಿತದಿಂದಾಗಿ ನೆಲ ಕಚ್ಚುತ್ತಿದ್ದರೆ, ಸರಕಾರದಿಮದ ವಿಪರೀತ ಪ್ರೋತ್ಸಾಹ ಪಡೆಯುತ್ತಿರುವ ಖಾಸಗಿ ಸಂಸ್ಥೆಗಳಿಗೆ ತಕ್ಷಣದ ಲಾಭ ಮುಖ್ಯವೇ ಹೊರತು, ಅವು ಈ ಕ್ಷೇತ್ರದಲ್ಲಿ ಹಣ ಖರ್ಚು ಮಾಡುತ್ತಿಲ್ಲ.
* ಪರಿಣಾಮವೆಂದರೆ ನೆರೆಯ ಚೀಣಾದಲ್ಲಿ ಸಂಶೋಧನೆಯಲ್ಲಿ ತೊಡಗಿರುವ ವಿಜ್ಞಾನಿಗಳು ಮತ್ತು ಇಂಜಿನಿಯರುಗಳ ಪ್ರಮಾಣ 47% ಇದ್ದರೆ, ಭಾರತದಲ್ಲಿ ಅದು 10% ದ ಆಚೀಚೆಯೇ ಕಳೆದ ಎರಡು ದಶಕಗಳಿಂದ ಗಿರಕಿ ಹೊಡೆಯುತ್ತಿದೆ. ಅದರಿಮದ ಹೊರಬರುವ ಕ್ರಮಗಳೇನೂ ಈ ಸರಕಾರದ ಮುಂದಿಲ್ಲ.

ಈ ಹಿನ್ನೆಲೆಯಲ್ಲಿ, 2022 ರ ವೇಳೆಗೆ ಭಾರತ ಒಂದು ಜಾಗತಿಕ ವಿಜ್ಞಾನ ಶಕ್ತಿಯಾಗುತ್ತದೆ ಎಂದು ಕಳೆದ ವರ್ಷ ಪ್ರಧಾನ ಮಂತ್ರಿಗಳು ತಿರುಪತಿ ವಿಜ್ಞಾನ ಸಮ್ಮೇಳನದಲ್ಲಿ ಹೇಳಿದ ಮಾತುಗಳು ಅವರ ಇನ್ನೊಂದು ಬೊಗಳೆಯಾಗಿ ಕಾಣುತ್ತವೆಯಷ್ಟೇ.

ವಿದ್ಯಾರ್ಥಿ-ಯುವಜನರಿಗೆ ನಿರಾಶಾದಾಯಕ ಸನ್ನಿವೇಶ: ಕಳೆದ ನಾಲ್ಕು ವರ್ಷಗಳಲ್ಲಿ ಸ್ಮಾರ್ಟ್ ಸಿಟಿ, ಸ್ಕಿಲ್ ಇಂಡಿಯ, ಸ್ಟಾರ್ಟ್-ಅಪ್ ಇಂಡಿಯ ಮುಂತಾದ ಮಾತಿನ ಮಂಟಪಗಳನ್ನು ಕಟ್ಟಲಾಗಿದೆ. ಅವುಗಳಲ್ಲಿ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಟ್ಟಿ ಬೆಳೆಸುವ ಕಣ್ಣೋಟವೇ ಇಲ್ಲ. ಭವ್ಯ 'ಮೇಕ್ ಇನ್ ಇಂಡಿಯಾ' ದಲ್ಲಂತೂ ಎಫ್‌ಡಿಐ ಆಕರ್ಷಿಸುವುದೇ ಮುಖ್ಯವಾಗಿದೆ, ಆದ್ದರಿಂದ ರಫ್ತಿನ ಮೇಲೆಯೇ ಮುಖ್ಯ ಒತ್ತು. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಮ್ಮಲ್ಲಿನ ಕೊರತೆಗಳನ್ನು ತುಂಬಿಸಿಕೊಳ್ಳುವ ಅವಕಾಶ ಏನೇನೂ ಇಲ್ಲ. ಇಲೆಕ್ಟ್ರಾನಿಕ್ಸ್, ಸೌರಶಕ್ತಿ ಪ್ಯಾನೆಲ್‌ಗಳು, ಸೆಮಿ ಕಂಡಕ್ಟರುಗಳು ಮತ್ತಿತರ ವಲಯಗಳಲ್ಲಿ ಭಾರೀ ಆಮದನ್ನೇ ನಾವಿನ್ನೂ ಅವಲಂಬಿಸಿರುವುದೇ ಇದಕ್ಕೆ ಸಾಕ್ಷಿ. ರಕ್ಷಣಾ ಉತ್ಪಾದನೆಯಲ್ಲೂ ಇದೇ ಕತೆ. ರಿಪೇರಿ ಕೆಲಸಗಳಲ್ಲಿ ಖಾಸಗಿ ಕುಳಗಳಿಗೆ ದುಡ್ಡು ಮಾಡಿಕೊಳ್ಳಲಷ್ಟೇ ಆದ್ಯತೆ, ತಂತ್ರಜ್ಞಾನವನ್ನು ಗಳಿಸುವುದಕ್ಕಲ್ಲ.

ನಮ್ಮ ಯುವಜನರ ಭವಿಷ್ಯದ ಬೆಳವಣಿಗೆಗೆ ಬೇಕಾಗುವ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಜ್ಞಾನ ಅವರಿಗೆ ಲಭ್ಯವಾಗುತ್ತಿಲ್ಲ. ಬದಲಿಗೆ ಅವರನ್ನು ಭೂತಕಾಲಕ್ಕೆ ತಳ್ಳಲಾಗುತ್ತಿದೆ, ಭೂತಕಾಲದ ಗಣೇಶ ಪ್ಲಾಸ್ಟಿಕ್ ಸರ್ಜರಿ, ಪುಷ್ಪಕ ವಾಯುಯಾನ, ಕರ್ಣ ಪ್ರಣಾಳಿಕೆ ಶಿಶು ಜನನ, ಐನ್‌ಸ್ಟೈನನನ್ನೂ ಮೀರಿಸುವ ವೇದಗಳು ಇತ್ಯಾದಿ ಹುಸಿ ಹಿರಿಮೆಗಳ ಭ್ರಮೆಗಳನ್ನು ಅವರು ಕಣ್ಣುಮುಚ್ಚಿ ಒಪ್ಪಿಕೊಳ್ಳಬೇಕು ಎಂದು ನಿರೀಕ್ಷಿಸಲಾಗುತ್ತಿದೆ. ಸ್ವತಃ ಪ್ರಧಾನಿಗಳೂ ವಿಜ್ಞಾನ ವೇದಿಕೆಗಳಲ್ಲೂ ಇಂತಹ ಮಿಥ್ಯೆಗಳನ್ನು ಹರಡುತ್ತಿದ್ದಾರೆ. ಇದರಿಂದಾಗಿ ನೊಬೆಲ್ ಪುರಸ್ಕೃತ ವಿಜ್ಞಾನಿಗಳು ಇಂತಹ ವಿಜ್ಞಾನ ಸಮ್ಮೇಳನಗಳಲ್ಲಿ ತಾವು ಭಾಗವಹಿಸುವುದಿಲ್ಲ ಎಂದು ಹೇಳುವ ಶೋಚನೀಯ ಪರಿಸ್ಥಿತಿ ಉಂಟಾಗಿದೆ. ಇಂತಹ ವಾತಾವರಣದಲ್ಲಿ ಭಾರತದ ವಿದ್ಯಾರ್ಥಿಗಳು ತಮ್ಮ ಭವಿಷ್ಯಕ್ಕೆ ಬೇಕಾಗುವ ವಿಮರ್ಶಾತ್ಮಕ ಚಿಂತನೆ ಮತ್ತು ವೈಜ್ಞಾನಿಕ ಹಾಗೂ ಸಮಸ್ಯೆ ಪರಿಹರಿಸಿಕೊಳ್ಳುವ ನಿಲುವು, ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದಾದರೂ ಹೇಗೆ?

ಅಪಾರ ಮಾನವ ಸಂಪನ್ಮೂಲ, ಪ್ರತಿಭೆಗಳನ್ನು ಹೊಂದಿರುವ ಭಾರತಕ್ಕೆ ಇದೊಂದು ನಿರಾಶಾದಾಯಕ ಸನ್ನಿವೇಶ.

ಸರ್ಕಾರಿ ಶಾಲೆಗಳನ್ನು ಉಳಿಸಲು ಅಂಗನವಾಡಿ ಕೇಂದ್ರಗಳನ್ನು ಬಲಹೀನಗೊಳಿಸಬೇಕೆ?

ಎಸ್.ವರಲಕ್ಷ್ಮಿ

ರಾಜ್ಯದಲ್ಲಿ 48 ಸಾವಿರ ಶಾಲೆಗಳಿವೆ. ಅದರಲ್ಲಿ 10 ಸಾವಿರ ಶಾಲೆಗಳಲ್ಲಿ ಹಾಜರಾತಿ ಮತ್ತು ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು LKG–UKG ಮತ್ತು ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂಬುದಾಗಿ 2018–19 ಬಜೆಟಿನಲ್ಲಿ ತಿಳಿಸಲಾಗಿದೆ.

ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಕಲಿಕೆಯ ಆರಂಭಕ್ಕೆ ಈಗ 5 ವರ್ಷ 10 ತಿಂಗಳು, ಮತ್ತು LKG–UKGಗೆ 3 ವರ್ಷ 10 ತಿಂಗಳು ಎಂದು ವಯಸ್ಸನ್ನು ಸರ್ಕಾರ ನಿಗದಿ ಪಡಿಸಿದೆ. ಹಾಗೆಯೇ ಅಂಗನವಾಡಿ ಕೇಂದ್ರಕ್ಕೆ ಅಧಿಕೃತವಾಗಿ ಬರುವ ಮಕ್ಕಳು ವಯಸ್ಸು 3 ರಿಂದ 6 ವರ್ಷ. ಅಂದರೆ ಸರ್ಕಾರ ಪ್ರಾರಂಭಿಸುವ ಪ್ರಾಥಮಿಕ ಶಾಲೆಗಳಲ್ಲಿ LKG–UKGಗೆ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳನ್ನೇ ಪುನರ್ ದಾಖಲು ಮಾಡಬೇಕಾಗುತ್ತದೆ. ಇದರಿಂದ ಮಕ್ಕಳಿಗೆ ಇರುವ ICDS ವ್ಯವಸ್ಥೆಯೇ ಕಳಚಿ ಬೀಳುತ್ತದೆ. ಈ ಹಿನ್ನಲೆಯಲ್ಲಿ ಈ ವಿಷಯವನ್ನು ಪುನರ್ ವಿಮರ್ಶೆ ಮಾಡುವುದು ಅಗತ್ಯವಿದೆ.

ದೇಶದಲ್ಲಿ 6–10 ವರ್ಷದ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಒದಗಿಸಬೇಕು ಮತ್ತು ಎಲ್ಲರಿಗೂ ಸಮಾನಾವಕಾಶ ಸಿಗಬೇಕೆಂದು 1911ರಲ್ಲಿ ಗೋಖಲೆಯವರು ಇಂಪೀರಿಯಲ್ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಂಡಿಸಿದ್ದರು. ಆಗ ಬ್ರಿಟೀಷರು ಅದನ್ನು ತಿರಸ್ಕರಿಸಿದರು. ಸ್ವಾತಂತ್ರ್ಯ ನಂತರ ನಡೆದ ಹಲವು ಚಳುವಳಿಗಳು ಮತ್ತು ಶೈಕ್ಷಣಿಕ ನೀತಿಗಳಿಂದಾಗಿ ಇಂದೂ ಎಲ್ಲರಿಗೂ ಶಿಕ್ಷಣದ ಅವಕಾಶಗಳು ಸಿಗುವಂತಾಗಿದೆ.

ಆದರೆ ಸರ್ಕಾರಗಳು ಅನುಸರಿಸುತ್ತಿರುವ ಉದಾರೀಕರಣ ನೀತಿಗಳ ಭಾಗವಾಗಿ ಶಿಕ್ಷಣ ಇಲಾಖೆ ಸರ್ಕಾರಿ ಶಾಲೆಗಳನ್ನು ಸಮಗ್ರವಾಗಿ ಉನ್ನತ ಮಟ್ಟಕ್ಕೇರಿಸಲು ಬೇಕಾದ ಅನುದಾನಗಳು ಬಜೆಟಿನಲ್ಲಿ ಕಡಿತವಾಗುತ್ತವೆ. ಮಾತ್ರವಲ್ಲದೆ ಖಾಸಗಿ



ಶಿಕ್ಷಣಕ್ಕೆ ಹೆಚ್ಚಿನ ಅವಕಾಶಗಳನ್ನು ಮಾಡಿಕೊಡುತ್ತವೆ. ಈ ಖಾಸಗಿ ಶಿಕ್ಷಣ ಸಂಸ್ಥೆಗಳು ವ್ಯಾಪಾರೀಕರಣಕ್ಕೆ ಇಳಿದಿರುವುದು ಮಾತ್ರವಲ್ಲದೆ, ಗುಣಮಟ್ಟದ ಶಿಕ್ಷಣ ನೀಡಲು ಕೂಡಾ ವಿಫಲವಾಗಿವೆ ಎಂಬ ವರದಿಗಳು ಕೂಡಾ ಇವೆ.

ರಾಜ್ಯದಲ್ಲಿ ಸುಮಾರು 21 ಸಾವಿರ ಸರಕಾರಿ ಪ್ರಾಥಮಿಕ* ಶಾಲೆಗಳಲ್ಲಿ 25 ಲಕ್ಷ ಮಕ್ಕಳಿದ್ದಾರೆ. 4200 ಖಾಸಗಿ ಪ್ರಾಥಮಿಕ* ಶಾಲೆಗಳಲ್ಲಿ 24.5 ಲಕ್ಷ ಮಕ್ಕಳಿದ್ದಾರೆ. (*ಇಲ್ಲಿ 1ರಿಂದ 5 ತರಗತಿವರೆಗೆ ಮಾತ್ರ ಇರುವ ಪ್ರಾಥಮಿಕ ಶಾಲೆಗಳನ್ನು ಮಾತ್ರಗಣನೆಗೆ ತೆಗೆದುಕೊಳ್ಳಲಾಗಿದೆ) 14,048 ಖಾಸಗಿ ಕಿಂಡರ್‌ಗಾರ್ಟನ್‌ಗಳಲ್ಲಿ 42.14 ಲಕ್ಷ ಮಕ್ಕಳು ಇದ್ದಾರೆ. ಅಂದರೆ ಸರ್ಕಾರಿ ಶಾಲೆಗಳಲ್ಲಿ ಹಾಜರಾತಿ ಕಡಿಮೆಯಾಗಲು ಮುಖ್ಯ ಕಾರಣ. ಖಾಸಗಿ ಶಾಲೆಗಳಲ್ಲಿ ಓದಿಸಿದರೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗುತ್ತದೆ ಎಂಬ ಸಾಮಾಜಿಕ ಅಭಿಪ್ರಾಯ. ಈ ಅಭಿಪ್ರಾಯ ಬರಲು ಮುಖ್ಯ ಕಾರಣ ಸರ್ಕಾರಿ ಶಾಲೆಗಳಿಗಿರುವ ಮೂಲಭೂತ ಸೌಲಭ್ಯಗಳ ಕೊರತೆ. ಶಾಲೆಗಳಲ್ಲಿ ಶಿಕ್ಷಕರೇ ಇಲ್ಲದೆ, ಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ದುಡಿಸುತ್ತಿರುವುದು ಮತ್ತು ಪ್ರಮುಖವಾಗಿ ಖಾಸಗಿ ಶಾಲೆಗಳಿಗೆ ಉತ್ತೇಜನ ನೀಡುತ್ತಿರುವುದು ಕಂಡು ಬರುತ್ತದೆ.

ಶಿಕ್ಷಣ ಇಲಾಖೆ ತನ್ನ ನೀತಿಗಳಿಂದಾದ ಪರಿಣಾಮಗಳನ್ನು ಮರೆಮಾಚಲು 'ಇಂಗ್ಲೀಷ್ ವ್ಯಾಮೋಹ' ಎಂಬ ಹೆಸರಿನಲ್ಲಿ LKG–UKGಗಳನ್ನು ಪ್ರಾರಂಭಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಿದೆ. ಈ ಘೋಷಣೆಯಿಂದ ಅಂಗನವಾಡಿ ಕೇಂದ್ರಗಳ ಮೇಲಾಗುವ ಪರಿಣಾಮ ಪರಿಶೀಲಿಸೋಣ.

ಇಂದಿನ ಮಕ್ಕಳೇ ಮುಂದಿನ ಜನಾಂಗ. ರಾಷ್ಟ್ರದ ಪ್ರಗತಿ ಮಕ್ಕಳ ಪಾಲನೆ ಪೋಷಣೆಯ ಮೇಲೆ ಅವಲಂಬಿತವಾಗಿದೆ. ಮಗುವಿನ ದೈಹಿಕ ಬೆಳವಣಿಗೆಯ 40% ಮತ್ತು ಮಾನಸಿಕ ಬೆಳವಣಿಗೆಯ 80%ರಷ್ಟು ಈ ಅವಧಿಯಲ್ಲಿ ಆಗುತ್ತದೆ. ಈ ಅವಧಿಯಲ್ಲಿ ಮಗುವಿನ ಬೆಳವಣಿಗೆ ಅತ್ಯಂತ ಮಹತ್ವದ್ದು. ಮಗುವಿನ ಬಾಲ್ಯದಲ್ಲಿನ ಅಪೌಷ್ಠಿಕತೆಯು, ಮುಂದಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಆದ್ದರಿಂದ "ದೇಶದ ಪರಮೋಚ್ಚ ಮತ್ತು ಅತಿ ಮುಖ್ಯ ಸಂಪತ್ತು ಎಂದು ಪರಿಗಣಿಸಿ 1975 ರಲ್ಲಿ ಅಕ್ಟೋಬರ್ 2 ರಂದು ICDS ಯೋಜನೆಯನ್ನು ಪ್ರಾರಂಭ ಮಾಡಲಾಯಿತು. ಇಂದು ದೇಶದಲ್ಲಿ 8.5 ಕೋಟಿ ಫಲಾನುಭವಿಗಳು ಇದ್ದಾರೆ. ರಾಜ್ಯದಲ್ಲಿ 3 ವರ್ಷದೊಳಗಿನ ಮಕ್ಕಳು 23 ಲಕ್ಷ, ಹಾಗೂ 3 ರಿಂದ 6 ವರ್ಷದೊಳಗಿನ 17 ಲಕ್ಷ ಮಕ್ಕಳು ಫಲಾನುಭವಿಗಳಾಗಿದ್ದಾರೆ. ಈಗಾಗಲೇ 14,048 ಖಾಸಗಿ ಕಿಂಡರ್ ಗಾರ್ಟನ್ ಗಳಲ್ಲಿ 42.14 ಲಕ್ಷ ಮಕ್ಕಳು ಇದ್ದಾರೆ. ಇದರಿಂದ 61 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಕೊರತೆ ಕಾಣಲು ಪ್ರಾರಂಭವಾಗಿದೆ. ಅಂಗನವಾಡಿ ಕೇಂದ್ರಗಳು ಖಾಯಂ ಆಗಿ ಮುಚ್ಚ ಬೇಕಾಗುತ್ತದೆ. ಏಕೆಂದರೆ 3 ರಿಂದ 6 ವರ್ಷದ ಮಕ್ಕಳು ಮಾತ್ರವೇ ಅಂಗನವಾಡಿ ಕೇಂದ್ರಗಳಿಗೆ ಬರುವುದು.

ವಿವಿಧ ಅವಧಿಗಳಲ್ಲಿ ಮಕ್ಕಳ ಮಾನಸಿಕ ಮತ್ತುದೈಹಿಕ ಪರಿಸ್ಥಿತಿಗಳಲ್ಲಿ ವ್ಯತ್ಯಾಸಗಳಿರುತ್ತವೆ. ಸರ್ಕಾರದ ಶಾಲಾ ಶಿಕ್ಷಕರಿಗೆ 6 ವರ್ಷದ ಮೇಲಿನ ಮಕ್ಕಳ ಪರಿಸ್ಥಿತಿ ಮತ್ತು ಅವರೊಟ್ಟಿಗಿನ ಒಡನಾಟ ಮಾತ್ರ ಇರುವುದರಿಂದ, 6 ವರ್ಷದ ಕೆಳಗಿನ ಮಕ್ಕಳೊಟ್ಟಿಗಿನ ಒಡನಾಟ ಮತ್ತು ಆ ಹಂತದ ತಾಳ್ಮೆಗಳು ಇರುವುದಿಲ್ಲ. ಅದಕ್ಕೆ ಅವರಿಗೆ ಮತ್ತೆ ತರಬೇತಿ ಕೊಡಬೇಕಾಗುತ್ತದೆ. ಇಲ್ಲವೆ ಬೇರೆ ಸಿಬ್ಬಂದಿ ನೇಮಿಸಿಕೊಳ್ಳಬೇಕಾಗುತ್ತದೆ. ಮಾತ್ರವಲ್ಲದೆ ಈ ಮಕ್ಕಳಿಗೆ ಊಟ ಮಾಡಿಸುವುದು, ಶೌಚಾಲಯಕ್ಕೆ ಕರೆದುಕೊಂಡು ಹೋಗುವುದು, ಸ್ವಚ್ಛ ಮಾಡುವ ಪ್ರಶ್ನೆಗಳಿವೆ. ಮಾತ್ರವಲ್ಲದೆ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳಿಗೆ ಬೆಳಗಿನ ತಿಂಡಿ (ಹಾಲು+ಕಡ್ಲೆಬೀಜ, ಹೆಸರು ಪಾಯಸ, ಮೊಳಕೆ ಕಾಳು) ಮಧ್ಯಾಹ್ನ ಅನ್ನ–ಸಾರು ತಯಾರಿಸಿ ಕೊಡಬೇಕು. 1.5 ಘಂಟೆ ಮಕ್ಕಳಿಗೆ ಅಲ್ಲಿಯೇ ನಿದ್ದೆ ಮಾಡಿಸಲಾಗುತ್ತದೆ ಹಾಗೂ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಪೂರ್ವ–ಪ್ರಾಥಮಿಕ ಶಿಕ್ಷಣದ ಔಪಚಾರಿಕ ಶಿಕ್ಷಣವನ್ನು ಕೊಡಲಾಗುತ್ತದೆ.

ಈಗಾಗಲೇ ICDS ಯೋಜನೆಗೆ 3200 ಕೋಟಿ ರೂಗಳಷ್ಟು ಸರ್ಕಾರ ಖರ್ಚು ಮಾಡುತ್ತಿದೆ. ಈಗಿರುವ ಅಂಗನವಾಡಿ ಕೇಂದ್ರಗಳನ್ನು ಶಿಶುಪಾಲನಾ ಕೇಂದ್ರಗಳಾಗಿ ಪರಿವರ್ತಿಸಿ ಈಗಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ವಿಶೇಷ ತರಬೇತಿಗಳನ್ನು ನಡೆಸಿದರೆ ರಾಜ್ಯದ ಎಲ್ಲಾ ವಿಭಾಗದ ಮಕ್ಕಳಿಗೂ ಅವಕಾಶಗಳನ್ನೊದಗಿಸಲು ಸಾಧ್ಯವಾಗುತ್ತದೆ.

ಹಾಗೆಯೇ ಖಾಸಗಿ ಶಾಲೆಗಳಿಗೆ ಕೊಡುವ ಪ್ರೋತ್ಸಾಹವನ್ನು ಕಡಿಮೆ ಮಾಡಿ, ಮೂಲಸೌಕರ್ಯಗಳನ್ನು ಒದಗಿಸುವ ಮತ್ತು ಶಿಕ್ಷಕರನ್ನು ನೇಮಿಸುವ ಮೂಲಕ ಸರಕಾರಿ ಶಾಲೆಗಳನ್ನು ಬಲಿಷ್ಠಗೊಳಿಸಬೇಕೇ ವಿನಃ ಅಂಗನವಾಡಿ ವ್ಯವಸ್ಥೆಯನ್ನು ಹಾಳುಗೆಡವುದು ಪರಿಹಾರವಲ್ಲ.



ಶಿರೂರು ಸ್ವಾಮೀಜಿ ಈ ವರ್ಷ ನೀಡಿದ್ದ ಏಳು ವಿವಾದಾತ್ಮಕ ಹೇಳಿಕೆಗಳು *

ಕೇಳಿಸಿದ್ದು

ಶಿರೂರು ಸ್ವಾಮೀಜಿ ಮತ್ತು ಅಷ್ಟಮಠಗಳ ಇತರ ಸ್ವಾಮೀಜಿಗಳ ನಡುವೆ ಆಗಾಗ್ಗೆ ತಕರಾರು ನಡೆಯುತ್ತಲೇ ಇತ್ತು. ಈ ಹಿನ್ನೆಲೆಯಲ್ಲಿ ಆಗಾಗ್ಗೆ ಶಿರೂರು ಸ್ವಾಮೀಜಿಗಳ ಆಕ್ರೋಶವೂ ಸ್ಫೋಟಗೊಳ್ಳುತ್ತಿದ್ದದ್ದು ನಿಜ. ಅಂತಹ ಸಂದರ್ಭಗಳಲ್ಲಿ ಅವರು ನೀಡಿದ ಕೆಲವು ವಿವಾದಾತ್ಮಕ ಹೇಳಿಕೆಗಳು ಇಲ್ಲಿವೆ.

ಹೇಳಿಕೆ 1: ಶಿರೂರು ಶ್ರೀ: ಎಲ್ಲ ಸ್ವಾಮೀಜಿಗಳು ಒಟ್ಟಿಗಿದ್ದಾರೆ ಎಂದು ಗೊತ್ತುಂಟು ನಿಮಗೆ. ಈಗ ಲೀಡರ್ ಹೇಳಿದರೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಲೀಡರ್ ಯಾರು ಎಂದು ನಿಮಗೆ ಗೊತ್ತುಂಟಲ್ಲಾ. ಶ್ರೀ ಕೃಷ್ಣ ನನ್ನ ಸ್ವತ್ತಲ್ಲ. ರಾಮನೂ ನನ್ನವನಲ್ಲ. ವಿಠ್ಠಲ ಮಾತ್ರ ನನ್ನವನು? ನನ್ನ ಉತ್ತರಾಧಿಕಾರಿ ನೇಮಕದ ಬಗ್ಗೆ ಹೇಳಲು ಅವರು ಯಾರು?
ಸಮಯ: ಜುಲೈ 16 ಸಂದರ್ಭ: ವಿಗ್ರಹ ವಿವಾದಕ್ಕೆ ಸಂಬಂಧಿಸಿದಂತೆ ಖಾಸಗಿ ಸುದ್ದಿವಾಹಿನಿಯೊಂದಿಗೆ ಮಾತನಾಡುತ್ತ

ಹೇಳಿಕೆ 2: ಶಿರೂರು ಶ್ರೀ: ನಂಬಿಕೆಯಿಂದ ನೀಡಿದ್ದ ವಸ್ತುವೊಂದನ್ನು ಮರಳಿಸದೆ ತಮ್ಮಲ್ಲೇ ಇರಿಸಿಕೊಳ್ಳುವುದು ಕಳ್ಳತನ, ದರೋಡೆಗೆ ಸಮ. ನನ್ನ ದೇವರನ್ನು ನನಗೆ ಹಿಂತಿರುಗಿಸದೆ ಮಠಾಧೀಶರು ನನಗೆ ಅನ್ಯಾಯ ಎಸಗುತ್ತಿದ್ದಾರೆ. ನನ್ನ ಮಠದ ಶಿಷ್ಯ ಸ್ವೀಕಾರ ಯಾವಾಗ ನಡೆಯಬೇಕು ಎನ್ನುವುದನ್ನು ನಿರ್ಧರಿಸಲು ಅವರು (ಅಷ್ಟಮಠದ ಶ್ರೀಗಳು) ಯಾರು? ಈ ಕುರಿತಂತೆ ಮಠದಲ್ಲಿ ನಡೆಯುವ ಯಾವ ಸಭೆಗೂ ಹಾಜರಾಗುವುದಿಲ್ಲ. ನನ್ನ ನಿರ್ಧಾರ ಗಟ್ಟಿಯಾಗಿದೆ.
ಸಮಯ: ಜುಲೈ ಸಂದರ್ಭ: ಶಿರೂರು ಮಠದ ಪಟ್ಟದ ದೇವರಾದ ಅನ್ನ ವಿಠ್ಠಲನ ವಿಗ್ರಹವನ್ನು ಹಿಂತಿರುಗಿಸದೆ ಹೋದಲ್ಲಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಎಚ್ಚರಿಕೆ ನೀಡಿದ ಹೊತ್ತು.

ಹೇಳಿಕೆ 3: ಶಿರೂರು ಶ್ರೀ: ನನಗೆ ನೋಟಿಸ್ ನೀಡಲು ಅವರು ಯಾರು? ಖಾಸಗಿ ಚಾನೆಲ್ನಲ್ಲಿ ಪ್ರಸಾರವಾದ ವಿಡಿಯೋದಲ್ಲಿರುವುದು ನಾನಲ್ಲ ಎಂದು ಈ ಮೊದಲೇ ಸ್ಪಷ್ಟಪಡಿಸಿದ್ದೇನೆ. ಈ ಬಗ್ಗೆ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ. ಅವರು ನೀಡಿದ ನೋಟಿಸ್ ಕೂಡ ನನ್ನ ಕೈಸೇರಿಲ್ಲ. ಬಂದರೆ, ಅದಕ್ಕೆ ನಮ್ಮ ವಕೀಲರು ಉತ್ತರ ನೀಡುತ್ತಾರೆ.
ಸಮಯ: ಏಪ್ರಿಲ್ ಸಂದರ್ಭ: ಕೃಷ್ಣಮಠದ ಉಳಿದ ಮಠಾಧೀಶರ ವಿರುದ್ಧ ಮಾಧ್ಯಮಗಳಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ ಬೆನ್ನಿಗೇ ಸೋದೆ ಮಠದಿಂದ ಶೀರೂರು ಶ್ರೀಗಳಿಗೆ ನೋಟಿಸ್ ಜಾರಿಯಾಗಿತ್ತು. ಆಗ ನೀಡಿದ ಪ್ರತಿಕ್ರಿಯೆ.

ಹೇಳಿಕೆ 4: ಶಿರೂರು ಶ್ರೀ: ಕೃಷ್ಣಮಠದ ಸುತ್ತಲಿನ ಅಂಗಡಿ ಮುಂಗಟ್ಟಿನ ಬಾಡಿಗೆ ಹಾಗೂ ಪಾರ್ಕಿಂಗ್ ಹಣ ಕೃಷ್ಣಮಠಕ್ಕೆ ಸಲ್ಲಬೇಕು. ಆದರೆ, ಅಷ್ಟಮಠಗಳ ಟ್ರಸ್ಟಿನಲ್ಲಿದ್ದವರು ಹಣವನ್ನು ಮಠಕ್ಕೆ ನೀಡದೆ ಲೂಟಿ ಮಾಡುತ್ತಿದ್ದರು. ಟ್ರಸ್ಟ್ ಕೆಲವರಿಂದ ಅನ್ಯಾಯವಾಗಿದೆ. ಎಲ್ಲವನ್ನೂ ನೋಡಿಕೊಂಡು ಕೂರುವ ಜಾಯಮಾನ ನನ್ನದಲ್ಲ. ಕೃಷ್ಣ ಮುಖ್ಯಪ್ರಾಣನಿಗೆ ಪೂಜೆ ಮಾಡಲೂ ಗೊತ್ತು, ಅಕ್ರಮಕ್ಕೆ ಬ್ರೇಕ್ ಹಾಕಲೂ ಗೊತ್ತು.
ಸಮಯ: ಜನವರಿ ಸಂದರ್ಭ: ಮಠದ ಪಾರ್ಕಿಂಗ್ ಪ್ರದೇಶದ ಸುತ್ತ ಇದ್ದ ಹತ್ತು ಅಂಗಡಿಗಳನ್ನು ಶೀರೂರು ಶ್ರೀ ಜೆಸಿಬಿ ಮೂಲಕ ತೆರವುಗೊಳಿಸಿದಾಗ.

ಹೇಳಿಕೆ 5: ಶಿರೂರು ಶ್ರೀ: ನನಗೂ ಮಕ್ಕಳಿದ್ದಾರೆ. ಅಷ್ಟಮಠದ ಎಲ್ಲ ಸ್ವಾಮೀಜಿಗಳಿಗೂ ಮಕ್ಕಳಿದ್ದಾರೆ. ಆಗ ನಮಗೆ ಬುದ್ಧಿ, ಲೋಕಜ್ಞಾನ ಇರುವುದಿಲ್ಲ. ಪ್ರಾಯ ಬಂದ ಮೇಲೆ ಆಸೆ ಬರುವುದು ಸಹಜ. ಮನುಷ್ಯನಿಗೆ ಆಸೆಗಳು ಇರಲ್ವಾ? ಅದನ್ನು ಸಹಿಸಿಕೊಳ್ಳೋದು ಹೇಗೆ? ಮತ್ತೆ ಬೇಡ ಅನ್ಸುತ್ತೆ. ಅಷ್ಟಮಠದ ಎಲ್ಲ ಸ್ವಾಮೀಜಿಗಳಿಗೂ ಮಕ್ಕಳಿದ್ದಾರೆ. ?...ಯವರೊಂದಿಗೂ ಸಂಬಂಧ ಇಟ್ಟುಕೊಂಡಿದ್ದಾರೆ. ಅದೆಲ್ಲ ಉಡುಪಿ ಜನರಿಗೆ ಗೊತ್ತಿರುವ ವಿಷಯ. ಅದು ಬಯಲಾದರೆ ಉಡುಪಿಯ ಮಾನ, ಮರ್ಯಾದೆ ಹೋಗುತ್ತದೆ.
ಸಮಯ: ಮಾರ್ಚ್ ಸಂದರ್ಭ: ಸುದ್ದಿವಾಹಿನಿಯೊಂದರಲ್ಲಿ ಬಿತ್ತರವಾದ ರಹಸ್ಯ ವೀಡಿಯೊದಲ್ಲಿ.


ಹೇಳಿಕೆ 6: ಶಿರೂರು ಶ್ರೀ: ನಾನು ಸನ್ಯಾಸ ಧರ್ಮ ಪಾಲನೆ ಮಾಡುತ್ತಿಲ್ಲ.
ಸಮಯ: ಮಾರ್ಚ್ ಸಂದರ್ಭ: ಸುದ್ದಿವಾಹಿನಿಯೊಂದರಲ್ಲಿ ಬಿತ್ತರವಾದ ರಹಸ್ಯ ವೀಡಿಯೊದಲ್ಲಿ.

ಹೇಳಿಕೆ 7: ಶಿರೂರು ಶ್ರೀ: ಯಾವುದೇ ಕಾರಣಕ್ಕೂ ನಾಮಪತ್ರ ವಾಪಸ್ ತೆಗೆದುಕೊಳ್ಳುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಬಂದು ಹೇಳಿದರೆ ಆ ಬಗ್ಗೆ ಆಲೋಚನೆ ಮಾಡುವೆ. ಉಡುಪಿ ಅಷ್ಟಮಠಾಧೀಶರು ಬೆಂಬಲ ಕೊಡುವ ಬಗ್ಗೆ ಏನನ್ನೂ ಮಾತನಾಡುವುದಿಲ್ಲ. ಬೆಂಬಲ ಕೊಡುವುದು, ಬಿಡುವುದು ಅವರಿಗೆ ಬಿಟ್ಟ ವಿಚಾರ.
ಸಮಯ: ಏಪ್ರಿಲ್ ಸಂದರ್ಭ: ಉಡುಪಿ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದಾಗ.

(– ದಿ ಸ್ಟೇಟ್, ನ್ಯೂಸ್ ಜುಲೈ 19)

* ಈ ಹೇಳಿಕೆಗಳು ಶೀರೂರು ಸ್ವಾಮಿಗಳ ಅನುಮಾನಾಸ್ಪದ ಸಾವಿನ ಬಗ್ಗೆ ಸುಳಿವು ಕೊಡಬಹುದೇನೋ?

ಸಗಟು ಹಣದುಬ್ಬರ 5ವರ್ಷಗಳ ಹಿಂದಿನ ಶಿಖರದಲ್ಲಿ–ರೂಪಾಯಿ ಮೌಲ್ಯ ಹಿಂದೆಂದೂ ಕಾಣದ ಪಾತಾಳದಲ್ಲಿ : ದೇಶದ ಆರ್ಥಿಕ ಇನ್ನೊಂದು 'ಶೋಚನೀಯ' ಸನ್ನಿವೇಶದಲ್ಲಿ!



ವೇದರಾಜ ಎನ್.ಕೆ.

ಮನದ ಮಾತುಗಳಿಗೆ ಹೆಸರಾಗಿರುವ ನಮ್ಮ ಪ್ರಧಾನ ಮಂತ್ರಿಗಳು ಪತ್ರಿಕಾ ಸಮ್ಮೇಳನಗಳನ್ನು ಉದ್ದೇಶಿಸಿ ಮಾತಾಡುವುದಿಲ್ಲ. ಸಂದರ್ಶನಗಳನ್ನು ಕೂಡ ಆಯ್ದು–ಆಯ್ದು ಕೊಡುತ್ತಾರೆ ಎಂಬದು ಅವರ ಬಗೆಗೆ ಇರುವ ಹೆಗ್ಗಳಿಕೆ ಮತ್ತು ಕೆಲವರ ದೂರು ಕೂಡ. ಆದರೆ ಕೆಲವು ದಿನಗಳ ಹಿಂದೆ ಅವರು ಒಂದು ಸಂದರ್ಶನ ನೀಡಿದರು–ನಿಜ, ಒಂದು 'ಫ್ರೆಂಡ್ಲಿ' ಪತ್ರಿಕೆಗೆ. ಉದ್ಯೋಗ ಸೃಷ್ಟಿಸಿದ್ದೇವೆ, ಆದರೆ ಅದನ್ನು ಗುರುತಿಸುವ ಸಮರ್ಪಕ ಮಾಹಿತಿಗಳಿಲ್ಲ ಎಂಬ ಹೇಳಿಕೆಯಿಂದ ಈಗ ಪ್ರಸಿದ್ಧವಾಗಿರುವ ಸಂದರ್ಶನ ಅದು. ಅದೇ ಸಂದರ್ಶನದಲ್ಲಿ **ತಾನು ಅಧಿಕಾರ ವಹಿಸಿಕೊಂಡಾಗ ದೇಶದ ಆರ್ಥಿಕ ಸ್ಥಿತಿ ಅತ್ಯಂತ ಶೋಚನೀಯ ಸನ್ನಿವೇಶದಲ್ಲಿತ್ತು**, ಆದರೆ ಅದನ್ನು ಹೊರಗೆಡಹಲಿಲ್ಲ, ತಾನು ಈ ಬಗ್ಗೆ 'ಶ್ವೇತಪತ್ರ'ವನ್ನು ಹೊರಡಿಸಬಾರದು ಎಂದು ನಿರ್ಧರಿಸಿದೆ, ಏಕೆಂದರೆ ಅದರಿಂದ ಎಲ್ಲೆಡೆಗಳಲ್ಲಿ ಬಿಕ್ಕಟ್ಟು ಸೃಷ್ಟಿಯಾಗ ಬಹುದಾಗಿತ್ತು ಎಂದೂ ಹೇಳಿದ್ದರಂತೆ.(ರೋಹನ್ ವೆಂಕಟಕೃಷ್ಣನ್, ಸ್ಕ್ರಾಲ್.ಇನ್, ಜುಲೈ 6)

ಅವರು ಅಧಿಕಾರ ವಹಿಸಿಕೊಳ್ಳುವ ಸ್ವಲ್ಪವೇ ಮೊದಲು ಅಂದರೆ ಡಿಸೆಂಬರ್ 2013ರಲ್ಲಿ ಸಗಟು ಬೆಲೆ ಸೂಚ್ಯಂಕದ ಆಧಾರದ ಹಣದುಬ್ಬರ ದರ 5.9% ಇತ್ತು. ನಂತರ ಅದು ಇಳಿಯಲಾರಂಭಿಸಿತ್ತು. ಆದರೆ ಈಗ ಅವರ ಆಳ್ವಿಕೆ ನಾಲ್ಕು ವರ್ಷಗಳನ್ನು ಪೂರೈಸಿರುವಾಗ ಅದು ಮತ್ತೆ ಆ ಮಟ್ಟಕ್ಕೆ ಮರಳುತ್ತಿದೆ. ಸರಕಾರವೇ ಈ ವಾರ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ ಜೂನ್ ತಿಂಗಳಲ್ಲಿ ಸಗಟು ಹಣದುಬ್ಬರ 5.77% ತಲುಪಿದೆ ಎಂಬುದೀಗ ಎಲ್ಲೆಡೆಗಳಲ್ಲಿ ಸುದ್ದಿಯಾಗಿದೆ. ಡಿಸೆಂಬರ್ 2013ರ ನಂತರ ಇದು ಅತೀ ಹೆಚ್ಚು ಸಗಟು ಹಣದುಬ್ಬರ ದರ ಎನ್ನಲಾಗಿದೆ. ಕಳೆದ ಜೂನ್ ತಿಂಗಳಲ್ಲಿ ಅದು 0.9% ಇತ್ತು. ಕಳೆದ ತಿಂಗಳು, ಅಂದರೆ ಮೇ 2018ರಲ್ಲಿ 4.43%, ಎಪ್ರಿಲ್ 2018ರ ಪರಿಷ್ಕೃತ ಸಗಟು ಹಣದುಬ್ಬರ ದರ 3.62% . ಈ ಮೊದಲು 3.18% ಎಂದು ಹೇಳಲಾಗಿತ್ತು.

ತರಕಾರಿಗಳ ಬೆಲೆಗಳಲ್ಲಿ ಜೂನ್‌ತಿಂಗಳಲ್ಲಿ ಏರಿಕೆ 8.12% , ಕಳೆದ ತಿಂಗಳು ಅದು 2.51% ಇತ್ತು, ಇಂಧನ ಮತ್ತು ವಿದ್ಯುತ್‌ನಲ್ಲಿ 16.8% ಏರಿಕೆ. ಕಳೆದ ತಿಂಗಳು ಅದು 11.22% ಇತ್ತು.

ಇವೆಲ್ಲವೂ ಸಮರ್ಪಕ ಮಾಹಿತಿಗಳೇ ಇರಬಹುದು. ಏಕೆಂದರೆ ಪ್ರಧಾನಿಗಳಾಗಲೀ, ಅವರ ಭಕ್ತಗಣವಾಗಲೀ ಅದನ್ನು ಪ್ರಶ್ನಿಸಿಲ್ಲ.

ಚಿಲ್ಲರೆ ಹಣದುಬ್ಬರ ದರವೂ 5% ತಲುಪಿದೆ. ಇದು ಕಳೆದ 5 ತಿಂಗಳಲ್ಲಿ ಅತಿ ಹೆಚ್ಚು ಎಂದು ಹೇಳಲಾಗಿದೆ.

ಭಾರತದ ವ್ಯಾಪಾರ ಕೊರತೆ, ಅಂದರೆ ಆಮದುಗಳು ಮತ್ತು ರಫ್ತುಗಳ ನಡುವಿನ ಅಂತರ ಕೂಡ ಐದು ವರ್ಷಗಳ ಹಿಂದಿನ ಮಟ್ಟಕ್ಕೆ ಏರಿದೆ ಎಂಬುದನ್ನೂ ಈ ಮೊದಲು ನೋಡಿದ್ದೇವೆ. ಜೂನ್ ತಿಂಗಳಲ್ಲಿ ವ್ಯಾಪಾರ ಕೊರತೆ 16.6 ಬಿಲಿಯನ್ ಡಾಲರುಗಳಿಗೇರಿದೆ.

ಜತೆಗೆ ವಿದೇಶಿ ಹೂಡಿಕೆಗಳು ಬರುವುದು ಕಡಿಮೆಯಾಗುತ್ತಿದೆ, ಹೊರಹೋಗುವುದು ಹೆಚ್ಚಾಗುತ್ತಿದೆ, ಪ್ರಧಾನ ಉದ್ದಿಮೆ ವಲಯಗಳಲ್ಲಿ ಬೆಳವಣಿಗೆ ದರ ಇಳಿಯುತ್ತಿದೆ ಎಂಬುದನ್ನೂ ನೋಡಿದ್ದೇವೆ.

ರೂಪಾಯಿ ಮೌಲ್ಯ ಜುಲೈ 20ರಂದು ಹಿಂದೆಂದೂ ಕಾಣದ ಆಳಕ್ಕೆ ಕುಸಿದಿದೆ ಎಂಬ ಸುದ್ದಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದಿದೆ.

ಅಂದರೆ 'ಅಚ್ಛೇ ದಿನ್' ಆಶ್ವಾಸನೆಯೊಂದಿಗೆ ಬಂದ ಈ ಸರಕಾರವೂ ಜನಾದೇಶದ ಅವಧಿಯನ್ನು ಮುಗಿಸುವ ವೇಳೆಗೆ ಹಿಂದಿನ ಸರಕಾರದಂತೆ, ಹಾಗೂ ಈಗಿನ ಪ್ರಧಾನಿಗಳು ತಮ್ಮ ಸಂದರ್ಶನದಲ್ಲಿ ಈಗ ಹೇಳಿರುವಂತೆ ಇನ್ನೊಂದು 'ಶೋಚನೀಯ' ಆರ್ಥಿಕ ಸ್ಥಿತಿಯನ್ನು ನಿರ್ಮಿಸಲು ಸಜ್ಜಾಗಿದೆಯೇ?

ಚುನಾವಣಾ ಬಾಂಡ್ 'ವಂತಿಗೆ' ತಿಳಿಸದಿರುವುದು ಪಾರದರ್ಶಕತೆ ಹೆಚ್ಚಿಸುತ್ತದೆಯೇ?

ಹೆಚ್ಚಿಸುತ್ತದೆ ಎಂಬುದು ಅಚ್ಛೇ ದಿನ್ ಸರಕಾರದ ಹಣಕಾಸು ಮಂತ್ರಾಲಯದ ವಾದ. ಆದರೆ ಅದೇ ಇಲಾಖೆಯ ಒಂದು ವಿಭಾಗ 'ಇಲ್ಲ' ಎಂದಿತ್ತು ಎಂದು ಈಗ ಬೆಳಕಿಗೆ ಬಂದಿದೆ.

2017ರ ಬಜೆಟ್ ಅಧಿವೇಶನದಲ್ಲಿ ಹಣಕಾಸು ಕಾಯ್ದೆ ,2107ರ ಮೂಲಕ ತಂದ ಚುನಾವಣಾ ಬಾಂಡ್‌ಗಳನ್ನು ಜನಪ್ರಾತಿನಿಧ್ಯ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ಅದರ ಪಾರದರ್ಶಕತೆಯನ್ನು ಹೆಚ್ಚಿಸಲು ಎಂದು ಹಣಕಾಸು ಮಂತ್ರಿಗಳು ಸಮರ್ಥಿಸಿಕೊಂಡಿದ್ದರು. ರಾಜಕೀಯ ಪಕ್ಷಗಳಿಗೆ 20,000ರೂ.ಗಳಿಗಿಂತ ಹೆಚ್ಚಿನ ದೇಣಿಗೆಗಳನ್ನು ತಿಳಿಸುವುದು ಕಡ್ಡಾಯ ಎಂಬ ವಿಧಿಯಿಂದ ಈ ರೀತಿ ಚುನಾವಣಾ ಬಾಂಡನ್ನು ಹೊರಗಿಟ್ಟಿರುವುದನ್ನು ಚುನಾವಣಾ ಆಯೋಗ ಪಾರದರ್ಶಕತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇದೊಂದು ಪ್ರತಿಗಾಮಿ ಕ್ರಮ ಎಂದು ಹಣಕಾಸು ಮಂತ್ರಾಲಯಕ್ಕೆ ಪತ್ರ ಬರೆದಿತ್ತು.

ಕಾನೂನು ಮಂತ್ರಾಲಯವೂ ಇದೇ ಅಭಿಪ್ರಾಯ ವ್ಯಕ್ತಪಡಿಸಿ ಪತ್ರ ಬರೆದಿತ್ತು ಎಂದು ಇತ್ತೀಚೆಗೆ ಬೆಳಕಿಗೆ ಬಂದಿತ್ತು.

ಈಗ ಸ್ವತಃ ಹಣಕಾಸು ಮಂತ್ರಾಲಯದ 'ಹಣಕಾಸು ವಲಯ ಸುಧಾರಣೆಗಳು ಮತ್ತು ಶಾಸನಗಳ(ಎಫ್‌ಎಸ್‌ಆರ್‌ಎಲ್) ವಿಭಾಗ ಕೂಡ ಇದೊಂದು ಪ್ರತಿಗಾಮಿ ಕ್ರಮ ಎಂಬ ಚುನಾವಣಾ ಆಯೋಗದ ಅಭಿಪ್ರಾಯವನ್ನು ಅಭಿಪ್ರಾಯವನ್ನು ಬೆಂಬಲಿಸಿತ್ತು ಎಂದು ಆರ್‌ಟಿಐ ಕಾರ್ಯಕರ್ತ ಕೊಮೊಡೊರ್ ಲೋಕೇಶ್ ಬತ್ರ ಅವರು ಆರ್‌ಟಿಐನಿಂದ ಪಡೆದ ಮಾಹಿತಿ ಹೇಳುತ್ತದೆ.

ಚುನಾವಣಾ ಆಯೋಗ ಆಮೇಲೆ ತನ್ನ ಆತಂಕವನ್ನು ಮನರುಚ್ಚರಿಸಿರುವ ಸುದ್ದಿ ಇಲ್ಲ. ಬಹುಶಃ ಕಾನೂನು ಮಂತ್ರಾಲಯ ಮತ್ತು ಈ ಎಫ್‌ಎಸ್‌ಆರ್‌ಎಲ್ ವಿಭಾಗದ್ದೂ ಅದೇ ಸ್ಥಿತಿ!

ಇದು 2019ರತ್ತ ಸಾಗಿರುವ 'ನವಭಾರತ'ದ ನವ ನೈತಿಕತೆ ಇರಬಹುದೇನೋ ಎಂದು ಅವು ತೆಪ್ಪಗಾಗಿರಬಹುದು.

'ಉದ್ಘಾಟನೆಗಳ ಪರ್ವ'ಕ್ಕೆ ಸರ್ವಸಿದ್ಧತೆ

ಪ್ರಧಾನ ಮಂತ್ರಿಗಳ ಕಚೇರಿ ಎಲ್ಲ ಕೇಂದ್ರ ಮಂತ್ರಾಲಯಗಳಿಂದ ಡಿಸೆಂಬರ್ 2018ರ ವರೆಗೆ ಉದ್ಘಾಟನೆಗೆ ಸಿದ್ಧವಾಗಬಹುದಾದ ಪ್ರಾಜೆಕ್ಟ್‌ಗಳ ರಾಜ್ಯವಾರು ವಿವರಗಳನ್ನು ಕೇಳಿದೆ ಎಂಬುದು ಈ ವಾರದ ಒಂದು ಪ್ರಮುಖ ಸುದ್ದಿ.

ಈ ಪ್ರಾಜೆಕ್ಟ್‌ಗಳಿಗೆ ಕೇಂದ್ರ ಸರಕಾರ ಎಷ್ಟು ಹಣ ಕೊಟ್ಟಿದೆ, ಸಂಬಂಧಪಟ್ಟ ರಾಜ್ಯ ಸರಕಾರ ಎಷ್ಟು ಕೊಟ್ಟಿದೆ, ಪರಿಸರ, ಅರಣ್ಯ ಇತ್ಯಾದಿ ಮಂಜೂರಾತಿಗಳ ಸ್ಥಿತಿ–ಗತಿಗಳೇನು, ಎಲ್ಲವೂ ಸಿಕ್ಕಿವೆಯೇ, ಯಾವಾಗ 'ಅಡಿಗಲ್ಲು' ಹಾಕಬಹುದು, ಯಾವಾಗ 'ದೇಶಕ್ಕೆ ಸಮರ್ಪಿಸ'ಬಹುದು ಇತ್ಯಾದಿ ವಿವರಗಳನ್ನು ಕೇಳಲಾಗಿದೆಯಂತೆ. ಈ ಪ್ರಾಜೆಕ್ಟ್‌ಗಳಲ್ಲಿ ಹೆದ್ದಾರಿಗಳು, ರೈಲ್ವೆ, ಸಾಗಾಣಿಕೆ, ನಾಗರಿಕ ವಿಮಾನಯಾನ ಮುಂತಾದವುಗಳಿಗೆ ಅತ್ಯುನ್ನತ ಆದ್ಯತೆ ಕೊಡಲಾಗಿದೆ ಎಂದೂ ವರದಿಯಾಗಿದೆ. ಬಹುಶಃ ಈ ವಿವರಗಳು ಸಿಕ್ಕ ಮೇಲೆ ಎಲ್ಲೆಲ್ಲಿ ಎಷ್ಟು ಅಸತ್ಯಗಳನ್ನು ಸೃಷ್ಟಿಸಬಹುದು ಎಂಬುದನ್ನು ಪರಿಶೀಲಿಸಬಹುದು.

ಕೆಲವು ವಾರಗಳ ಹಿಂದೆ ಉತ್ತರಪ್ರದೇಶದಲ್ಲಿ ಕೈರಾನದ ಮಹತ್ವದ ಲೋಕಸಭಾ ಉಪಚುನಾವಣೆಯ ಮತದಾನದ ಹಿಂದಿನ ದಿನವೇ ಪಕ್ಕದಲ್ಲಿಯೇ,ಆದರೆ ಆ ಚುನಾವಣಾ ಕ್ಷೇತ್ರದ ಹೊರಗೆ ಕೇವಲ 10% ಕಾಮಗಾರಿಯಾಗಿರುವ ದಿಲ್ಲಿ–ಮೇರಠ್ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ದೇಶಕ್ಕೆ 'ಸಮರ್ಪಿಸಿ'ದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇದಕ್ಕೆ ಮೊದಲು ಗುಜರಾತ್ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಒಂದೇ ದಿನದಲ್ಲಿ 1600 ಕೋಟಿ ರೂ. ಮೊತ್ತದ ಹಲವು ಪ್ರಾಜೆಕ್ಟ್‌ಗಳನ್ನು ಉದ್ಘಾಟಿಸಿದ ವಿಕ್ರಮ ಈ ಪ್ರಧಾನಿಗಳದ್ದು.

ಆದರೆ ಇವು ಮತಗಳನ್ನು ನಿಜವಾಗಿ ಗಳಿಸಿ ಕೊಡುತ್ತವೆಯೇ? ಕೈರಾನವನ್ನು ಗೆಲಿಸಿ ಕೊಡಲಿಲ್ಲ, ಗುಜರಾತನ್ನು ಕಷ್ಟಪಟ್ಟು ಉಳಿಸಿಕೊಡುವಲ್ಲಿ ಈ ಉದ್ಘಾಟನೆಗಳ ಪಾತ್ರ ಏನು ಎಂದು ಬಿಜೆಪಿಯ ಐಟಿ ಸೆಲ್‌ಗೆ ವಿಶ್ಲೇಷಿಸಲು ಸಾಧ್ಯವಾಗಿದೆಯೆ ಗೊತ್ತಿಲ್ಲ.

ಮತಗಳನ್ನು ಗಳಿಸುತ್ತದೋ ಬಿಡುತ್ತದೋ, 2019ರ ಚುನಾವಣೆಗಳು 2014 ರ ಚುನಾವಣೆಗಳಂತಲ್ಲ. ತೋರಿಸಲು ಅಥವ ಮರೆಮಾಚಲು ಏನಾದರೂ ಬೇಕೇ ಬೇಕು ತಾನೇ?

'ದೇಶಕ್ಕೆ ಸಮರ್ಪಣೆ'ಯನ್ನು ಚುನಾವಣಾ ರಾಜಕೀಯದ ಭಾಗವಾಗಿಸುವಲ್ಲಿ ಈಗ ಯಾರಿಗೂ ಯಾವುದೇ ನಾಚಿಕೆ ಅನಿಸದಿರುವುದು ಬಹುಶಃ ಅಚ್ಛೇದಿನ್‌ಗಳ ಒಂದು ದೊಡ್ಡ 'ಸಾಧನೆ'!



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಕಾರ್ಟೂನಿಸ್ತಾನ್

ಚಲೋ 2019–ಸುಪ್ರಿಂ ಕೋರ್ಟಿನ ಕಳಕಳಿಗೆ ಮೌನ ಮತ್ತು ಸ್ವಾಮಿ ಅಗ್ನಿವೇಶ್ ಮೇಲೆ ಹಲ್ಲೆ

ಹೊಡೆದು ಸಾಯಿಸುವುದು ಕಾನೂನಿನ ಆಳ್ವಿಕೆಗೆ ಮತ್ತು ಸಂವಿಧಾನದ ಉನ್ನತ ಮೌಲ್ಯಗಳಿಗೇ ಮಾಡುವ ಅವಮಾನ. ಪ್ರಚೋದನೆಯಿಂದ ದೊಂಬಿ ಮಾಡಿ ಹೊಡೆದು ಸಾಯಿಸುವುದು ಸಾಮಾನ್ಯ ಸಂಗತಿಯಾಗಲು ಬಿಡಲು ಸಾಧ್ಯವಿಲ್ಲ. ಇಂತಹ ಕಾವಲುಕೋರತನ, ಅದು ಯಾವ ಕಾರಣದಿಂದಲೇ, ಅಥವ ಯಾವ ಉದ್ದೇಶದಿಂದಲೇ ಆಗಿರಲಿ, ಅದು ಕಾನೂನಿನ ಮತ್ತು ಪ್ರಭುತ್ವದ ಔಪಚಾರಿಕ ಸಂಸ್ಥೆಗಳನ್ನು ಶಿಥಿಲಗೊಳಿಸುತ್ತದೆ. ಕಾವಲು ಕೋರತನವನ್ನು, ಅದು ಗೋವಿನದ್ದೇ ಆಗಿರಲಿ, ಅಥವ ಬೇರಾವುದೇ ಆಗಿರಲಿ ಅದು ನಡೆಯದಂತೆ ಮಾಡುವುದು ಪ್ರಭುತ್ವದ ಪ್ರಧಾನ ಕರ್ತವ್ಯ– ಇದು ಜುಲೈ 17ರಂದು ದೇಶದ ಸರ್ವೋಚ್ಚ ನ್ಯಾಯಾಲಯ ದೇಶದಲ್ಲಿ ಹೆಚ್ಚುತ್ತಿರುವ ದೊಂಬಿ ಹತ್ಯೆಗಳ ಬಗ್ಗೆ ಆಘಾತ ವ್ಯಕ್ತಪಡಿಸುತ್ತ ತೀವ್ರ ಕಳಕಳಿಯಿಂದ ಹೇಳಿರುವ ಮಾತುಗಳು. ಬಹುತ್ವ ಮತ್ತು ಸಹಿಷ್ಣುತೆ ಒಂದು ನಿಜವಾಗಿಯೂ ಮುಕ್ತವಾದ, ಪ್ರಜಾಸತ್ತಾತ್ಮಕ ಸಮಾಜವನ್ನು ಕಟ್ಟುವ ಮೂಲ ಅಂಶಗಳು ಎಂದು ಹೇಳಿರುವ ದೇಶದ ಮುಖ್ಯ ನ್ಯಾಯಾಧೀಶರು ಸೇರಿದಂತೆ ಮೂವರು ನ್ಯಾಯಾಧೀಶರಿರುವ ನ್ಯಾಯಪೀಠ, ಸಂಸತ್ತು ಹೊಡೆದು ಸಾಯಿಸುವುದನ್ನು ಒಂದು ಪ್ರತ್ಯೇಕ ಅಪರಾಧ ಎಂದು ಪರಿಗಣಿಸಿ ಅದಕ್ಕೆ ಸಾಕಷ್ಟು ಶಿಕ್ಷೆಯಾಗುವಂತೆ ಮಾಡಬೇಕು, ಅಂದರೆ ಒಂದು ವಿಶೇಷ ಕಾನೂನನ್ನು ರೂಪಿಸಬೇಕು ಎಂದು ಶಿಫಾರಸು ಮಾಡಿದೆ. ಸದ್ಯಕ್ಕೆ ಈ ಅಪರಾಧವನ್ನು ತಡೆಯಲು ಸರಕಾರಗಳಿಗೆ ಮತ್ತು ಪೊಲೀಸಿಗೆ ಕೆಲವು ನಿರ್ದೇಶನಗಳನ್ನು ನೀಡಿ, ಆಗಸ್ಟ್ 20ರಂದು ಇನ್ನಷ್ಟು ನಿರ್ದೇಶನಗಳನ್ನು ನೀಡುವುದಾಗಿ ಹೇಳಿದೆ.




ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಈ ರೀತಿ ದೇಶದ ಸರ್ವೋಚ್ಚ ನ್ಯಾಯಾಲಯ ನಿರ್ದೇಶನಗಳನ್ನು ನೀಡುತ್ತಿದ್ದಾಗಲೇ, ಝಾರ್ಖಂಡ್‌ನ ಒಂದು ಪಟ್ಟಣದಲ್ಲಿ ಬುಡಕಟ್ಟು ಜನಗಳ ಸಭೆಯಲ್ಲಿ ಭಾಗವಹಿಸಲು ಹೋಗಿದ್ದ ಪ್ರಖ್ಯಾತ ಹಿರಿಯ ಸಾಮಾಜಿಕ ಕಾರ್ಯಕರ್ತ ಸ್ವಾಮಿ ಅಗ್ನಿವೇಶ್ ಮೇಲೆ ಅಮಾನುಷ ಹಲ್ಲೆ ನಡೆದಿದೆ. ಪ್ರಭುತ್ವದ ಯಾವ ಅಂಗವೂ ಅವರ ರಕ್ಷಣೆಗೆ ಬರಲಿಲ್ಲ, ಪ್ರಜಾಪ್ರಭುತ್ವವಾದಿ ಶಕ್ತಿಗಳೇ ಅವರ ನೆರವಿಗೆ ಧಾವಿಸಬೇಕಾಗಿ ಬಂದಿದೆ.

ಅದನ್ನು ನಡೆಸಿದವರು ತಾವಲ್ಲ ಎಂದು ಸಂಘ ಪರಿವಾರದವರು ನಿರಾಕರಿಸಿದರೂ ಪ್ರಧಾನ ಮಂತ್ರಿಗಳ ದಿವ್ಯಮೌನ, ಕಾನೂನು ವ್ಯವಸ್ಥೆ ರಾಜ್ಯಗಳಿಗೆ ಸೇರಿದ್ದು ಎಂಬ ಗೃಹಮಂತ್ರಿಗಳ ಚರ್ವಿತಚರ್ವಣ, ಜತೆಗೆ ವಿವಿಧ ಕೇಸರಿ ಪಡೆಗಳ ಅವರ ಶಾಸಕರುಗಳ ನೇರ ಹೇಳಿಕೆಗಳು ಎಲ್ಲವನ್ನೂ ಬಿಚ್ಚಿಟ್ಟಿವೆ. ಸಂಸತ್ತಿನಲ್ಲಿ ಬಿಜೆಪಿಯ ಮುಖಂಡರೊಬ್ಬರು ಸ್ವಾಮಿ ಅಗ್ನಿವೇಶ್ ತಮ್ಮ ಮೇಲೆ ತಾವೇ ಹಲ್ಲೆ ಮಾಡಿಸಿಕೊಂಡಿದ್ದಾರೆ ಎಂದು ತಮ್ಮ ಮುಖಂಡರುಗಳ ಮೌನಕ್ಕೆ ಹಾಸ್ಯಾಸ್ಪದ ಸಮರ್ಥನೆ ನೀಡುವ ಮಟ್ಟಕ್ಕೂ ಇಳಿದಿದ್ದಾರೆ.

ಕಾವಲುಕೋರತನ ಪ್ರಜಾಪ್ರಭುತ್ವಕ್ಕೆ ಮತ್ತು ಸಂವಿಧಾನದ ಮೌಲ್ಯಗಳಿಗೆ ಮಾಡಿರುವ ಅವಮಾನ ಎಂಬುದು ಬಹುಶಃ ಈ ಪಡೆಗಳಿಗೆ ಅರ್ಥವಿಲ್ಲದ ಮಾತುಗಳು. ಸುಪ್ರಿಂ ಕೋರ್ಟ್ ಹೇಳಿರುವ ಬಹುತ್ವ ಮತ್ತು ಸಹಿಷ್ಣುತೆಯಂತೂ ಇವರಿಗೆ ನಿಷಿದ್ಧ ಪದಗಳು ಎಂಬುದನ್ನೇ ಈ ಮೌನಗಳು, ಸಮರ್ಥನೆಗಳು ಸಾಬೀತು ಪಡಿಸುತ್ತಿವೆ. ಒಬ್ಬ ವೀಕ್ಷಕರು ಹೇಳಿರುವಂತೆ, ಇವು ಆಕಸ್ಮಿಕ ಹಲ್ಲೆಗಳಲ್ಲ, ಜನಗಳನ್ನು ವಿಚಾರಹೀನ ಜನಜಂಗುಳಿಗಳಾಗಿ ಪರಿವರ್ತಿಸಿ ಅವರಿಂದ ವಿಚಾರಹೀನ ಕೃತ್ಯಗಳನ್ನು ಮಾಡಿಸುವುದೇ ರಾಜಕೀಯ ಯೋಜನೆಯಾಗಿರುವಾಗ, ಆ ಯೋಜನೆಯಿಂದಲೇ 2019ರತ್ತ ಸಾಗಿರುವಾಗ ಸುಪ್ರಿಂ ಕೋರ್ಟಿನ ಶಿಫಾರಸುಗಳಿಗೆ ಎಷ್ಟು ಬೆಲೆ ಸಿಗುತ್ತದೆ ಎಂದು ಕಾದು ನೋಡುವ ಅಗತ್ಯವೂ ಬಹುಶಃ ಇಲ್ಲ. ಪ್ರತ್ಯೇಕ ಕಾನೂನೇನೂ ಬೇಕಿಲ್ಲ ಎಂದು ಬಿಜೆಪಿ ಮೂಲಗಳು ಆಗಲೇ ಹೇಳಿರುವುದಾಗಿ ವರದಿಯಾಗಿದೆ.

ಕನಿಷ್ಟ ಬೆಂಬಲ ಬೆಲೆ ಪ್ರಕಟಣೆ ಸರಕಾರದ ಸಿನಿಕತನದ ತಂತ್ರ



ಬೆಂಬಲ ಬೆಲೆಗಳ ಹೆಚ್ಚಳವು "ಚಾರಿತ್ರಿಕ" ವಾಗಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿರುವುದರ ಹಿಂದಿರುವ ಮರ್ಮವೆಂದರೆ, ಕಳೆದ ನಾಲ್ಕು ವರ್ಷಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಳನ್ನು ತೀರಾ ಕೆಳ ಮಟ್ಟದಲ್ಲಿಡಲಾಗಿತ್ತು ಎಂಬುದಾಗಿ ಕೆಲವರು ಗುರುತಿಸಿದ್ದಾರೆ. ಈ ಎಲ್ಲ ಅಂಶಗಳ ಜೊತೆಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಈಗ ಘೋಷಿಸಿರುವ ಬೆಂಬಲ ಬೆಲೆಗಳನ್ನು ಮೋದಿ ಸರ್ಕಾರವು ಅಧಿಕಾರಕ್ಕೆ ಬರುವ ಮೊದಲಿದ್ದ ಬೆಲೆಗಳಿಗೆ ಹೋಲಿಸಿದರೆ, ಹಣದ ಮೌಲ್ಯದ ದೃಷ್ಟಿಯಲ್ಲಿ, ಹೆಚ್ಚಳ ಇಲ್ಲವೇ ಇಲ್ಲ. ಇದೊಂದು ಸಿನಿಕತನದ ತಂತ್ರವಷ್ಟೇ. **ಪ್ರೊ. ಪ್ರಭಾತ್ ಪಟ್ನಾಯಕ್**

ಅನುವಾದ: ಕೆ.ಎಂ.ನಾಗರಾಜ್

ಮುಂಗಾರು ಬೆಳೆಗಳಿಗೆ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಳು "ಚಾರಿತ್ರಿಕ"ವಾಗಿವೆ ಎಂಬ ಮೋಸದ ಹೇಳಿಕೆಯನ್ನು ಬಯಲುಮಾಡಿರುವ ಬಗ್ಗೆ ಅನೇಕ ಲೇಖನಗಳು ಬಂದಿವೆ. ಈ ಬೆಂಬಲ ಬೆಲೆಗಳು ಸ್ವಾಮಿನಾಥನ್ ಆಯೋಗದ ಶಿಫಾರಸು ಬೆಲೆಗಳಿಗಿಂತ ಕೆಳಮಟ್ಟದಲ್ಲಿವೆ ಎಂಬ ಅಂಶವನ್ನು ಈ ಲೇಖನಗಳು ಎತ್ತಿತೋರಿಸಿವೆ. ಕನಿಷ್ಠ ಬೆಂಬಲ ಬೆಲೆಗಳನ್ನು ನಿರ್ಧರಿಸಲು ಸ್ವಾಮಿನಾಥನ್ ಆಯೋಗವು ಸಿ 2+50% ಸೂತ್ರವನ್ನು ಶಿಫಾರಸು ಮಾಡಿತ್ತು. ಸಿ2, ಅಂದರೆ, ಬೆಳೆ ಉತ್ಪಾದನೆಗೆ ತಗಲುವ ಎಲ್ಲ ರೀತಿಯ ಖರ್ಚುಗಳು –ಸ್ವಂತ ಜಮೀನಿನ ಬಾಡಿಗೆ/ಗೇಣಿ, ಬೀಜ, ಗೊಬ್ಬರ, ಕೂಲಿ, ಇಂಧನ, ನೀರು, ಉಪಕರಣಗಳು, ಕುಟುಂಬದ ಶ್ರಮ ಮುಂತಾದ ಖರ್ಚುಗಳು; ಮತ್ತು ಈ ಖರ್ಚಿಗೆ ಅದರ ಶೇ.50ರಷ್ಟನ್ನು ಸೇರಿಸಿದಾಗ ಬರುವ ಮೊತ್ತವೇ ಕನಿಷ್ಠ ಬೆಂಬಲ ಬೆಲೆ ಎಂದು ಅರ್ಥ. ಸ್ವಾಮಿನಾಥನ್ ಆಯೋಗದ ಶಿಫಾರಸು(ಸಿ2+50%) ಜಾರಿಮಾಡುವುದಾಗಿ ನರೇಂದ್ರ ಮೋದಿಯವರು 2014ರ ಚುನಾವಣೆಯಲ್ಲಿ ಭರವಸೆ ಕೊಟ್ಟಿದ್ದರು. ಆ ಭರವಸೆಯನ್ನು ಈಗ ಈಡೇರಿಸಿರುವುದಾಗಿ ಮೋದಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಗುಲಾಮಗಿರಿಗೆ ಒಳಗಾಗಿರುವ ಮಾಧ್ಯಮಗಳು ಅದರ ಬಗ್ಗೆ ತುತ್ತೂರಿ ಊದುತ್ತಿವೆ. ಆದರೆ, ಈ ಬೆಂಬಲ ಬೆಲೆಗಳು ಎ2+ಎಫ್‌ಎಲ್ ಸೂತ್ರವನ್ನು ಆಧರಿಸಿವೆ. (ಎ2 = ಬೀಜ, ಗೊಬ್ಬರ, ಕೂಲಿ ಮುಂತಾದ ಖರ್ಚುಗಳು – ಇದರಲ್ಲಿ ಸ್ವಂತ ಜಮೀನಿನ ಬಾಡಿಗೆ/ಗೇಣಿ ಸೇರಿಲ್ಲ. ಎಫ್‌ಎಲ್= ಕುಟುಂಬದ ಶ್ರಮ). ಇದು ಬಿಜೆಪಿ ವಚನಕೊಟ್ಟಿದ್ದ ಸ್ವಾಮಿನಾಥನ್‌ರ ಸಿ2 ಸೂತ್ರದ ಪ್ರಕಾರವಾಗಿಲ್ಲ ಮತ್ತು ಅದಕ್ಕಿಂತ ತೀರಾ ಕೆಳಗಿವೆ ಎಂಬ ಅಂಶವನ್ನು ಮಾಧ್ಯಮಗಳು ಮರೆಮಾಚುತ್ತಿವೆ.

ಇಲ್ಲಿರುವ ಪ್ರಶ್ನೆ ಕೇವಲ ತಾಂತ್ರಿಕವಾದುದಲ್ಲ. ಬೆಂಬಲ ಬೆಲೆಗಳನ್ನು ನಿರ್ಧರಿಸುವ ಅನೇಕ ಪರಿಕಲ್ಪನೆಗಳಿವೆ; ಸರ್ಕಾರವು ಅವುಗಳಲ್ಲಿ ಒಂದರ ಬದಲಾಗಿ ಇನ್ನೊಂದನ್ನು ಆರಿಸಿಕೊಂಡಿದೆ ಎಂಬುದು ಪ್ರಶ್ನೆಯಲ್ಲ. ಅಥವಾ, ಅದು ಮೇಲಾಗಿರುವ ಸೂತ್ರದ ಬದಲು ಕೀಳಾಗಿರುವುದನ್ನು ಆಯ್ಕೆ ಮಾಡಿಕೊಂಡಿದೆ ಎಂಬುದೂ ಅಲ್ಲ. ಅದು ಆಯ್ಕೆ ಮಾಡಿಕೊಂಡಿರುವ ಎ2+ ಎಫ್‌ಎಲ್ ಸೂತ್ರದಲ್ಲಿ ಯಾವ ವಿವೇಚನೆಯೂ ಇಲ್ಲ. ಈ ಕಾರಣದಿಂದಾಗಿಯೇ ಸ್ವಾಮಿನಾಥನ್ ಆಯೋಗವು ಸಿ2 ಸೂತ್ರವು ಉತ್ತಮವಾದುದೆಂದು ಹೇಳಿತ್ತು.

ಅದಕ್ಕೆ ಕಾರಣ ಹೀಗಿದೆ: ಸಮಾನವಾದ ಎರಡು ಹೊಲಗಳಿವೆ. ಒಂದರಲ್ಲಿ, ಗೇಣಿ/ಗುತ್ತಿಗೆಗೆ ಪಡೆದು ಉಳುಮೆಮಾಡಲಾಗಿದೆ. ಇನ್ನೊಂದು ಉಳುಮೆ ಮಾಡುವ ಕುಟುಂಬದ ಒಡೆತನದ್ದು. ಈ ಎರಡರಲ್ಲಿಯೂ ಒಂದೇ ರೀತಿಯಲ್ಲಿ ಕೃಷಿ ಮಾಡಲಾಗಿದೆ. ಬೆಳೆದಿರುವ ಪೈರು ಒಂದೇ ರೀತಿಯದ್ದು ಮತ್ತು ಬಂದಿರುವ ಫಸಲು ಕೂಡ ಸಮಾನವಾಗಿದೆ. ಫಸಲು ಉತ್ಪಾದಿಸಲು ತಗುಲಿದ ಖರ್ಚನ್ನು ಲೆಕ್ಕ ಹಾಕುವಾಗ, ಮೊದಲನೆಯ ಹೊಲದವನು ಗೇಣಿ/ಗುತ್ತಿಗೆ ಕೊಡುವುದರಿಂದ ಅದನ್ನು ಉತ್ಪಾದನೆಯ ಖರ್ಚಿಗೆ ಸೇರಿಸಲೇಬೇಕಾಗುತ್ತದೆ. ಅದೇ ಕಾರಣದ ಮೇಲೆ, ಎರಡನೆಯ ಹೊಲದ ಉತ್ಪಾದನೆಯ ಖರ್ಚಿನಲ್ಲಿ ಗೇಣಿ/ಗುತ್ತಿಗೆ ಖರ್ಚನ್ನು ಸೇರಿಸಬೇಕಾಗುತ್ತದೆ. ಆಗ ಮಾತ್ರ, ಎರಡು ಹೊಲದ ಖರ್ಚುಗಳು ಸಮವಾಗುತ್ತವೆ. ಆ ಕ್ರಮವನ್ನು ಅನುಸರಿಸದೆ, ಕೇವಲ ರೈತರು ಮಾಡಿದ ಖರ್ಚು, ಕುಟುಂಬದ ಶ್ರಮ ಮತ್ತು ಎರಡು ಹೊಲಗಳ ಸರಾಸರಿ ಖರ್ಚುಗಳನ್ನು ಮಾತ್ರ ಪರಿಗಣಿಸಿದಾಗ, ಮೊದಲನೆಯ ಹೊಲದ ರೈತನಿಗೆ ನಷ್ಟವಾಗುತ್ತದೆ. ಆದ್ದರಿಂದ, ಗೇಣಿ/ಗುತ್ತಿಗೆ ಪದ್ಧತಿ ಇರುವ ಅರ್ಥವ್ಯವಸ್ಥೆಗಳಲ್ಲಿ ಸಿ2 ಸೂತ್ರವು ಅರ್ಥಪೂರ್ಣವಾಗುತ್ತದೆ. ಅಂದರೆ, ಸ್ವಂತ ಜಮೀನಿನಲ್ಲಿ ಉಳುಮೆಮಾಡಿದಾಗಲೂ, ಉತ್ಪಾದನೆಯ ಖರ್ಚಿನಲ್ಲಿ ಗೇಣಿ/ಗುತ್ತಿಗೆ ಖರ್ಚನ್ನು ಸೇರಿಸಬೇಕಾಗುತ್ತದೆ.

ಆದರೆ, ಸಿ 2 ಸೂತ್ರವನ್ನು ಪರಿಗಣಿಸದ ಮೋದಿ ಸರ್ಕಾರದ ಬೆಂಬಲ ಬೆಲೆ ನಿರ್ಧಾರವು ಮೂಲಭೂತವಾಗಿ ತಪ್ಪಾಗಿದೆ. ಏಕೆಂದರೆ, ಎ2+ ಎಫ್‌ಎಲ್ ಸೂತ್ರದಲ್ಲಿ ಯಾವ ವಿವೇಚನೆಯೂ ಇಲ್ಲ: ಅದು ಬಡ ರೈತರಿಗೆ ಮತ್ತು ಗೇಣಿ/ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುವ ಭೂಹೀನ ರೈತರಿಗೆ ಅನ್ಯಾಯ ಮಾಡುತ್ತದೆ.



ಚಿತ್ರ ಕೃಪೆ: ನ್ಯೂಸ್‌ಕ್ಲಿಕ್

ರೈತರು ಬೆಳೆದ ದವಸ ಧಾನ್ಯಗಳನ್ನು ಕಾರ್ಯತಃ ಖರೀದಿಸುವ ಮತ್ತು ಸಂಗ್ರಹಿಸುವ ಸರಿಯಾದ ವ್ಯವಸ್ಥೆ ಇಲ್ಲದ ಪರಿಸ್ಥಿತಿಯಲ್ಲಿ ಕೇವಲ ಬೆಂಬಲ ಬೆಲೆ ಘೋಷಣೆಮಾಡುವುದರಿಂದ ರೈತರಿಗೆ ಏನೂ ಪ್ರಯೋಜನವಿಲ್ಲ ಎಂಬ ಅಂಶವನ್ನೂ ಸಹ ಒತ್ತಿ ಹೇಳಲಾಗಿದೆ. ಬಹುಪಾಲು ರೈತರಿಗೆ, ಅದರಲ್ಲೂ ಮುಖ್ಯವಾಗಿ ಬಡ ರೈತರಿಗೆ ತಾವು ಬೆಳೆದ ದವಸ ಧಾನ್ಯಗಳನ್ನು ತಮ್ಮ ಬಳಿಯೇ ಶೇಖರಿಸಿಟ್ಟುಕೊಳ್ಳುವ ಉಗ್ರಾಣ ವ್ಯವಸ್ಥೆಯೇ ಇಲ್ಲ. ಇದ್ದರೂ ಇಟ್ಟುಕೊಳ್ಳಲಾಗದ ಒತ್ತಡದ ಪರಿಸ್ಥಿತಿ ಅವರಿಗಿದೆ. ಮೇಲಾಗಿ, ಸುಗ್ಗಿ ಮುಗಿದ ತಕ್ಷಣದಲ್ಲೇ ರೈತರು ತಮ್ಮ ಫಸಲನ್ನು ಘೋಷಣೆಯಾದ ಬೆಂಬಲ ಬೆಲೆಗಿಂತಲೂ ಬಹಳ ಕಡಿಮೆ ಬೆಲೆಯಲ್ಲಿ ಮಾರುತ್ತಾರೆ. ಏಕೆಂದರೆ, ಧಾನ್ಯ ಖರೀದಿಸುವ ಏಜನ್ಸಿಗಳು ಬಹಳ ತಡವಾಗಿ ಪ್ರತ್ಯಕ್ಷವಾಗುತ್ತವೆ. ಹಾಗಾಗಿ, ಸುಮಾರು 94% ರೈತರಿಗೆ ಘೋಷಿತ ಬೆಂಬಲ ಬೆಲೆ ಸಿಗುವುದೇ ಇಲ್ಲ.

ಬೆಂಬಲ ಬೆಲೆಗಳ ಹೆಚ್ಚಳವು "ಚಾರಿತ್ರಿಕ" ವಾಗಿವೆ ಎಂದು ಸರ್ಕಾರ ಹೇಳಿಕೊಳ್ಳುತ್ತಿರುವುದರ ಹಿಂದಿರುವ ಮರ್ಮವೆಂದರೆ, ಕಳೆದ ನಾಲ್ಕು ವರ್ಷಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಳನ್ನು ತೀರಾ ಕೆಳ ಮಟ್ಟದಲ್ಲಿಡಲಾಗಿತ್ತು ಎಂಬುದಾಗಿ ಕೆಲವರು ಗುರುತಿಸಿದ್ದಾರೆ. ಈ ಎಲ್ಲ ಅಂಶಗಳ ಜೊತೆಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಈಗ ಘೋಷಿಸಿರುವ ಬೆಂಬಲ ಬೆಲೆಗಳನ್ನು ಮೋದಿ ಸರ್ಕಾರವು ಅಧಿಕಾರಕ್ಕೆ ಬರುವ ಮೊದಲಿದ್ದ ಬೆಲೆಗಳಿಗೆ ಹೋಲಿಸಿದರೆ, ಹಣದ ಮೌಲ್ಯದ ದೃಷ್ಟಿಯಲ್ಲಿ, ಹೆಚ್ಚಳ ಇಲ್ಲವೇ ಇಲ್ಲ.

ಉದಾಹರಣೆಗೆ ಭತ್ತದ ಬೆಲೆ. 2013–14ರಲ್ಲಿ, ಒಂದು ಕ್ವಿಂಟಾಲ್ ಎ ಗ್ರೇಡ್ ಭತ್ತದ ಬೆಂಬಲ ಬೆಲೆ 1345 ರೂ ಇತ್ತು. 2018–19 ರ ಪೈರಿಗೆ ಅದನ್ನು 1750 ರೂ ಗಳಿಗೆ ಏರಿಸಲಾಗಿದೆ. ಕೃಷಿ ಕೂಲಿಗಾರ ಬಳಕೆ ಬೆಲೆ ಸೂಚ್ಯಂಕದ ಪ್ರಕಾರ, 2012–13 ಮತ್ತು 2017–18ರ ನಡುವಿನ ಐದು ವರ್ಷಗಳ ಅವಧಿಯಲ್ಲಿ, 33.45%ರಷ್ಟು ಬೆಲೆ ಏರಿಕೆಯಾಗಿದೆ. ಈ ಬೆಲೆ ಏರಿಕೆಯಿಂದಾಗಿ ಬೆಳೆಗಾರರಿಗೆ ಉಂಟಾದ ನಷ್ಟವನ್ನು ತುಂಬಿಕೊಡಬೇಕೆಂದಾದರೆ, 2013–14ರಲ್ಲಿ 1345 ರೂ ಇದ್ದ ಒಂದು ಕ್ವಿಂಟಾಲ್ ಎ ಗ್ರೇಡ್ ಭತ್ತದ ಬೆಂಬಲ ಬೆಲೆಯನ್ನು 2018–19ರಲ್ಲಿ, 1795 ರೂ ಗಳಿಗೆ ನಿಗದಿಪಡಿಸಬೇಕಾಗುತ್ತದೆ, 1750 ರೂ ಅಲ್ಲ. ಆದ್ದರಿಂದ, ಎ ಗ್ರೇಡ್ ಭತ್ತದ ಬೆಂಬಲ ಬೆಲೆ, 2013–14ರಲ್ಲಿದ್ದ ಬೆಂಬಲ ಬೆಲೆಗೆ ಹೋಲಿಸಿದರೆ, 2018–19 ರಲ್ಲಿ ಇಳಿಕೆಯಾಗಿರುವುದು ಸ್ಪಷ್ಟವಾಗಿದೆ.

ಸಾಮಾನ್ಯ ವೆರೈಟಿ ಭತ್ತದ ಬೆಂಬಲ ಬೆಲೆಯಲ್ಲಿ ಇಳಿಕೆಯಾಗಿಲ್ಲ ಎಂಬುದು ನಿಜವಾದರೂ, ಹೆಚ್ಚಳವೂ ಇಲ್ಲ. 2013–14ರಲ್ಲಿ 1310 ರೂ ಇದ್ದ ಒಂದು ಕ್ವಿಂಟಾಲ್ ಸಾಮಾನ್ಯ ವೆರೈಟಿ ಭತ್ತದ ಬೆಂಬಲ ಬೆಲೆಯು 2018–19 ರ ಪೈರಿಗೆ 1748 ರೂ ಗಳಾಗುತ್ತಿತ್ತು. ಅದು 1750 ರೂಗಳಿಗೆ ನಿಗದಿಯಾಗಿದೆ. ಇದು ಹೆಚ್ಚಳವೇ ಅಲ್ಲ.

ಇದೇ ರೀತಿಯ ಲೆಕ್ಕಾಚಾರದಲ್ಲಿ, 2013–14ರಲ್ಲಿ 1310 ರೂ ಇದ್ದ ಒಂದು ಕ್ವಿಂಟಾಲ್ ಮೆಕ್ಕೆಜೋಳದ ಬೆಂಬಲ ಬೆಲೆಯು 2018–19 ರ ಪೈರಿಗೆ 1748 ರೂ ಗಳಾಗುತ್ತಿತ್ತು. ಆದರೆ, ಅದನ್ನು 1700 ರೂ ಗಳಿಗೆ ನಿಗದಿಪಡಿಸಿರುವುದು, ಹಣದ ಮೌಲ್ಯದ ದೃಷ್ಟಿಯಲ್ಲಿ, ಇಳಿಕೆಯೇ. (2013–14ರಲ್ಲಿ ಸಾಮಾನ್ಯ ವೆರೈಟಿ ಭತ್ತದ ಬೆಂಬಲ ಬೆಲೆ 1345 ರೂ ಮತ್ತು ಮೆಕ್ಕೆಜೋಳದ ಬೆಂಬಲ ಬೆಲೆ 1310 ರೂ ಇದ್ದವು. ಈಗ, ಭತ್ತದ ಬೆಲೆ 1750 ರೂ ಮತ್ತು ಮೆಕ್ಕೆಜೋಳದ ಬೆಲೆ 1700 ರೂ ಗಳಿಗೆ ನಿಗದಿಯಾಗಿವೆ.)

ಹಿಂದಿನ ವರ್ಷಕ್ಕೆ ಹೋಲಿಸಿದರೆ, ಜೋಳ, ಸಜ್ಜೆ ಮತ್ತು ರಾಗಿ ಧಾನ್ಯಗಳ ಬೆಂಬಲ ಬೆಲೆಯನ್ನು ಸುಮಾರು 30% ಹೆಚ್ಚಿಸಿರುವುದನ್ನು ಸರ್ಕಾರದ ವಕ್ತಾರರು ದೊಡ್ಡದಾಗಿ ಹೇಳುತ್ತಿದ್ದಾರೆ. ಆದರೆ, ಈ ಧಾನ್ಯಗಳ ಬಳಕೆಯ ಪ್ರಮಾಣ ಬಹಳ ಸಣ್ಣದು. ಎಷ್ಟೆಂದರೆ, ಸರ್ಕಾರ ಪ್ರಕಟಿಸಿದ 2017–18ರ ಆರ್ಥಿಕ ಸರ್ವೆಯಲ್ಲಿ ಕೊಟ್ಟಿರುವಂತೆ, 2016–17ರ ಮುಂಗಾರಿನಲ್ಲಿ ಉತ್ಪಾದನೆಯಾದ ಇಂತಹ ಧಾನ್ಯಗಳ ಒಟ್ಟು ಪ್ರಮಾಣವು 32.7 ದಶ ಲಕ್ಷ ಟನ್ ಇತ್ತು. ಅದರಲ್ಲಿ, ಮೆಕ್ಕೆಜೋಳ ಒಂದರ ಪ್ರಮಾಣವೇ 26.3 ದಶ ಲಕ್ಷ ಟನ್ ಇತ್ತು. ಉಳಿದ ಧಾನ್ಯಗಳ (ಜೋಳ, ಸಜ್ಜೆ, ರಾಗಿ) ಒಟ್ಟು ಪ್ರಮಾಣವು 6.4 ದಶ ಲಕ್ಷ ಟನ್‌ಗಳಷ್ಟಿತ್ತು. ಅಂದರೆ, ಇಂತಹ ಧಾನ್ಯಗಳ ಒಟ್ಟು ಪ್ರಮಾಣದ ಐದನೆಯ ಒಂದರಷ್ಟು ಮತ್ತು ಆಹಾರ ಧಾನ್ಯಗಳ ಒಟ್ಟು ಉತ್ಪತ್ತಿಯಲ್ಲಿ ಕೇವಲ 4.6%ನಷ್ಟು.

ಸರ್ಕಾರದ ಧೋರಣೆಯು ಎಂತಹ ಸಿನಿಕತನದಿಂದ ಕೂಡಿದೆ ಎಂಬುದನ್ನು ಈ ಅಂಶ ಬಹಿರಂಗಪಡಿಸುತ್ತದೆ. ಬಳಕೆಯ ಪ್ರಮಾಣ ಬಹಳ ಸಣ್ಣದಿರುವ ಧಾನ್ಯಗಳ ಬೆಂಬಲ ಬೆಲೆ ಏರಿಕೆಯ ಹೊರೆ ಕ್ಷುಲ್ಲಕ ಎನ್ನುವಷ್ಟು ಕಡಿಮೆ. ಆದರೆ, ಅಪಾರ ಪ್ರಮಾಣದಲ್ಲಿ ಬಳಸುವ ಮತ್ತು ಅತ್ಯವಶ್ಯವಾದ ಆಹಾರ ಧಾನ್ಯಗಳ ಬೆಂಬಲ ಬೆಲೆಗಳು, ಹಣ ಮೌಲ್ಯದ ದೃಷ್ಟಿಯಲ್ಲಿ, 2013–14ರ ಬೆಂಬಲ ಬೆಲೆಯಷ್ಟೂ ಇಲ್ಲ. ರೈತರಿಗೆ ನೈಜ ಬೆಂಬಲ ಕೊಡುವುದಕ್ಕಿಂತ ಹೆಚ್ಚಾಗಿ ಅವರಿಗೆ ಬೆಂಬಲ ಕೊಟ್ಟಿದ್ದೇವೆ ಎಂಬ ಪ್ರಚಾರ ಗಿಟ್ಟಿಸಿಕೊಳ್ಳುವುದೇ ಇಲ್ಲಿರುವ ಮುಖ್ಯವಾದ ಉದ್ದೇಶ.

ಮೋದಿ ಸರಕಾರವು, ಕೊನೆಯ ಪಕ್ಷ, ಕೆಲವು ಬೆಳೆಗಳಿಗಾದರೂ ರೈತರ ನಷ್ಟವನ್ನು, ಹಣ ಮೌಲ್ಯದ ದೃಷ್ಟಿಯಲ್ಲಿ, ಪರಿಹಾರ ಒದಗಿಸುವ ಮೂಲಕ ತನ್ನ ಹಿಂದಿನ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡಿದೆ ಎಂಬುದಾಗಿ ಕೆಲವರು ಭಾವಿಸುತ್ತಾರೆ. ಆದರೆ, ಇದೂ ಸರಿಯಲ್ಲ.

ಕೇವಲ ಬಹಳ ಸಣ್ಣ ಪ್ರಮಾಣದಲ್ಲಿ ಬಳಕೆಯಾಗುವ ಧಾನ್ಯಗಳ ಬೆಂಬಲ ಬೆಲೆ ಏರಿಕೆಯ ಮೂಲಕ ರೈತರು ಅನುಭವಿಸಿದ ನಷ್ಟಕ್ಕೆ ಪರಿಹಾರ ಒದಗಿಸಿರುವುದನ್ನು ಪಕ್ಕಕ್ಕಿಟ್ಟು ನೋಡಿದರೆ, ಪರಿಹಾರ ಒದಗಿಸಿರುವುದರಲ್ಲಿ ಆಗಿರುವ ವಿಳಂಬವು ಪರಿಹಾರವನ್ನು ತಿರಸ್ಕರಿಸಿದಂತೆಯೇ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಬೆಲೆ ಏರಿಕೆಯಿಂದಾಗಿ ರೈತರಿಗೆ ಉಂಟಾದ ನಷ್ಟದ ಪರಿಹಾರವನ್ನು ಬೆಂಬಲ ಬೆಲೆ ಹೊಂದಾಣಿಕೆಯ ಮೂಲಕ ಪ್ರತಿ ವರ್ಷವೂ ಕಟ್ಟಿಕೊಡಬೇಕಾಗುತ್ತದೆ, ಅನೇಕ ವರ್ಷಗಳ ವಿಳಂಬದ ನಂತರವಲ್ಲ. ಏಕೆಂದರೆ, ಬೆಲೆ ಏರಿಕೆಯಿಂದಾಗಿ ಹೆಚ್ಚಾಗುವ ಬೆಳೆಗಾರರ ಉತ್ಪಾದನಾ ಖರ್ಚುಗಳನ್ನು ಬೆಂಬಲ ಬೆಲೆ ಹೊಂದಾಣಿಕೆಯ ಮೂಲಕ ಎಡ ಬಿಡದೆ ಪರಿಹರಿಸದಿದ್ದರೆ ರೈತರು ಸಾಲದ ಸುಳಿಗೆ ಸಿಕ್ಕಿಕೊಳ್ಳುತ್ತಾರೆ. ಬೆಂಬಲ ಬೆಲೆ ಹೊಂದಾಣಿಕೆಯ ಮಧ್ಯಂತರದ ಅವಧಿಯಲ್ಲಿ ಆಗುವ ಬೆಲೆ ಏರಿಕೆಯ ಹೊಡೆತದಿಂದ ಬಚಾವಾಗಲು ರೈತರಲ್ಲಿ ಸ್ವಂತ ಹಣ ಇರುವುದಿಲ್ಲ. ಗತ್ಯಂತರವಿಲ್ಲದೆ ಸಾಲದ ಸುಳಿಗೆ ಬಿದ್ದಾಗ, ಅವರ ಮಾನ ಮರ್ಯಾದೆಗಳಿಗೆ ಧಕ್ಕೆಯಾಗುತ್ತದೆ; ಅವರ ವೈಯುಕ್ತಿಕ ಬದುಕು ಅಸ್ತ–ವ್ಯಸ್ತವಾಗುತ್ತದೆ. ಅಷ್ಟೇ ಅಲ್ಲದೆ, ಹೆಚ್ಚಿನ ಬಡ್ಡಿ ಹೊರೆಯಿಂದಾಗಿ ಅವರ ಉತ್ಪಾದನಾ ವೆಚ್ಚವೂ ಹೆಚ್ಚುತ್ತದೆ. ಬೆಳೆ ಉತ್ಪಾದನೆಗೆ ತಗಲುವ ಖರ್ಚುಗಳನ್ನು ಲೆಕ್ಕಹಾಕುವ ಪರಿಕಲ್ಪನೆಯಲ್ಲಿ ಈ ಎಲ್ಲ ಅಂಶಗಳನ್ನು ಪರಿಗಣಿಸದಿದ್ದರೆ, ಅದು ಉತ್ಪಾದನಾ ಖರ್ಚುಗಳ ಕೀಳಂದಾಜಾಗುತ್ತದೆ. ಇದ್ದದ್ದರಲ್ಲಿ ಅರ್ಥಪೂರ್ಣವಾಗಿ ಕಾಣುವ ಸಿ2 ಸೂತ್ರವೂ ಸಹ ಬೆಲೆ ಏರಿಕೆಯ ಸಮಸ್ಯೆಯಿಂದಾಗಿ ಅತಿ ಹೆಚ್ಚಾಗಿ ಬಳಲಿ ಬೆಂಡಾಗುವ ಬಡ ರೈತರಿಗೆ ತಗಲುವ ಅಧಿಕ ಖರ್ಚಿನ ಇಂತಹ ಪರಿಸ್ಥಿತಿಗಳನ್ನು ಒಳಗೊಂಡಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬೆಂಬಲ ಬೆಲೆಗಳ ಘೋಷಣೆಯು ಮೋದಿ ಸರ್ಕಾರದ ವಿರುದ್ಧವಾಗಿರುವ ಎದುರಾಳಿಗಳನ್ನು ಇಕ್ಕಟ್ಟಿಗೆ ಸಿಕ್ಕಿಸುವ ಒಂದು ಸಿನಿಕತನದ ತಂತ್ರ. ಮೂಲ ವರ್ಷಕ್ಕೆ (2013–14) ಹೋಲಿಸಿದರೆ, ಪ್ರಮುಖ ಬೆಳೆಗಳಿಗೆ ಘೋಷಿಸಿರುವ ಬೆಂಬಲ ಬೆಲೆಗಳಲ್ಲಿ, ಹಣದ ಮೌಲ್ಯದ ದೃಷ್ಟಿಯಲ್ಲಿ, ಹೆಚ್ಚಳ ಇಲ್ಲವೇ ಇಲ್ಲ. ಮೂಲ ವರ್ಷ ಮತ್ತು ಈಗಿನ ನಡುವಿನ ಅವಧಿಯಲ್ಲಿ, ಹಣದ ಮೌಲ್ಯದ ದೃಷ್ಟಿಯಲ್ಲಿ, ಬೆಂಬಲ ಬೆಲೆಗಳಲ್ಲಿ ಇಳಿಕೆಯಾಗಿದೆ. ಬೆಂಬಲ ಬೆಲೆ ಹೊಂದಾಣಿಕೆಯ ಮಧ್ಯಂತರದ ಅವಧಿಯಲ್ಲಿ ಆಗಿರುವ ಬೆಲೆ ಏರಿಕೆಯ ಹೊಡೆತ ತಪ್ಪಿಸಿಕೊಳ್ಳಲು ರೈತರು ಹೆಚ್ಚು ಸಾಲಮಾಡಿಕೊಂಡು ತಮ್ಮ ಪರಿಸ್ಥಿತಿಯನ್ನು ನಿಭಾಯಿಸಿಕೊಂಡಿದ್ದಾರೆ. ಅದರಿಂದಾಗಿ ಅವರ ವೈಯುಕ್ತಿಕ ಹಣ ಕಾಸಿನ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಕನಿಷ್ಠ ಬೆಂಬಲ ಬೆಲೆಗಳು ಮೂಲ ವರ್ಷದ ಮಟ್ಟಕ್ಕೆ ಹಿಂತಿರುಗಿದಾಗಲೂ ಅವರ ಸಾಲದ ಹೊರೆ ಕಡಿಮೆಯಾಗುವುದಿಲ್ಲ. ಈ ಅಂಶವನ್ನು ಪರಿಗಣಿಸುವುದೇ ಇಲ್ಲ. ಪ್ರಮುಖ ಬೆಳೆಗಳಿಗೆ ಮತ್ತು ಅವುಗಳನ್ನು ಬೆಳೆಯುವ ರೈತರಿಗೆ ಈಗ ಒದಗಿರುವುದು ಇದೇ ಪರಿಸ್ಥಿತಿ. ಹಾಗಾಗಿ, ರೈತರ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ●

ರಾಜ್ಯಗಳ ಸುತ್ತ

ತ್ರಿಪುರಾದಲ್ಲಿ ಚೊಲೊ ಪಲ್ಟಾಯ್: ಒಂದೊಂದಾಗಿ ಪ್ರಕಟವಾಗುತ್ತಿವೆ 'ಪಲ್ಟಾ'ಗಳು

'ಚೊಲೊ ಪಲ್ಟಾಯಿ ಅಂದರೆ ಬದಲಾವಣೆ ತರೋಣ ಎಂಬ ಆಶ್ವಾಸನೆ ನೀಡಿ ಅಧಿಕಾ ಗಳಿಸಿರುವ ಬಿಜೆಪಿ-ಐಪಿಎಫ್‌ಟಿ ಸರಕಾರ ನಿಜವಾಗಿಯೂ ಬದಲಾವಣೆ ತರುತ್ತಿದೆ. ಆದರೆ ಎಂತಹ ಬದಲಾವಣೆ. ತ್ರಿಪುರಾದ ಜನ-ವಿಭಾಗಗಳು ಒಂದೊಂದಾಗಿ ಇದನ್ನು ಅನುಭವಿಸುತ್ತಿವೆ.

ಈ ವಾರ ವಿದ್ಯಾರ್ಥಿಗಳು, ನೌಕರರು ಮತ್ತು ಗ್ರಾಮೀಣ ಜನಗಳಿಗೆ ಈ ಬದಲಾವಣೆಯ ಒಂದು ಸ್ವರೂಪ ಕಂಡಿದೆ.

ವೈದ್ಯಕೀಯ ಸೀಟುಗಳ ಹಗರಣ

ರಾಜ್ಯದ ಎರಡು ವೈದ್ಯಕೀಯ ಕಾಲೇಜುಗಳಲ್ಲಿ ಒಂದು ದೊಡ್ಡ ಸೀಟು ಹಂಚಿಕೆ ಹಗರಣ ನಡೆದಿರುವಂತೆ ಕಾಣುತ್ತಿದೆ. ಸಿಬಿಎಸ್‌ಇ ನೀಟ್ ತಯಾರಿಸಿದ ಪಟ್ಟಿಯಲ್ಲಿ ಇರದ, ಅಂದರೆ ರಾಜ್ಯದವರಲ್ಲದ ಕನಿಷ್ಟ 9 ಅರ್ಜಿದಾರರಿಗೆ ಸೀಟುಗಳನ್ನು ಕೊಡಲಾಗಿದೆ. ಈ ಬಗ್ಗೆ ಪ್ರಶ್ನೆ ಎದ್ದಾಗ ಇವರು ಅರ್ಹರಲ್ಲ ಎಂದು ಹೇಳಲಾಯಿತು. ಅಂದರೆ ಅನಿಯಮಿತತತೆಯನ್ನು ಪರೋಕ್ಷವಾಗಿ ಒಪ್ಪಿಕೊಳ್ಳಲಾಯಿತು. ಆದರೆ ನಂತರ ಇವರಲ್ಲಿ ಒಬ್ಬರಿಗೆ ಸೀಟು ಕೊಡಲಾಯಿತು. ಮೊದಲು ಕೊಟ್ಟದ್ದು ಏಕೆ, ನಂತರ ರದ್ದು ಮಾಡಿದ್ದೇಕೆ, ಈಗ ಮತ್ತೆ ಒಬ್ಬರಿಗೆ ಕೊಟ್ಟದ್ದೇಕೆ ಈ ಯಾವ ಬಗ್ಗೆಯೂ ಸ್ಪಷ್ಟೀಕರಣ ಇಲ್ಲ- ಮೋದಿ ಮಾದರಿ ಮೌನವೇ ಇದರ ಹಿಂದೆ ದೊಡ್ಡ ಸೀಟು ಹಗರಣ ಅಡಗಿದೆ ಎಂಬುದನ್ನು ಸೂಚಿಸುತ್ತದೆ ಎಂದು ಎಸ್‌ಎಫ್‌ಐ ಹಾಗೂ ಟಿಎಸ್‌ಯು ಪ್ರತಿಭಟಿಸಿವೆ.

ಹಾಗೆ ನೋಡಿದರೆ ಬಿಜೆಪಿ ಸರಕಾರ ಬದಲಾಯಿಸಿದ್ದು ಎಡರಂಗದ ಈ ಕುರಿತ ಪಾರದರ್ಶಕ ಧೋರಣೆಯನ್ನಷ್ಟೇ. ವಾಸ್ತವವಾಗಿ ಅದು ಈ ಹಿಂದಿನ ಕಾಂಗ್ರೆಸ್ ಸರಕಾರವನ್ನು ಇದರಲ್ಲಿ ಅನುಕರಿಸಿದೆ. 1988-93 ರ ಕಾಂಗ್ರೆಸ್-ಟಿಯುಜೆಎಸ್ ಆಳ್ವಿಕೆಯಲ್ಲೂ ಇಂತಹ ಹೊರರಾಜ್ಯಗಳವರಿಗೆ ಮೆಡಿಕಲ್ ಸೀಟುಗಳನ್ನು ಮಾರಾಟ ಮಾಡಿದ ಪ್ರಕರಣದಿಂದಾಗಿ ಆಗಿನ ಕಾಂಗ್ರೆಸ್ ಮುಖ್ಯಮಂತ್ರಿ ವಿರುದ್ಧ ಸಿಬಿಐ ತನಿಖೆ ನಡೆಸಲಾಗಿತ್ತು.

7ನೇ ವೇತನ ಆಯೋಗ ಜಾರಿಯಿಲ್ಲ, ಆದರೆ...

7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಲಾಗುವುದು ಎಂಬ ಆಶ್ವಾಸನೆ ಈ ಸರಕಾರಕ್ಕೆ ಸರಕಾರಿ ನೌಕರರ ವೋಟುಗಳನ್ನು ಕೊಡಿಸಿತ್ತು ಎನ್ನಲಾಗಿದೆ. ಆದರೆ 4 ತಿಂಗಳಾದರೂ ಇದುವರೆಗೂ ಅದರ ಜಾರಿಯ ಬಗ್ಗೆ ಚಕಾರವಿಲ್ಲ. ಆದರೆ ಆ ಶಿಫಾರಸುಗಳ ಒಂದು ಭಾಗವಾದ, ಆದರೆ ನೌಕರರು ಬಲವಾಗಿ ವಿರೋಧಿಸಿಕೊಂಡು ಬಂದಿರುವ ಹೊಸ ಪೆನ್ಶನ್ ಯೋಜನೆಯನ್ನು ಮಾತ್ರ ಜಾರಿ ಮಾಡುವುದಾಗಿ ರಾಜ್ಯ ಸರಕಾರ ಅಧಿಸೂಚನೆ ನೀಡಿದೆ.

ಎಡರಂಗ ಸರಕಾರ ಕಳೆದ 14 ವರ್ಷಗಳಿಂದ ಈ ನೌಕರ-ವಿರೋಧಿ ಪೆನ್ಶನ್ ಯೋಜನೆಯನ್ನು ಜಾರಿ ಮಾಡಿರದ ಕೆಲವೇ ರಾಜ್ಯಗಳಲ್ಲಿ ಒಂದಾಗಿತ್ತು. ಅನುದಾನ ಪಡೆವ ಸಂಸ್ಥೆಗಳಲ್ಲಿ ಸರಕಾರ ಈ ಯೋಜನೆಗೆ ವಂತಿಗೆ ನೀಡಬೇಕಾಗಿಲ್ಲ, ಕೇವಲ ನೌಕರರ ವಂತಿಗೆಯಿಂದಲೇ ಇದು ನಡೆಯಬೇಕು. ಚಲೋ ಪಲ್ಟಾಯಿ!

ತ್ವಿಪ್ರಲ್ಯಾಂಡ್ ಇಲ್ಲ, ಉದ್ಯೋಗ ಖಾತ್ರಿಯೂ ಇಲ್ಲ

ಪ್ರತ್ಯೇಕ ತ್ವಿಪ್ರಾಲ್ಯಾಂಡ್ ರಾಜ್ಯಕ್ಕಾಗಿ ಐಪಿಎಫ್‌ಟಿಯ 10ದಿನಗಳ ಬೃಹತ್ ರಸ್ತೆ ತಡೆ ಆಂದೋಲನಕ್ಕೆ ಒಂದು ವರ್ಷವಾಯಿತು.ಾ ಆಂದೋಲನ ನಡೆಸಿದವರು ಈಗ ಅಧಿಕಾರದಲ್ಲಿದ್ದಾರೆ. ಆಗ ಬುಡಕಟ್ಟು ಯುವಜನರಿಗೆ ಪುಷ್ಕಳ ಉದ್ಯೋಗಗಳ ಕನಸು ಬಿತ್ತಿದ ಮಂದಿ ಈಗ ಮಂತ್ರಿ ಪದವಿ ಗಿಟ್ಟಿಸಲು ಓಡಾಡುತ್ತಿದ್ದಾರೆ. ಆದರೆ ಬುಡಕಟ್ಟು ಯುವಜನರಿಗೆ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿರುವವರಿಗೆ ಪೂರ್ಣ ಉದ್ಯೋಗ ಒತ್ತಟ್ಟಿಗಿರಲಿ, ಇದ್ದ ಉದ್ಯೋಗಗಳೂ ಇಲ್ಲದಂತಾಗಿವೆ. ಮನರೇಗದಲ್ಲಿ ಈಗ ಕೇವಲ 6 ದಿನಗಳ ಕೂಲಿ ಸಿಗುತ್ತಿದೆ, ಅದೂ 125ರೂ.ದಿನಗೂಲಿಗೆ. ಎಡರಂಗ ಸರಕಾರದ ಅಡಿಯಲ್ಲಿ ಕನಿಷ್ಟ ಕೂಲಿ 178ರೂ.ಸಿಗುತ್ತಿತ್ತು. ಬಿಜೆಪಿ ಅದನ್ನು 340 ರೂ. ಮಾಡುವುದಾಗಿ ಹೇಳಿತ್ತು. ಮಾಡಿಲ್ಲ, ಅದು ಕೇವಲ ಚುನಾವಣಾ ಜುಮ್ಲಾ ಎಂದು ಇನ್ನೂ ಹೇಳಿಲ್ಲ.

ಪಡಿತರ ವ್ಯವಸ್ಥೆ ಕುಸಿದು ಬಿದ್ದಿದೆ. ಕೊಡುತ್ತಿರುವ ಗೋದಿ ಹಿಟ್ಟು ತಿನ್ನಲು ಯೋಗ್ಯವಾಗಿಲ್ಲ. ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದಿವೆ. ನಾಲ್ಕು ತಿಂಗಳಾದವು. ರಾಜ್ಯದಲ್ಲಿ ಸರಕಾರವೆಂಬುದು ಇದೆಯೇ ಎಂದು ದೂರದಲ್ಲಿರುವ ಬುಡಕಟ್ಟು ಹಳ್ಳಿಗರು ಕೇಳುವಂತಾಗಿದೆ.

ನಗರ ಕೇಂದ್ರಿತ ಆರೋಗ್ಯ ವ್ಯವಸ್ಥೆಯತ್ತ

ರಾಜ್ಯದ ಆರೋಗ್ಯ ವ್ಯವಸ್ಥೆಯಲ್ಲಿ 'ಪಲ್ಟಾಯ್' ಪರಿಣಾಮ ಎಂದರೆ ಈ ವರ್ಷ ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯುವುದಿಲ್ಲ, ಎಂಬ ಸರಕಾರೀ ನಿರ್ಧಾರ. ಹಿಂದಿನ ಎಡರಂಗ ಸರಕಾರ ರಾಷ್ಟ್ರೀಯ ಆರೋಗ್ಯ ಮಿಶನ್ ಅಡಿಯಲ್ಲಿ ಮಂಜೂರು ಮಾಡಿದ್ದ ಇಂತಹ 8 ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಯಾವುದೇ ಕಾರಣ ಕೊಡದೆ ನಿಲ್ಲಿಸಲಾಗಿದೆ. ಎಡರಂಗ ಸರಕಾರ ದೂರ-ದೂರದ ಗ್ರಾಮಗಳಿಗೆ ಆರೋಗ್ಯ ವ್ಯವಸ್ಥೆಯನ್ನು ವಿಸ್ತರಿಸುವ ಧೋರಣೆ ತಳೆದಿತ್ತು. ಈಗ ತದ್ವಿರುದ್ಧ, ಅಂದರೆ ನಗರಪ್ರದೇಶಗಳಲ್ಲಿ ಕೇಂದ್ರೀಕರಿಸುವ ನಿರ್ಧಾರ ಮಾಡಲಾಗಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳಿಂದ ತಿಳಿದು ಬಂದಿದೆಯಂತೆ.

ಅಡಿಷನಲ್ ಅಡ್ವೊಕೇಟ್ ಜನರಲಾಗಿ ಕಥುವ ಅತ್ಯಾಚಾರ ಆರೋಪಿಯ ಪರ ವಾದಿಸಿದವರ ನೇಮಕ-ತರಿಗಾಮಿ ಟೀಕೆ

ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ಆಡಳಿತ ನಡೆಸುತ್ತಿರುವ ರಾಜ್ಯಪಾಲರು ಭೀಕರ ಕಥುವ ಅತ್ಯಾಚಾರ ಕೇಸಿನಲ್ಲಿ ಪ್ರಮುಖ ಆರೋಪಿಯನ್ನು ಪ್ರತಿನಿಧಿಸಿದ್ದ ಡಿಫೆನ್ಸ್ ಲಾಯರನ್ನು ರಾಜ್ಯದ ಅಡಿಶನಲ್ ಅಡ್ವೊಕೇಟ್ ಜನರಲ್ ಆಗಿ ನೇಮಿಸಿದ್ದಾರೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹಿರಿಯ ಸಿಪಿಐ(ಎಂ) ಮುಖಂಡ ಹಾಗೂ ಶಾಸಕ ಮಹಮ್ಮದ್ ಯುಸುಫ್ ತರಿಗಾಮಿ ಹೇಳಿದ್ದಾರೆ.

ಇದು ಅಸಮರ್ಥನೀಯವಾದುದನ್ನು ಸಮರ್ಥಿಸಿದ್ದಕ್ಕೆ ಬಹುಮಾನವಾಗಿ ಕಾಣ ಬರುತ್ತದೆ. ಮತ್ತು ಒಂದು ಕೆಟ್ಟ ಹಾದಿ ಹಾಕಿಕೊಡುತ್ತದೆ, ಸರಕಾರ ಅತ್ಯಾಚಾರದ ಆರೋಪಿಗಳನ್ನು ಬೆಂಬಲಿಸುವವರನ್ನು ಪುರಸ್ಕರಿಸುತ್ತದೆ ಎಂಬ ತಪ್ಪು ಸಂದೇಶ ಹೋಗುತ್ತದೆ. ಎಂದು ಟೀಕಿಸಿರುವ ಅವರು ಸರಕಾರ ಈ ನೇಮಕವನ್ನು ರದ್ದು ಮಡುತ್ತದೆ ಎಂದು ನಿರೀಕ್ಷಿಸುವುದಾಗಿ ಹೇಳಿದ್ದಾರೆ.

ಆಂಧ್ರಪ್ರದೇಶ : ರಾಜಕೀಯ ಪರ್ಯಾಯ ಕಟ್ಟಲು ಸಿಪಿಐ(ಎಂ)-ಸಿಪಿಐ ಸಮಾವೇಶ

ಜುಲೈ 13 , 14 ಮತ್ತು 15ರಂದು ಕಾರ್ಮಿಕ ವರ್ಗ, ದಲಿತರು ಮತ್ತು ನಗರಪ್ರದೇಶಗಳ ಪ್ರಶ್ನೆಗಳ ಮೇಲೆ ರಾಜ್ಯಮಟ್ಟದ ಸಮಾವೇಶಗಳು ಆಂಧ್ರಪ್ರದೇಶದಲ್ಲಿ ನಡೆದಿವೆ. ರಾಜ್ಯದಲ್ಲಿ ಒಂದು ರಾಜಕೀಯ ಪರ್ಯಾಯ ಮೂಡಿ ಬರುವಂತೆ ಮಾಡುವ ಸಿಪಿಐ(ಎಂ) ಮತ್ತು ಸಿಪಿಐನ ಜಂಟಿ ಪ್ರಯತ್ನಗಳ ಸರಣಿಯಲ್ಲಿ ಇವು ಮೊದಲ ಮೂರು ಸಮಾವೇಶಗಳು.

ವಿವಿಧ ವರ್ಗಗಳ ಮತ್ತು ಸಾಮಾಜಿಕ 'ವಿಭಾಗಗಳ ಪ್ರಶ್ನೆಗಳನ್ನು ಎತ್ತಿಕೊಂಡು ರಾಜ್ಯ ಮಟ್ಟದ ಸಮಾವೇಶಗಳ ಮೂಲಕ ಟಿಡಿಪಿ, ವೈಎಸ್‌ಆರ್‌ಸಿಪಿ, ಬಿಜೆಪಿ ಮತ್ತು ಕಾಂಗ್ರೆಸ್‌ಗಿಂತ ಭಿನ್ನವಾದ ಒಂದು ರಾಜಕೀಯ ಪರ್ಯಾಯದತ್ತ ಜನಗಳನ್ನು ಅಣಿನೆರೆಸಲು ಎರಡೂ ಪಕ್ಷಗಳು ನಿರ್ಧರಿಸಿವೆ.

ಸಪ್ಟಂಬರ್ 15ರಂದು ಒಂದು ಬೃಹತ್ 'ಮಹಾಘರ್ಜನಾ' ರ್‍ಯಾಲಿ ನಡೆಯಲಿದೆ. ಅದಕ್ಕೆ ಮೊದಲು ಎಲ್ಲಾ ಜಿಲ್ಲೆಗಳನ್ನು ಸುತ್ತಿ ಬರುವ ಬಸ್ ಯಾತ್ರೆಗಳು ನಡೆಯುತ್ತವೆ.

ಈಗ ಮೂರು ಸಮಾವೇಶಗಳಲ್ಲಿ, ಕಾರ್ಮಿಕ ವರ್ಗದ ಸಮಾವೇಶ ಕೈಗಾರಿಕಾ ನಗರ ವಿಶಾಖಪಟ್ಟಣದಲ್ಲಿ ನಡೆದಿದೆ. ದಲಿತರ ಸಮಾವೇಶ ರಾಜ ಮಹೇಂದ್ರವರ್ಮದಲ್ಲಿ ನಡೆದಿದೆ. ಹಾಗೂ ನಗರಪ್ರದೇಶಗಳ ಪ್ರಶ್ನೆಗಳ ಮೇಲೆ ವಿಜಯವಾಡದಲ್ಲಿ ಸಮಾವೇಶ ನಡೆದಿದೆ.

ಕಾರ್ಮಿಕ ವರ್ಗದ ಸಮಾವೇಶ 'ಕಾರ್ಮಿಕ ಘರ್ಜನ"ದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷ ಚ. ನರಸಿಂಗ ರಾವ್ ಮತ್ತು ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಆದಿನಾರಾಯಣ ರಾವ್ ವಹಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ಮಧು ಮತ್ತು ಸಿಪಿಐ ರಾಜ್ಯ ಕಾರ್ಯದರ್ಶಿ ಕೆ. ರಾಮಕೃಷ್ಣ ಡೊಳ್ಳು ಬಾರಿಸುವ ಮೂಲಕ ಸಮಾವೇಶವನ್ನು ಜಂಟಿಯಾಗಿ ಉದ್ಘಾಟಿಸಿದರು.





ಬುಡಕಟ್ಟು ಮತ್ತು ಇತರ ವಂಚಿತ ಸಮುದಾಯಗಳ ಭೂಮಿಯನ್ನು ಕಾರ್ಪೊರೇಟ್ ಗಳಿಗಾಗಿ ಸ್ವಾಧೀನ ಪಡಿಸಕೊಳ್ಳಲು ಅನುವು ಮಾಡಿಕೊಡುವ ಭೂಸ್ವಾಧೀನ ಕಾಯ್ದೆ ತಿದ್ದುಪಡಿ ವಿರುದ್ದ ಜುಲೈ 5ರಂದು ಝಾರ್ಖಂಡ್ ಬಂದ್ ನಂತರ ಜುಲೈ 17ರಂದು ರಾಜಧಾನಿ ರಾಂಚಿಯಲ್ಲಿ ರಾಜಭವನದ ಮುಂದೆ ಒಂದು ದೊಡ್ಡ ಧರಣಿ ನಡೆಸಲಾಯಿತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಅವರು ಧರಣಿಯಲ್ಲಿ ಭಾಗವಹಿಸಿದವರನ್ನು ಉದ್ದೇಶಿಸಿ ಮಾತಾಡಿದರು. ಝಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೆನ್ ಕೂಡ ಮಾತಾಡಿದರು. ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಜೆಎಂಎಂ ಮತ್ತು ವಿವಿಧ ಬುಡಕಟ್ಟು ಮತ್ತು ರೈತರ ಸಂಘಟನೆಗಳ ಕಾರ್ಯಕರ್ತರು ಈ ಧರಣಿಯಲ್ಲಿ ಭಾಗವಹಿಸಿದರು.

ಟ್ರಂಪ್ ವಿರುದ್ಧ ಬ್ರಿಟನ್ ನಲ್ಲಿ ಭಾರೀ ಪ್ರತಿಭಟನೆ

ಬ್ರಿಟನ್ ಪ್ರಧಾನಿ ಥೆರೆಸಾ ಮೇ ಮತ್ತು ಅಮೇರಿಕಾದ ಅಧ್ಯಕ್ಷ ಟ್ರಂಪ್ ರ ನಡುವಿನ ವಿವಾದಾತ್ಮಕ ರಹಸ್ಯವಾದ ವ್ಯಾಪಾರ ಮಾತುಕತೆಯ ವಿರುದ್ಧ ಬ್ರಿಟನಿನ ಉದ್ದಗಲಕ್ಕೂ ಸಾವಿರಾರು ಜನ ಪ್ರತಿಭಟನೆ ನಡೆಸಿದ್ದಾರೆ. ಈ ರಹಸ್ಯ ಮಾತುಕತೆಯ ಪರಿಣಾಮವಾಗಿ, ದೇಶದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಅಂದರೆ, ರಾಷ್ಟ್ರೀಯ ಆರೋಗ್ಯ ಸೇವೆ (ಎನ್.ಎಚ್.ಎಸ್.) ಹದಗೆಡುವ ಸಾಧ್ಯತೆ ಹೆಚ್ಚಾಗಿದೆ ಎಂದು ಆರೋಗ್ಯ ತಜ್ಞರು ಹಾಗೂ ರಾಜಕೀಯ ವೀಕ್ಷಕರು ವ್ಯಾಖ್ಯಾನಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಟ್ರಂಪ್ ಮತ್ತು ಅವರ ಪತ್ನಿ ಮೆಲಾನಿಯಾ ಅವರನ್ನು ಅಧಿಕೃತವಾಗಿ ಸ್ವಾಗತಿಸಿದ ಬ್ರಿಟನ್ನಿನ ವಿದೇಶಾಂಗ ವಾಣಿಜ್ಯ ಕಾರ್ಯದರ್ಶಿ ಲಿಯಾಮ್ ಫಾಕ್ಸರವರು, ಅಮೆರಿಕ ಮತ್ತು ಬ್ರಿಟನ್ನಿನ ಈ ಇಬ್ಬರು ನಾಯಕರ ನಡುವೆ ವ್ಯಾಪಾರ ಮಾತುಕತೆ ನಡೆಯಲಿದೆ ಎಂದು ದೃಢಪಡಿಸಿದ್ದಾರೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಗ್ಲೋಬಲ್ ಜಸ್ಟೀಸ್ ಗುಂಪಿನ ನಿರ್ದೇಶಕ ನಿಕ್ ಡಿಯರ್ಡನ್ ಪ್ರಕಾರ, ಟ್ರಂಪ್ ಭೇಟಿಯ ಮುಖ್ಯ ಕಾರಣವೆಂದರೆ ಬ್ರಿಟನಿನಲ್ಲಿ ಸಾರ್ವಜನಿಕ ಸೇವೆಗಳ ವ್ಯವಹಾರ ಒಪ್ಪಂದದ ಕುರಿತು ಮಾತುಕತೆ ನಡೆಸುವುದು. ಜೊತೆಗೆ, ಅಮೆರಿಕಾದೊಂದಿಗಿನ ಟಿಟಿಐಪಿ–ಶೈಲಿಯ ವ್ಯಾಪಾರಕ್ಕೆ ಬ್ರಿಟನ್ನಿನಲ್ಲಿ ನೆಲೆ ಗಿಟ್ಟಿಸಿಕೊಳ್ಳುವುದು ಮತ್ತು ಒಪ್ಪಂದ ಮಾಡಿಕೊಂಡು ತನ್ನ ನೆಲೆಯನ್ನು ಗಟ್ಟಿ ಮಾಡಿಕೊಳ್ಳುವುದಾಗಿದೆ. ಇದರಿಂದಾಗಿ ನಮ್ಮ ಎನ್.ಎಚ್.ಎಸ್ ಹಾಗೂ ಹಣಕಾಸು ನಿಬಂಧನೆಗಳು, ಮತ್ತು ಆಹಾರದ ಗುಣಮಟ್ಟದ ಮೇಲೆ ಬೆದರಿಕೆಯನ್ನು ಒಡ್ಡುವ ಸಾಧ್ಯತೆಯಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ

ಮುಂದಿನ ದಶಕಗಳಲ್ಲಿ ಬ್ರಿಟಿಷ್ ಆರ್ಥಿಕತೆಗೆ ಮುಕ್ತ ಹಾಗೂ ಅನಿಯಂತ್ರಿತ ಉದಾರೀಕರಣ, ಮತ್ತು ಖಾಸಗಿಕರಣವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುವ, ಹಾಗೂ ಅಮೆರಿಕದೊಂದಿಗೆ ಆಳವಾದ ಸಂಬಂಧವನ್ನು ಸೃಷ್ಟಿಸಿಕೊಳ್ಳುವ ಉದ್ದೇಶದಿಂದಲೇ, ಪ್ರಧಾನಿ ಥೆರೆಸಾ ಮೇ ಅಧ್ಯಕ್ಷ ಟ್ರಂಪ್ ರನ್ನು ಆಹ್ವಾನಿಸಿದ್ದಾರೆ ಎಂದು ರಾಜಕೀಯ ವಲಯದ ಅಭಿಪ್ರಾಯವಾಗಿದೆ. ಇದರ ಕುರಿತಂತೆ ಕಳೆದ ವಾರ ರಹಸ್ಯವಾಗಿ ಮಾತುಕತೆ ನಡೆಸಲಾಗಿದೆ, ಮುಂಬರುವ ವಾರಾಂತ್ಯದಲ್ಲಿ ವ್ಯಾಪಾರ ಮತ್ತು ಸೇವೆಗಳ ಬಗ್ಗೆ ಮಾತುಕತೆ ನಡೆಯುವುದೆಂಬ ಖಾತರಿಯನ್ನು ಲಿಯಾಮ್ ಫಾಕ್ಸ್ ರವರು ಈಗಾಗಲೇ ಘೋಷಿಸಿದ್ದಾರೆ. ಆದರೆ, ಈ ಮಾತುಕತೆಗಳ ಬಗ್ಗೆ ಬ್ರಿಟಿಷ್ ಸಾರ್ವಜನಿಕರಿಗಾಗಲಿ ಅಥವಾ ಬ್ರಿಟನ್ನಿನ ಸಂಸತ್ತಿಗಾಗಲಿ ಯಾವುದೇ ಮಾಹಿತಿಗಳಿಲ್ಲ. ಅವರನ್ನು ವಿಶ್ವಾಸ ತೆಗೆದು ಕೊಳ್ಳದೆ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಇದು ಜನರನ್ನು ರೊಚ್ಚಿಗೆಬ್ಬಿಸಿ ಭಾರೀ ಪ್ರತಿಭಟನೆಗೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ, ಅಮೆರಿಕಾದೊಂದಿಗೆ ವ್ಯಾಪಾರ ಸೇವೆಗಳ ಒಪ್ಪಂದಕ್ಕೆ ಮುಂದಾಗಿರುವ ಥೆರೆಸಾ ಮೇ ಯವರ ಧೋರಣೆಯಿಂದಾಗಿ, ದೇಶದ ಆರ್ಥಿಕತೆಯನ್ನು ಅಪಾಯಕಾರಿ ಹಾದಿಗೆ ತಳ್ಳಲಾಗುತ್ತಿದೆ. ಇದು ಬ್ರಿಟನ್ನಿನಲ್ಲಿ ಪ್ರತಿಯೊಬ್ಬರ ಮೇಲೂ ಕೆಟ್ಟ ಪ್ರಭಾವ ಬೀರುತ್ತದೆ ಹಾಗೂ ಪರಿಸರಕ್ಕೂ ಹಾನಿಕಾರಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ವಾರ ನಡೆಯುವ ಸಂಸತ್ ಅಧಿವೇಶನದಲ್ಲಿ ವಾಣಿಜ್ಯ ಮಸೂದೆಯ (ಟ್ರೇಡ್ ಬಿಲ್) ಮೇಲೆ ಮತ ಚಲಾಯಿಸುವಾಗ, ವ್ಯಾಪಾರ ನಿಯಂತ್ರಿಸುವ ದಿಸೆಯಲ್ಲಿ ಎಲ್ಲಾ ಸಂಸತ್ತರು ಪ್ರತಿಭಟನೆಕಾರರು ಎತ್ತಿರುವ ಬೇಡಿಕೆಗಳ ಬಗ್ಗೆ ಕಾಳಜಿಯಿಂದ ಮತ ಚಲಾಯಿಸಬೇಕೆಂದು ಸಂಸತ್ ಸದಸ್ಯರನ್ನು ಡಿಯಾರ್ಡನ್ ಒತ್ತಾಯಿಸಿದ್ದಾರೆ. ಈ ನಿಟ್ಟಿನಲ್ಲಿ ಲಂಡನಿನಲ್ಲಿ ಮಹಿಳಾ ಪ್ರತಿಭಟನಾಕಾರರು "ಸ್ಟಾಪ್ ಟ್ರಂಪ್ ವಿಸಿಟ್" ಎಂದು ಕೂಗೆಬ್ಬಿಸಿದ್ದಾರೆ.



ಲಂಡನಿನಲ್ಲಿ ಭಯೋತ್ಪಾದಕ ಕೃತ್ಯಗಳಿಗೆ ಮೇಯರ್ ಸಾದಿಕ್ ಖಾನ್ ಅವರನ್ನು ದೂಷಿಸಿ, ವಲಸೆಯಿಂದ ಯುರೋಪ್ ತನ್ನ 'ಸಂಸ್ಕೃತಿ'ಯನ್ನು ಕಳೆದುಕೊಳ್ಳುತ್ತಿದೆ ಎಂದು ಸಂದರ್ಶನವೊಂದರಲ್ಲಿ ಹೇಳಿ, ತಮ್ಮ ಇಸಾಮ್–ವಿರೋಧಿ ಮತ್ತು ಜನಾಂಗವಾದಿ ನೀತಿಯನ್ನು ತೋರಿಸಿದ್ದು ಭಾರೀ ವಿವಾದಾತ್ಮಕವಾಗಿತ್ತು. ಇದಲ್ಲದೆ, ಪ್ರಧಾನಿ ಮೇ ಅವರ 'ಬ್ರೆಕ್ಸಿಟ್ ನೀತಿ ಮೃದು' ಎಂದೂ, ಇತ್ತೀಚೆಗೆ ಮೇ ಸಂಪುಟದಿಂದ ರಾಜೀನಾಮೆ ಕೊಟ್ಟ ಬೋರಿಸ್ ಜಾನ್ಸನ್ ಕಟು ವಲಸೆ–ವಿರೋಧಿ ಬಲಪಂಥಿಯನನ್ನು ಬೆಂಬಲಿಸಿದ್ದು ವಿದೇಶೀ ಗಣ್ಯನೊಬ್ಬ ದೇಶೀಯ ರಾಜಕೀಯದ ಬಗ್ಗೆ ಮೂಗು ತೂರಿಸಬಾರದೆಂಬ 'ಲಕ್ಷ್ಮಣ ರೇಖೆ'ಯನ್ನು ದಾಟಿತ್ತು. ಭಾರೀ ಪ್ರತಿಭಟನೆಯಲ್ಲದೆ, ಅಧ್ಯಕ್ಷ ಟ್ರಂಪ್ ಅವರ ಇಂತಹ ಕನಿಷ್ಟ ರಾಜತಾಂತ್ರಿಕ ಸಜ್ಜನಿಕೆಯ ಮಾಮೂಲು ಅಭಾವ ಬ್ರಿಟನಿನ ಇನ್ನಷ್ಟು ಜನವಿಭಾಗಗಳನ್ನು ರೊಚ್ಚಿಗೆಬ್ಬಿಸಿತ್ತು.

ಏತನ್ಮಧ್ಯೆ, ಲೇಬರ್ ಪಕ್ಷದ ನಾಯಕ ಜೆರೆಮಿ ಕಾರ್ಬಿನ್ ಹೇಳಿಕೆ ನೀಡಿ ಅಮೆರಿಕದ ಅಧ್ಯಕ್ಷ ಟ್ರಂಪ್ ನ "ಶೂನ್ಯ ಸಹಿಷ್ಣುತೆ" ವಲಸೆ ನೀತಿಯ ಜಾರಿಯಿಂದಾಗಿ ಮೆಕ್ಸಿಕನ್ ಗಡಿ ಪ್ರದೇಶದಲ್ಲಿ ಪೋಷಕರು ಮತ್ತು ಮಕ್ಕಳನ್ನು ಹಾಗೂ ಒಟ್ಟಾರೆಯಾಗಿ ಇಡೀ ಕುಟುಂಬಗಳನ್ನೇ ಬೇರ್ಪಡಿಸಿ ಅಮಾನವೀಯವಾಗಿ ನಡೆದುಕೊಂಡಿದ್ದಾರೆ. ಹೀಗೆ ಅಪಾಯಕಾರಿ ನೀತಿಗಳಿಂದಾಗಿ ಲಕ್ಷಾಂತರ ಮಕ್ಕಳನ್ನು ಜೈಲಿನಲ್ಲಿ ಬಂಧನದಲ್ಲಿ ಇಡಲಾಗಿದೆ. ಇಂತಹ ಸಂದರ್ಭದಲ್ಲಿ ನಾವು ಟ್ರಂಪ್ ರನ್ನು ಬರಮಾಡಿಕೊಳ್ಳುವುದು ಎಷ್ಟು ಸರಿಯೆಂದು ಪ್ರಶ್ನಿಸಿದ್ದಾರೆ.

ಆದರೆ ಟೋರೀಸ್ ಪಕ್ಷದ ಅಧ್ಯಕ್ಷರು ಟ್ರಂಪ್ ರಿಗೆ ರತ್ನಗಂಬಳಿಯ ಸ್ವಾಗತ ಕೋರಿ ಯೋಗ ಕ್ಷೇಮ ವಿಚಾರಿಸಿ ಕೊಂಡಿದ್ದಾರೆ.


ಒಟ್ಟಾರೆ ಯಾಗಿ ಟ್ರಂಪ್ ನೊಂದಿಗಿನ ಯಾವುದೇ ರೀತಿಯ ಟ್ರೇಡ್ ಒಪ್ಪಂದ ಬ್ರಿಟನ್ನಿನ ಆರ್ಥಿಕತೆಗೆ ಅಪಾಯಕಾರಿಯೇ ಹೊರತು, ಅಭಿವೃದ್ಧಿಗೆ ಪ್ರಯೋಜನವಾಗುವುದಿಲ್ಲ. ಆದ್ದರಿಂದಲೇ ಪ್ರತಿಭಟನೆ ವ್ಯಾಪಕವಾಗಿ ಹರಡಿದೆ. ಇದು ಪ್ರಧಾನಿ ಥೆರೆಸಾ ಮೇ ಗೆ ಆತಂಕ ತಂದಿದೆ.

ಲುಲಾ ಬಿಡುಗಡೆ ತಡೆಯಲು ನ್ಯಾಯಾಧೀಶರ ನಾಟಕ

ಕಳೆದ ಏಪ್ರಿಲ್ 7 ರಿಂದ ಭ್ರಷ್ಟಾಚಾರ ದ ಸುಳ್ಳು ಆರೋಪದಡಿಯಲ್ಲಿ ಬಂಧನದಲ್ಲಿದ್ದ ಬ್ರೆಜಿಲ್‌ನ ಮಾಜಿ ಅಧ್ಯಕ್ಷರಾದ ಲುಲಾ ಡಿಸಿಲ್ವಾ ರವರ ಬಗ್ಗೆ ತನಿಖೆ ನಡೆಯುತ್ತಿತ್ತು. ಈ ವರೆಗೆ ಅವರ ಮೇಲಿನ ಭ್ರಷ್ಟಚಾರದ ಆರೋಪಗಳನ್ನು ಸಾಬೀತು ಪಡಿಸಲು, ಸೂಕ್ತವಾದ ಸಾಕ್ಷಿಗಳನ್ನು ಒದಗಿಸಲು ವಿಫಲವಾದ ಕಾರಣ, ಪೋರ್ಟೊ ಅಲೆಗ್ರೆ ಮೂಲದ ಫೆಡರಲ್ ರೀಜನಲ್ ಕೋರ್ಟ್ ನ, ನ್ಯಾಯಾಧೀಶರಾದ ರೋಗರಿಯೊ ಫೇವ್ರೆಟೊರ್ ರವರು ಲುಲಾ ರನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸಿದ್ದರು. ಈ ಘೋಷಣೆ ಹೊರಬಿದ್ದ ನಂತರ ಒಂದೇ ದಿನದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದವು.

ಹೆಬಿಯಸ್ ಕಾರ್ಪಸ್ ಅರ್ಜಿಗೆ ಪ್ರತಿಕ್ರಿಯೆಯಾಗಿ, ಭಾನುವಾರ ಮೂರು ನ್ಯಾಯದೀಶರ ನಾಟಕದ ದೃಶ್ಯಗಳು ಆರಂಭಗೊಂಡವು. ನ್ಯಾಯಾದೀಶರಾದ ಫೇವ್ರೆಟೊರ್ ಇತರೆ ಅಭ್ಯರ್ಥಿಗಳಂತೆ ಲೂಲಾ ಅವರು ಕೂಡಾ ಸಮಾನ ಹಕ್ಕುಗಳನ್ನು ಹೊಂದಿದ್ದಾರೆ ಎಂಬ ಕಾರಣ ನೀಡಿ ಬಿಡುಗಡೆಗೆ ಆದೇಶ ಹೊರಡಿಸಿದ ನಂತರ ಲುಲಾರ ಬೆಂಬಲಿಗ ರಲ್ಲಿ ಮಹತ್ತರವಾದ ಹರ್ಷವನ್ನು ಉಂಟು ಮಾಡಿತ್ತು. ತಕ್ಷಣವೇ, ಇನ್ನೊಬ್ಬ ನ್ಯಾಯಾಧೀಶರಾದ ಸೆರ್ಗೀಯೋ ಮೊರೊ ರವರು ಲುಲಾರ ಬಿಡುಗಡೆ ಗೆ ಅಡ್ಡಿ ಮಾಡುವ ನಿಟ್ಟಿನಲ್ಲಿ, ಫೇವ್ರೆಟೊರ್ ರವರಿಗೆ ಬಿಡುಗಡೆ ಆದೇಶ ಹೊರಡಿಸಲು ಅಧಿಕಾರವಿಲ್ಲವೆಂದು ಪ್ರಶ್ನಿಸಿದರು. ಆದಾಗ್ಯೂ, ಫೇವ್ರೆಟೊರ್ ರವರು ತಮ್ಮ ಆದೇಶವನ್ನು ಪುನರುಚ್ಚರಿಸಿದರು. ಹಾಗೂ ಪೋಲಿಸ್‌ರಿಗೆ ಸ್ಪಷ್ಟ ಸೂಚನೆಗಳನ್ನು ನೀಡಿ, ಬಿಡುಗಡೆಗೆ ಮುಂದಾದರು. ಆದರೆ, ಫೆಡೆರಲ್ ಪ್ರಾದೇಶಿಕ ನ್ಯಾಯಲಯದ ಮತ್ತೊಬ್ಬ ಮುಖ್ಯ ನ್ಯಾಯಧೀಶರಾದ ಎಡ್ವರ್ಡೊ ಥಾಂಪ್ಸನ್ ಪ್ಲೋರೆಸ್ ರವರು, ರೊಜೆರಿಯೊ ಫೇವ್ರೆಟೊರ್ ಅವರ ಆದೇಶ ವನ್ನು ಅಂತಿಮವಾಗಿ ರದ್ದುಗೊಳಿಸಿದರು. ಈ ಪ್ರಕರಣವು, ನ್ಯಾಯಧೀಶರಾದ ಜೋವಾ ಪೆಡ್ರೊ ಗೆಬ್ರಾರನ್ ನೆಟೊ ವ್ಯಾಪ್ತಿಯಲ್ಲಿ ಬರುವುದರಿಂದ, ಫೇವ್ರೆಟೊರ್ ರ ಆದೇಶವು ಸಾಧುವಲ್ಲ ಎಂದು ಲುಲಾರ ಬಿಡುಗಡೆಗೆ ತಡೆಯೊಡ್ಡಿದರು.

ನ್ಯಾಯಧೀಶ ಸೆರ್ಗಿಯೋ ಮೊರೊ ಕೂಡಾ ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಅಭ್ಯರ್ಥಿ ಯಾಗುವ ಬಯಕೆ ಹೊಂದಿದ್ದಾರೆ. ಲುಲಾರು ಸ್ಪರ್ಧಿಸಿದರೆ ಗೆಲ್ಲುವುದು ಖಚಿತವೆಂದು ಈಗಾಗಲೇ ಹಲವು ರಾಜಕೀಯ ಸಮೀಕ್ಷೆಗಳು ವರದಿ ಮಾಡಿರುವುದರಿಂದ, ಲುಲಾ ರನ್ನು ಭ್ರಷ್ಟಾಚಾರದ ಸುಳ್ಳು ಆರೋಪಗಳನ್ನು ಹೊರಿಸಿ, 12 ವರ್ಷಗಳ ಕಾಲ ಜೈಲಿನಲ್ಲಿ ಕೊಳೆಯುವಂತೆ ಮಾಡುವ ಆದೇಶ ಹೊರಡಿಸುವ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದನ್ನು ಇಲ್ಲಿ ಗಮನಿಸ ಬೇಕಾಗಿದೆ. ಆದರೆ ಲುಲಾ ಅವರನ್ನು ಬಿಡುಗಡೆ ಮಾಡಬೇಕೆಂದು ಚಳುವಳಿ ಬ್ರೆಜಿಲಿನಲ್ಲಿಯೂ ಅಂತರ್ರಾಷ್ಟ್ರೀಯವಾಗಿಯೂ ಬಲಗೊಳ್ಳುತ್ತಿದೆ. ಅವರ ಮೇಲೆ ಕೇಸು ಹಾಗೂ ಬಂಧನ ಮುಂದುವರೆದರೂ ಅಧ್ಯಕ್ಷ ಪದವಿಗೆ ಸ್ಪರ್ಧೆ ಮಾಡಲು ಕಾನೂನು ಅಡಚಣೆಗಳು ಇಲ್ಲ ಎಂದು ಕಾನೂನುತಜ್ಞರು ವಾದಿಸುತ್ತಿದ್ದಾರೆ.



ಸರ್ಕಾರದ ದಬ್ಬಾಳಿಕೆಗೆ ಬ್ರೆಜಿಲ್ ಕಾರ್ಮಿಕರಿಂದ ತಿರುಗೇಟು

ಬ್ರೆಜಿಲ್ ನಲ್ಲಿನ ಬಲಪಂಥೀಯ ಸರ್ಕಾರದ ಅಧ್ಯಕ್ಷ ಮೈಕೆಲ್ ಟೆಂಮರ್ ಕಾರ್ಮಿಕ ಸಂಘಗಳ ಹಕ್ಕುಗಳ ಮೇಲೆ ದಬ್ಬಾಳಿಕೆ ನಡೆಸಿ, ಒತ್ತಾಯ ಪೂರ್ವಕವಾಗಿ ಸಂಘಗಳಿಂದ ಕಾರ್ಮಿಕರನ್ನು ಬೇರ್ಪಡಿಸುವ ನೀತಿಯೊಂದನ್ನು ತನ್ನ ನವ ಉದಾರವಾದಿ ನೀತಿಯ ಭಾಗವಾಗಿ ತರುವ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದ್ದು ಕಳೆದ ವಾರವಷ್ಟೆ ಸುದ್ದಿಯಾಗಿತ್ತು. ಆದರೆ, ಬ್ರೆಜಿಲಿಯನ್ ಕಾರ್ಮಿಕ ವರ್ಗದ ಧೀರೋದಾತ್ತ ಬೃಹತ್ ಮುಷ್ಕರ ನಡೆಸುವ ಮೂಲಕ ತಿರುಗೇಟು ಕೊಡುವಲ್ಲಿ ಯಶಸ್ವಿಯಾಗಿರುವುದು ಈ ವಾರದ ಸುದ್ದಿಯಾಗಿದೆ. ನವ–ಉದಾರವಾದ ನೀತಿಯನ್ನು ಹಿಮ್ಮೆಟ್ಟಿಸುವ ಹೋರಾಟದಲ್ಲಿ ನಿರತವಾಗಿರುವ ಜಗತ್ತಿನಾದ್ಯಂತ ಕಾರ್ಮಿಕರಿಗೆ ಈ ಬೆಳವಣಿಗೆ ಹೊಸ ಉತ್ಸಾಹವನ್ನು ತಂದಿದೆ.

ಮುಂದಿನ ಅಕ್ಟೋಬರ್ 7, ರಂದು ಬ್ರೆಜಿಲ್ ರಾಷ್ಟ್ರೀಯ ಚುನಾವಣೆಗಳನ್ನು ಎದುರಿಸಲಿದೆ. ಹಾಗೆಯೇ, ಅಕ್ಟೋಬರ್ 28 ರಂದು, ಅಗತ್ಯವಿದ್ದರೆ ಅಧ್ಯಕ್ಷೀಯ ಚುನಾವಣೆಯನ್ನು ನಡಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರವು ಕಾರ್ಮಿಕ ವಿರೋಧಿ ನೀತಿಗಳಿಂದಾಗಿ, ತನ್ನ ಜನಪ್ರಿಯತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷ ಮೈಕೆಲ್ ಟಂಮರ್ ಬ್ರೆಜಿಲಿಯನ್ ಕಾರ್ಮಿಕರ ಮೇಲೆ ಇಂತಹ ದಬ್ಬಾಳಿಕೆ ನೀತಿಯನ್ನು ಜಾರಿಗೊಳಿಸಲು ಮುಂದಾಗಿದ್ದಾರೆ. ಎಡ ಪಕ್ಷದ ನೇತ್ರತ್ವದಲ್ಲಿನ ಕಾರ್ಮಿಕ ಸಂಘಟನೆಗಳು ಈ ಹೋರಾಟದಲ್ಲಿ ಮುಂಚೂಣಿ ಪಾತ್ರವನ್ನು ನಿರ್ವಹಿಸುತ್ತಿವೆ.. ಇದು ಪ್ರಸ್ತುತ ಅಧ್ಯಕ್ಷರಿಗೆ ಆತಂಕ ತಂದಿದೆ.

ಜನಾಂಗೀಯ ನಿಂದನೆಗೆ ಇಲ್ಲವೆನ್ನಿ......... ಪುಟ 16 ರಿಂದ

ತ್ಯಜಿಸಿದ. 1998 ರಿಂದ 2015ರ ವರೆಗೆ ಫೀಫಾ ಅಧ್ಯಕ್ಷನಾಗಿದ್ದ ಸ್ವಿಝರ್‌ಲ್ಯಾಂಡ್ ಪ್ರಜೆ ಸೆಪ್ ಬ್ಲಾಟರ್ ಕೂಡಾ ಫೀಫಾದ ಜನಪ್ರಿಯ ಅಧ್ಯಕ್ಷನಾಗಿದ್ದ. ನಂತರ ಈತನೂ ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿ 2015ರಲ್ಲಿ ಅಧಿಕಾರ ಕಳೆದುಕೊಂಡ. 2018ರಲ್ಲಿ ವಿಶ್ವಕಪ್ ಪಂದ್ಯಾವಳಿ ನಡೆಸಲು ರಷ್ಯಾ ಹಾಗೂ 2022ರಲ್ಲಿ ಪಂದ್ಯಾವಳಿ ನಡೆಸಲು ಕಟಾರ್ ದೇಶಗಳು ಹಕ್ಕು ಪಡೆದುಕೊಳ್ಳುವಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ.

ಫೀಫಾದ ಪ್ರಾಯೋಜಕ ಕಂಪನಿಗಳಲ್ಲಿ ವಿಶ್ವದ ಬೃಹತ್ 7 ಕಂಪನಿಗಳಾದ ಅಡಿಡಾಸ್, ಕೊಕಾಕೋಲಾ, ಗಾಝ್‌ಫ್ರೋಮ್, ಹುಂಡಾಯ್ ಮೋಟಾರ್ಸ್, ವೀಝಾ, ವಾಂಡಾ ಸಮೂಹ, ಕಟಾರ್ ಏರ್‌ವೇಸ್ ಪ್ರಮುಖವಾಗಿವೆ. ಅಡಿಡಾಸ್ ಜರ್ಮನಿ ಮೂಲದ ಕ್ರೀಡಾ ಸಾಮಗ್ರಿ, ಕ್ರೀಡಾ ಪೋಷಾಕುಗಳ, ಕ್ರೀಡಾ ಪಾದರಕ್ಷೆಗಳ ಉತ್ಪಾದನೆಯ 2122 ಕೋಟಿ ಡಾಲರ್ ಆದಾಯವುಳ್ಳ ಕಂಪನಿ. ಕೋಕಾಕೋಲಾ ಅಮೆರಿಕಾ ಮೂಲದ ತಂಪು ಪಾನೀಯ ತಯಾರಿಕೆಯ 3541 ಕೋಟಿ ಡಾಲರ್ ಆದಾಯವುಳ್ಳ ಕಂಪನಿ. ವಿಶ್ವದ ಅನೇಕ ರಾಷ್ಟ್ರಗಳ ಆಡಳಿತದಲ್ಲಿ ಹತೋಟಿ ಸಾಧಿಸಿರುವ ಕುಖ್ಯಾತ ಕಂಪನಿ ಇದಾಗಿದೆ. ಗಾಝ್‌ಫ್ರೋಮ್ ರಷ್ಯಾ ಮೂಲದ ತೈಲ ಹಾಗೂ ಗ್ಯಾಸ್ ಉತ್ಪಾದನೆಯ 9100 ಕೋಟಿ ಡಾಲರ್ ಆದಾಯವುಳ್ಳ ಬೃಹತ್ ಕಂಪೆನಿ. ಹುಂಡಾಯ್ ದಕ್ಷಿಣ ಕೊರಿಯಾ ಮೂಲದ ವಾಹನ ಉತ್ಪಾದನೆಯ ಬೃಹತ್ ಕಂಪನಿ ಹಾಗೂ 22 ಸಾವಿರ ಕೋಟಿ ಡಾಲರ್ ಆದಾಯವುಳ್ಳ ಸಂಸ್ಥೆ. ವೀಝಾ ಅಮೆರಿಕಾ ಮೂಲದ ಹಣಕಾಸು ವಹಿವಾಟು ನಡೆಸುವ 1835 ಕೋಟಿ ಡಾಲರ್ ಆದಾಯ ಹೊಂದಿರುವ ಸಂಸ್ಥೆ. ವಾಂಡಾ ಸಮೂಹ ಚೀನಾ ಮೂಲದ ನಿರ್ಮಾಣ ಸಂಸ್ಥೆ ಹಾಗೂ ಅದರ ಆದಾಯ 4 ಸಾವಿರ ಕೋಟಿ ಡಾಲರುಗಳು. ಕಟಾರ್ ಏರ್‌ವೇಸ್ ಕಟಾರ್ ಮೂಲದ ವಿಶ್ವಪ್ರಸಿದ್ಧ ವಿಮಾನ ಯಾನ ಕಂಪನಿ.

ವಿಶ್ವದ ಜನಸಾಮಾನ್ಯನ ಹಾಗೂ ಅತ್ಯಂತ ಜನಪ್ರಿಯ ಕ್ರೀಡೆ ಈಗ ದೈತ್ಯ ಕಂಪನಿಗಳ ಹಿಡಿತಕ್ಕೆ ಸಿಲುಕಿರುವುದು ವಿಷಾದನೀಯ ಸಂಗತಿ. •

JANASHAKTHI KANNADA VARA PATRIKE JULY 23-29, 2018 Price: Rs. 10/- Date of Publication: 20 JULY 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

21ನೇ ಶತಮಾನದಲ್ಲಿ ಜರುಗುವ ಅತಿ ದೀರ್ಘಾವಧಿಯ ಚಂದ್ರಗ್ರಹಣ

ಜುಲೈ 27 ರಾತ್ರಿ : ಸಂಪೂರ್ಣ ಚಂದ್ರಗ್ರಹಣವನ್ನು ನೋಡಿ ಆನಂದಿಸಿ



ರಾಮ್ಕಿ

ಸೂರ್ಯಗ್ರಹಣ, ಚಂದ್ರಗ್ರಹಣಗಳು ಖಗೋಳ ಲೋಕದ ವಿಸ್ಮಯಗಳು. ಖಗೋಳ ವಿಜ್ಞಾನವನ್ನು ಮತ್ತು ಆಕಾಶಕಾಯಗಳ ಚಲನೆಯನ್ನು ಅರ್ಥಮಾಡಿಕೊಳ್ಳಲು ಸಿಗುವ ಅತ್ಯುತ್ತಮ ಅವಕಾಶಗಳು. ಭಾರತೀಯ ಪರಂಪರೆಯಲ್ಲಿ ಆರ್ಯಭಟ, ವರಾಹಮಿಹಿರ, ಮೊದಲನೆಯ ಭಾಸ್ಕರ, ಎರಡನೆಯ ಭಾಸ್ಕರ ಇವರೆಲ್ಲರೂ ಖಗೋಳ ವಿಜ್ಞಾನದ ಬಗೆಗೆ ಸಾಕಷ್ಟು ವೈಜ್ಞಾನಿಕವಾಗಿ ಚಿಂತಿಸಿದ ಖಗೋಳ ವಿಜ್ಞಾನಿಗಳು. ಇದರಲ್ಲಿ ವರಾಹಮಿಹಿರ, ಶ್ರೀಷೇಣ, ಆರ್ಯಭಟ ಮತ್ತು ವಿಷ್ಣುಚಂದ್ರರು ಭೂಮಿ ಮತ್ತು ಚಂದ್ರನ ನೆರಳುಗಳು ಕ್ರಮವಾಗಿ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳನ್ನು ಉಂಟುಮಾಡುತ್ತವೆ ಎಂದು ಪ್ರತಿಪಾದಿಸಿರುವ ಉಲ್ಲೇಖಗಳು ಇವೆ. ಆದರೂ ಭಾರತದಲ್ಲಿ ರಾಹು ಕೇತುಗಳು ಸೂರ್ಯ ಚಂದ್ರರನ್ನು ನುಂಗುವ ಕಾರಣದಿಂದ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳು ಸಂಭವಿಸುತ್ತದೆನ್ನುವ ಮೂಢನಂಬಿಕೆಯನ್ನು ಜನಸಾಮಾನ್ಯರ ಮನದಲ್ಲಿ ಆಳವಾಗಿ ಬಿತ್ತಲಾಗಿದೆ. ಇಂತಹ ಆಧಾರರಹಿತ ಮೂಢನಂಬಿಕೆಗಳನ್ನು ನಿವಾರಿಸಲು ಸಹ ಈ ಗ್ರಹಣದ ಸಂದರ್ಭಗಳು ಉತ್ತಮ ಅವಕಾಶಗಳು.

ಇದೇ 2018, ಜುಲೈ 27 ರ ರಾತ್ರಿ ಮತ್ತು 28 ರ ಬೆಳಗಿನ ಜಾವ ಸಂಪೂರ್ಣ ಚಂದ್ರಗ್ರಹಣವು ಜರುಗಲಿದೆ. ಈ ಸಂಪೂರ್ಣ ಗ್ರಹಣದ ಅವಧಿಯು ಒಟ್ಟು 1 ಗಂಟೆ 43 ನಿಮಿಷಗಳ ಕಾಲ ಇರಲಿದೆ. ಈ ಗ್ರಹಣವು ಈ ಇಪ್ಪತ್ತೊಂದನೇ ಶತಮಾನದಲ್ಲಿ ಜರುಗುವ ಅತಿ ದೀರ್ಘಾವಧಿಯ ಚಂದ್ರಗ್ರಹಣವಾಗಿರುತ್ತದೆ.

ಪಾರ್ಶ್ವ(ಭಾಗಶಃ) ಚಂದ್ರಗ್ರಹಣವು ಭಾರತೀಯ ಕಾಲಮಾನದ ಪ್ರಕಾರ 27 ರ ರಾತ್ರಿ 11.54 ಗಂಟೆಗೆ ಆರಂಭಗೊಳ್ಳಲಿದೆ. ಆನಂತರ ಕ್ರಮೇಣ ಕ್ರಮೇಣ ಭೂಮಿಯ ನೆರಳು ಚಂದ್ರನನ್ನು ಆವರಿಸಿಕೊಳ್ಳುತ್ತದೆ. 28 ರ ಬೆಳಿಗಿನ ಜಾವ 1 ಗಂಟೆಗೆ ಭೂಮಿಯ ನೆರಳು ಚಂದ್ರನನ್ನು ಪೂರ್ಣ ಆವರಿಸಿಕೊಂಡು ಸಂಪೂರ್ಣ ಚಂದ್ರಗ್ರಹಣವು ಉಂಟಾಗುತ್ತದೆ. ಈ ಪೂರ್ಣ ಚಂದ್ರಗ್ರಹಣವು ಬೆಳಗಿನ ಜಾವ 2.43 ಗಂಟೆಯವರೆಗೂ ಇರುತ್ತದೆ. ಆ ನಂತರ ಕ್ರಮೇಣ ಕ್ರಮೇಣವಾಗಿ ಚಂದ್ರನು ಭೂಮಿಯ ನೆರಳಿನಿಂದ ಹೊರಬರುತ್ತಾನೆ. ಬೆಳಗಿನ ಜಾವ 3.49ರ ಹೊತ್ತಿಗೆ ಚಂದ್ರನು ಭೂಮಿಯ ನೆರಳಿನಿಂದ ಸಂಪೂರ್ಣವಾಗಿ ಹೊರಬರುತ್ತಾನೆ. ಈ ನಿರ್ದಿಷ್ಟ ಗ್ರಹಣದಲ್ಲಿ ಚಂದ್ರನು ಭೂಮಿಯ ಪೂರ್ಣಛಾಯೆಯ(ಪೂರ್ಣ ನೆರಳಿನ)ಭಾಗದಲ್ಲಿ ಹಾದು ಹೋಗುತ್ತಾನೆ. ಇದಲ್ಲದೇ ಚಂದ್ರನು ಜುಲೈ 27 ರಂದು ತನ್ನ ಕಕ್ಷೆಯಲ್ಲಿ ಭೂಮಿಯಿಂದ ಪರಮಾವಧಿ ದೂರದಲ್ಲಿರುತ್ತಾನೆ ಮತ್ತು ತುಲನಾತ್ಮಕವಾಗಿ ಸ್ವಲ್ಪ ನಿಧಾನವಾಗಿ ಚಲಿಸುತ್ತಾನೆ. ಈ ನಿಧಾನ ಗತಿಯ ಚಲನೆಯಿಂದಾಗಿ ಮತ್ತು ಭೂಮಿಯ ನೆರಳಿನ ಭಾಗದಲ್ಲಿ ಕ್ರಮಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾನೆ ಮತ್ತು ಹೆಚ್ಚು ದೂರ ಕ್ರಮಿಸುತ್ತಾನೆ.

ಈ ಸಂಪೂರ್ಣ ಚಂದ್ರಗ್ರಹಣದ ಅವಧಿಯು 1.43 ಗಂಟೆಗಳಷ್ಟು ಇರುತ್ತದೆ. 2001 ರಿಂದ 2100 ನೇ ಇಸವಿಯ ನಡುವಿನ ಚಂದ್ರಗ್ರಹಣಗಳಲ್ಲೇ ಇದು ಅತ್ಯಂತ ದೀರ್ಘ ಅವಧಿಯದ್ದು. ಜುಲೈ 16, 2000 ರಲ್ಲಿ ಸಂಭವಿಸಿದ ಸಂಪೂರ್ಣ ಚಂದ್ರಗ್ರಹಣದ ಅವಧಿಯು 1.46 ನಿಮಿಷಗಳದ್ದಾಗಿತ್ತು. ಅದೇ ರೀತಿಯಾಗಿ 2011 ರ ಜೂನ್ 15 ರಂದು ಸಂಭವಿಸಿದ ಚಂದ್ರಗ್ರಹಣದ ಅವಧಿಯು 1.40 ನಿಮಿಷದ್ದಾಗಿತ್ತು.

ಈ ಚಂದ್ರಗ್ರಹಣವನ್ನು ಭಾರತದ ಎಲ್ಲ ಭಾಗಗಳಿಂದಲೂ ನೋಡಬಹುದು. ಬರಿಗಣ್ಣಿನಿಂದಲೇ ನೋಡಬಹುದು. ಯಾವುದೇ ಅಪಾಯವಿರುವುದಿಲ್ಲ. ಗ್ರಹಣದ ಸಂದರ್ಭದಲ್ಲಿ ಆಹಾರ ಸೇವಿಸಿದರೂ ಸಹ ಯಾವುದೇ ಅಪಾಯವಿರುವುದಿಲ್ಲ. ಈ ಗ್ರಹಣವನ್ನು ಭಾರತ ಅಲ್ಲದೇ ರಷ್ಯಾದ ಉತ್ತರ ಭಾಗ ಹೊರತುಪಡಿಸಿ ಏಷ್ಯಾದ ವಿವಿಧ ದೇಶಗಳಲ್ಲೂ ನೋಡಬಹುದು. ಹಾಗೆಯೇ ಯುರೋಪ್, ಆಸ್ಟ್ರೇಲಿಯಾ, ಆಫ್ರಿಕಾ, ದಕ್ಷಿಣ ಅಮೆರಿಕದ ಪೂರ್ವಭಾಗ ಮತ್ತು ಅಂಟಾರ್ಟಿಕಗಳಿಂದ ಸಹ ನೋಡಬಹುದಾಗಿದೆ.

ಜುಲೈ 27, 2018 ರಂದು ಕೆಂಪುಗ್ರಹ ಮಂಗಳ ಕೂಡ ವಿರುದ್ಧ ಸ್ಥಾನದಲ್ಲಿರುತ್ತದೆ. ಅಂದರೆ ಪರಸ್ಪರ ಎದುರು ಬದಿರಾಗಿರುವ ಮಂಗಳ ಮತ್ತು ಸೂರ್ಯರ ನಡುವೆ ಭೂಮಿ ಬರುತ್ತದೆ.

ಇದರಿಂದಾಗಿ ಮಂಗಳ ಗ್ರಹವು ಭೂಮಿಗೆ ಹತ್ತಿರ ಬರುತ್ತದೆ ಮತ್ತು ಮಂಗಳ ಗ್ರಹವು ಮಾಮೂಲಿಗಿಂತಲೂ ಹೆಚ್ಚು ಪ್ರಕಾಶಮಾನವಾಗಿ ಹೊಳೆಯುತ್ತದೆ. ಈ ರೀತಿ ಪ್ರಕಾಶಮಾನವಾಗಿ ಹೊಳೆಯುವ ಮಂಗಳ ಗ್ರಹವು ಜುಲೈ 27–28 ರಂದು ಗ್ರಹಣದ ಚಂದಿರನಿಗೆ ಸಮೀಪದಲ್ಲಿಯೇ ಇರುತ್ತದೆ. ನಾವಿದನ್ನು ಬರಿಗಣ್ಣಿನಿಂದಲೇ ನೋಡಬಹುದಾಗಿರುತ್ತದೆ. ಆದರೆ ಕೆಂಪುಗ್ರಹ ಮಂಗಳ ಜುಲೈ 31 ರಂದು ಭೂಮಿಗೆ ಅತ್ಯಂತ ಸಮೀಪ ಬರುತ್ತದೆ.

ಗ್ರಹಣದ ನಂತರ ಯೆಡಿಯೂರಪ್ಪನವರ ರಾಜ್ಯ ಪ್ರವಾಸ

ರೈತರ ಬವಣೆ, ರಾಜ್ಯ ಸರ್ಕಾರದ ಯೋಜನೆಗಳ ನೈಜ ಸ್ಥಿತಿಗತಿ ಪರಿಶೀಲಿಸಲು ಜುಲೈ 27ರ ಗ್ರಹಣದ ನಂತರ ನಾಲ್ಕು ತಂಡಗಳನ್ನು ರಚಿಸಿ, ರಾಜ್ಯ ಪ್ರವಾಸ ಕೈಗೊಳ್ಳಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದರು. **'ಗ್ರಹಣದಿಂದ ಕೆಟ್ಟ ಪರಿಣಾಮಗಳು ಉಂಟಾಗಲಿವೆ.ಅಲ್ಲಿಯವರೆಗೂ ಶುಭಕಾರ್ಯ ಮಾಡಬಾರದು. ಹಾಗಾಗಿ, ಗ್ರಹಣ ಕಳೆದ ನಂತರವೇ ರಾಜ್ಯ ಪ್ರವಾಸ ಹಮ್ಮಿಕೊಳ್ಳಲಾಗುವುದು'** ಎಂದು ಅವರು ಹೇಳಿದ್ದಾರೆಂದು ವರದಿಯಾಗಿದೆ.

ಆರ್.ಡಿ. ಮೆಲ್ಕಿಯೋರ್

'ಜನಾಂಗೀಯ ನಿಂದನೆಗೆ ಇಲ್ಲವೆನ್ನಿ' ಸಾಕಾರವಾಯಿತೆ?

ಅತ್ಯಂತ ಜನಪ್ರಿಯ ಕ್ರೀಡೆ ದೈತ್ಯ ಕಂಪನಿಗಳ ಹಿಡಿತಕ್ಕೆ

ವಿಶ್ವದ ಅತೀ ದೊಡ್ಡ ಕ್ರೀಡಾ ಪಂದ್ಯಾವಳಿ 21ನೇ ವಿಶ್ವಕಪ್ ಫುಟ್ಬಾಲ್ ಪಂದ್ಯ ರಷ್ಯಾದಲ್ಲಿ ಒಂದು ತಿಂಗಳು ನಡೆದು ಅಂತ್ಯಗೊಂಡಿದೆ. ಅಂತಿಮ ಪಂದ್ಯದಲ್ಲಿ ಫ್ರಾನ್ಸ್ ಕ್ರೊವೇಶಿಯಾವನ್ನು 4–2 ಗೋಲುಗಳಿಂದ ಸೋಲಿಸಿ ವಿಶ್ವಕಪ್ ವಿಜೇತವಾಯಿತು. ಇಡೀ ಫ್ರಾನ್ಸ್ ದೇಶ ಸಂಭ್ರಮದಲ್ಲಿ ಮುಳುಗಿತು. ಈ ಸಂಭ್ರಮಕ್ಕೆ ಕಾರಣವಿದೆ. ಫುಟ್ಬಾಲ್ ವಿಶ್ವದ ಜನಪ್ರಿಯ ಕ್ರೀಡೆ, ಮುಖ್ಯವಾಗಿ ಜನಸಾಮಾನ್ಯರ ಕ್ರೀಡೆ. ಸುಮಾರು 320 ಕೋಟಿ ಜನತೆ ಈ ಪಂದ್ಯಾವಳಿಗಳನ್ನು ವೀಕ್ಷಿಸಿತು.

'ಜನಾಂಗೀಯ ನಿಂದನೆಗೆ ಇಲ್ಲವೆನ್ನಿ' ಎನ್ನುವುದೇ ಈ ಸಲದ ಪಂದ್ಯಾವಳಿಯ ಘೋಷವಾಗಿತ್ತು. ಫ್ರಾನ್ಸ್‌ನ ವಿಜಯ ಈ ಘೋಷವಾಕ್ಯಕ್ಕೆ ಪೂರಕವಾಯಿತು. ವಿಜೇತ ಫ್ರಾನ್ಸ್ ತಂಡದಲ್ಲಿ 15 ಮಂದಿ ಆಫ್ರಿಕನ್ ಸಂಜಾತರಿದ್ದರು. ಮುಖ್ಯವಾಗಿ ಈ ಪಂದ್ಯಾವಳಿಯಲ್ಲಿ ಉದಯಿಸಿದ ಹೊಸತಾರೆ ಕೈಲಾನ್ ಮೆಂಬೆಪೆ, ಅಂತಿಮ ಪಂದ್ಯದಲ್ಲಿ ಶ್ರೇಷ್ಠ ಆಟವಾಡಿದ ಪಾಲ್ ಪೋಗ್ಬಾ, ಸ್ಯಾಮುವೆಲ್ ಟಿಟೆ, ನಿಗೋಲೋ ಕಾಂಟೆ ಎಲ್ಲರೂ ಆಫ್ರಿಕಾ ಸಂಜಾತರು. ಕೈಲಾನ್ ಮೆಂಬೆಪೆ, ಪೀಲೆ ನಂತರ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೋಲು ಗಳಿಸಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರನಾದ. ವೇಗ, ಚುರುಕುತನ, ಕೌಶಲ್ಯ ಹೊಂದಿರುವ ಮೆಂಬೆಪೆ ಅತ್ಯಂತ ಕಿರಿಯ ವಯಸ್ಸಿನ ಜಗತ್ತಿನ 2ನೇ ದುಬಾರಿ ಆಟಗಾರನಾಗಿದ್ದಾನೆ.

ಒಂದು ಕಾಲದಲ್ಲಿ ಪ್ರಪಂಚದ 2ನೇ ಅತಿ ದೊಡ್ಡ ವಸಾಹತು ಸಾಮ್ರಾಜ್ಯಶಾಹಿ ರಾಷ್ಟ್ರವಾಗಿದ್ದು, ಮುಖ್ಯವಾಗಿ ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾ, ಏಷ್ಯಾ ಖಂಡಗಳಲ್ಲಿ ಫ್ರಾನ್ಸ್ ವಸಾಹತುಗಳನ್ನು ಹೊಂದಿತ್ತು. ಆಫ್ರಿಕಾ ಖಂಡದ ಅಲ್ಜೀರಿಯಾ, ಮೊರಾಕ್ಕೋ, ಈಜಿಪ್ಟ್, ಸೆನೆಗಲ್, ಟುನೀಶಿಯಾ ದೇಶಗಳಲ್ಲಿ ಅತೀ ಕ್ರೂರವಾಗಿ ತನ್ನ ಸಾಮ್ರಾಜ್ಯ ವಿಸ್ತರಿಸಿದ ವಿಶ್ವದ 7ನೇ ಸಂಪದ್ಭರಿತ ರಾಷ್ಟ್ರ, ಯುರೋಪ್‌ನ ಪ್ರಬಲ ರಾಜಕೀಯ, ಸಾಂಸ್ಕೃತಿಕ, ಮಿಲಿಟರಿ ಶಕ್ತ ರಾಷ್ಟ್ರವಾಗಿರುವ ಫ್ರಾನ್ಸ್ ಇಂದು ಮುಖ್ಯವಾಗಿ ಆಫ್ರಿಕಾ ವಲಸೆಗಾರರನ್ನು ಅಪ್ಪಿಕೊಂಡಿರುವ ರಾಷ್ಟ್ರವಾಗಿದೆ. ಫುಟ್ಬಾಲ್‌ನಲ್ಲಿ ಇವರೇ ಫ್ರಾನ್ಸ್‌ನ ಶಕ್ತಿಯಾಗಿರುತ್ತಾರೆ. ಇದು ಫ್ರಾನ್ಸ್‌ಗೆ 2ನೇ ವಿಶ್ವಕಪ್ ವಿಜಯ. 1998ರಲ್ಲಿ ಫ್ರಾನ್ಸ್ ವಿಶ್ವಕಪ್ ಗೆದ್ದಾಗಲೂ ಆಫ್ರಿಕನ್ ಸಂಜಾತ ಆಟಗಾರರಾಗಿದ್ದ ಟಿಯರೆ ಹೆನ್ರಿ, ಪ್ಯಾಟ್ರಿಕ್ ವಿಯೇರಾ, ಯೂರಿ ಡಝ್‌ಕಾರ್ಪ್, ಮಾರ್ಷೆಲ್ ಡೆಸೆಲಿ, ಜೈದಿನ್ ಜಿದೀನ್, ಲಿಲಿಯನ್ ತುರಾಮ್ ಎಲ್ಲರೂ ಆಫ್ರಿಕನ್ ಸಂಜಾತರೇ. ಶತಮಾನಗಳ ಕಾಲ ಜನಾಂಗೀಯ ನಿಂದನೆಗೆ ಒಳಗಾದ ಆಫ್ರಿಕನ್ ಸಂಜಾತರು ಇಂದು ಫ್ರಾನ್ಸ್ ತಂಡದಲ್ಲಿ ಮಾತ್ರವಲ್ಲ, ವಿಶ್ವದ ಎಲ್ಲಾ ಪ್ರಬಲ ಟೀಮುಗಳಲ್ಲೂ ಬಹುತೇಕ ದೊಡ್ಡ ಕ್ರೀಡಾಶಕ್ತಿಯಾಗಿದ್ದಾರೆ. ಆದರೆ ವಲಸೆಗಾರರ ಬಗೆಗಿನ ಕ್ರೀಡೆಯಲ್ಲಿದ್ದಷ್ಟು ತೆರೆದ ಮನಸ್ಸು ಸಾಮಾಜಿಕ–ರಾಜಕೀಯವಾಗಿಲ್ಲ. ಕೃತಕವಾಗಿ ಸೃಷ್ಟಿಸಲಾದ ಕರಿಯ–ಮುಸ್ಲಿಂ ಭೀತಿ ಎಲ್ಲೆಡೆ ತಾಂಡವವಾಡುತ್ತಿದೆ.



ಎರಡನೇ ಸ್ಥಾನ ಗಳಿಸಿದ ಕ್ರೊವೇಶಿಯಾ ಹಿಂದೆ ವಿಶ್ವದ ಬಲಿಷ್ಟ ರಾಷ್ಟ್ರವಾಗಿದ್ದ ಯುಗೋಸ್ಲಾವಿಯಾದ ಭಾಗವಾಗಿತ್ತು. 1930ರಿಂದಲೂ ಯುಗೋಸ್ಲಾವಿಯಾ ಫುಟ್ಬಾಲ್‌ನಲ್ಲಿ ಒಂದು ದೈತ್ಯ ಶಕ್ತಿ. ಅವಿಭಾಜಿತ ಯುಗೋಸ್ಲಾವಿಯಾ ಒಟ್ಟು 8 ಬಾರಿ ಹಾಗೂ ಕ್ರೊವೇಶಿಯಾ 4 ಬಾರಿ ವಿಶ್ವಕಪ್ ಅಂತಿಮ ಘಟ್ಟ ತಲುಪಿವೆ. 1992ರ ವಿಭಜನೆಯ ನಂತರದ ಭೀಕರವಾದ ಅಂತರ್ಯುದ್ಧದಲ್ಲಿ ಕೊವೇಶಿಯಾ ನರಳಿತು. ಲಕ್ಷಾಂತರ ಮಂದಿ ಪ್ರಾಣತೆತ್ತರು. ಸಾವಿರಾರು ಮಂದಿ ನಿರಾಶ್ರಿತರಾಗಿ ಯುದ್ಧ ಶಿಬಿರಗಳಲ್ಲಿ ವಾಸವಾಗಿದ್ದರು. ಈ ಯುದ್ಧ ಶಿಬಿರದಲ್ಲಿ ಅರಳಿದ ವಿಶ್ವದ ಉದಯೋನ್ಮುಖ ಆಟಗಾರ ಲೂಕಾ ಮ್ಯಾಡ್ರಿಕ್. ಸಮಾಜವಾದಿ ಬುನಾದಿಯಲ್ಲಿ ಬಲಗೊಂಡ ಕ್ರೀಡಾ ಪರಂಪರೆ ಈಗಲೂ ಕ್ರೊವೇಶಿಯಾದಲ್ಲಿ ಮುಂದುವರೆದಿದೆ. ಈಗ ಕಡಿಮೆ ಸಂಪನ್ಮೂಲ ಹೊಂದಿರುವ ಕೆಲವೇ ಲಕ್ಷ ಜನಸಂಖ್ಯೆಯ ಕ್ರೊವೇಶಿಯಾ ಫುಟ್ಬಾಲ್‌ನಲ್ಲಿ ವಿಶ್ವದಾದ್ಯಂತ ಅಚ್ಚರಿ ಮೂಡಿಸಿ ಸಂಘಟಿತ ಆಟವಾಡಿ 2ನೇ ಸ್ಥಾನ ಗಳಿಸಿತು.

ವಿಶ್ವದ ಬಲಿಷ್ಠ ಕ್ರೀಡಾ ಸಂಘಟನೆ ವಿಶ್ವ ಫುಟ್ಬಾಲ್ ಫೆಡರೇಶನ್ (ಫೀಫಾ) ಇಂದು ಜಗತ್ತಿನ ದೊಡ್ಡ ಬಂಡವಾಳಗಾರರ ಮೂಲಕ ನಡೆಯುತ್ತಿದೆ. ವಿಶ್ವದ ಜನಪ್ರಿಯ ಕ್ರೀಡೆ ಇಂದು ಫೀಫಾಗೆ ಕೋಟ್ಯಾಂತರ ಡಾಲರು ಆದಾಯ ತರುವ ಮೂಲವಾಗಿದೆ. ಈ ಬಾರಿ 320 ಕೋಟಿ ಜನತೆ ವೀಕ್ಷಿಸಿದ ಈ ಪಂದ್ಯಾವಳಿಯಲ್ಲಿ ಜಗತ್ತಿನ ದೈತ್ಯ ಖಾಸಗಿ ಕಾರ್ಪೋರೇಶನ್ ಕಂಪನಿಗಳ ಪಾತ್ರ ಅಗಾಧವಾಗಿದೆ.

ರಷ್ಯಾದಲ್ಲಿ ನಡೆದ ಈ ಸಲದ ಪಂದ್ಯಾವಳಿಯಲ್ಲಿ ಫೀಫಾ ಸುಮಾರು 610 ಕೋಟಿ ಡಾಲರ್ ಆದಾಯ ಗಳಿಸಿದೆ. ವಿಶ್ವಕಪ್ ಪಂದ್ಯಾವಳಿಗಳು ಫೀಫಾದ ಮುಖ್ಯ ಆದಾಯದ ಮೂಲವಾಗಿದೆ. ಮುಖ್ಯವಾಗಿ ದೂರದರ್ಶನ ಪ್ರಸಾರದ ಹಕ್ಕುಗಳ ಮಾರಾಟ, ಜಾಹಿರಾತು ಹಕ್ಕುಗಳ ಮಾರಾಟ ಇಂತಹವುಗಳ ಮೂಲಕವೇ ಫೀಫಾ ಈ ಬಾರಿ 480 ಕೋಟಿ ಡಾಲರ್ ಆದಾಯ ಗಳಿಸಿದೆ. ದೈತ್ಯ ದೂರದರ್ಶನ ಪ್ರಸಾರ ಕಂಪನಿಗಳಾದ ಅಮೆರಿಕಾದ ಫಾಕ್ಸ್ ಹಾಗೂ ಸೋನಿ ಈ ಪ್ರಸಾರದ ಹಕ್ಕುಗಳ ಒಡೆಯರಾಗಿದ್ದಾರೆ. ವಿಶ್ವದ ಜನಪ್ರಿಯ ಜನಸಾಮಾನ್ಯರ ಕ್ರೀಡೆ ಫುಟ್ಬಾಲ್ ಇಂದು ವಿಶ್ವದ ದೈತ್ಯ ಕಂಪನಿಗಳ ಹತೋಟಿಯಲ್ಲಿದೆ. ಫೀಫಾವನ್ನು ಬಲಿಷ್ಟ ಸಂಸ್ಥೆಯಾಗಿ ಬೆಳೆಸಿದ ಕೀರ್ತಿ 1974 ರಿಂದ 1998ರ ವರೆಗೆ ಫೀಫಾದ ಅಧ್ಯಕ್ಷನಾಗಿದ್ದ ಬ್ರೆಜಿಲ್ ಪ್ರಜೆ ಜೊ ಹವೆಲಾಂಜ್ ಗೆ ಸಲ್ಲುತ್ತದೆ. ಜೊತೆಗೆ ಫೀಫಾವನ್ನು ದೈತ್ಯ ಕಾರ್ಪೋರೇಟ್ ಕಂಪೆನಿಗಳ ಹಿಡಿತಕ್ಕೆ ನೀಡಿದ 'ಕೀರ್ತಿ' ಕೂಡಾ ಇವರಿಗೇ ಸಲ್ಲುತ್ತದೆ. ಫೀಫಾವನ್ನು ಬಲಿಷ್ಟ ಸಂಸ್ಥೆಯಾಗಿ ಹಾಗೂ ಆರ್ಥಿಕವಾಗಿ ಸದೃಢವಾಗಿ ಬೆಳೆಸಿದ ಹಾವೆಲಾಂಜ್ ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿ 1998ರಲ್ಲಿ ಅಧಿಕಾರ ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**